ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 2 ಭಾನುವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 47 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಕ್ರಮ ಸಂಖ್ಯೆ	ಅಭ್ಯರ್ಥಿ ಹೆಸರು	ಭಾವಚಿತ್ರ	ಮತದಾನದ ಕ್ರಮ
2	ಕೆ.ವಿವೇಕಾನಂದ K.VIVEKANANDA		1



ಮೈಸೂರು ಮಿತ್ರ

ಭಾನುವಾರ 2 ಜೂನ್ 2024

ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲೆಂದು ಪ್ರಾರ್ಥಿಸಿ 101 ಗಣಪತಿ ದೇವಸ್ಥಾನದಲ್ಲಿ ಪೂಜೆ




ಮೈಸೂರು, ಜೂ. 1– ಮೈಸೂರಿನ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ಚಾಮುಂಡೇಶ್ವರಿ ಸ್ನೇಹ ಬಳಗದ ವತಿಯಿಂದ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದ ಚುಕ್ಕಾಣಿ ಹಿಡಿಯಲಿ ಎಂದು ವಿಘ್ನ ನಿವಾರಕ ವಿಘ್ನೇಶ್ವರನಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಕಾಂಗ್ರೆಸ್ ಮುಖಂಡ ಪ್ರದೀಪ್‌ಕುಮಾರ್ ಮಾತನಾಡಿ, ಸಿಎಂ ಸಿದ್ದರಾಮಯ್ಯ ತವರೂರಿನಲ್ಲಿ ಮೈಸೂರು–ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಸುನಿಲ್ ಬೋಸ್ ಸೇರಿದಂತೆ ಕರ್ನಾಟಕದಲ್ಲಿ 20ಕ್ಕೂ ಹೆಚ್ಚು ಸ್ಥಾನಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ. ಭವಿಷ್ಯದ ಭಾರತಕ್ಕೆ ಈ ಬಾರಿಯ ಲೋಕಸಭಾ ಚುನಾವಣೆ ಅತ್ಯಂತ ನಿರ್ಣಾಯಕ. ಇದು ಸುಳ್ಳು ಮತ್ತು ಸತ್ಯ, ನ್ಯಾಯ ಹಾಗೂ ಅನ್ಯಾಯದ ನಡುವಿನ ಧರ್ಮಯುದ್ಧ. 2024ರಲ್ಲಿ ದೇಶದಲ್ಲಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಅಧಿಕಾರ ಹಿಡಿಯುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜಿ ರಾಘವೇಂದ್ರ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ಮಂಚೇಗೌಡನಕೊಪ್ಪಲು ರವಿ, ವರುಣ ಮಹಾದೇವ್, ಮಹದೇವ್ ಪಾಂಡೆ, ರವಿಚಂದ್ರ, ಹರೀಶ್‌ಕುಮಾರ್, ಮಹದೇವ್, ಕಡಕೊಳ ಶಿವಲಿಂಗ, ಹರೀಶ್‌ನಾಯ್ಡು, ರಾಜೇಶ್, ಲೋಕೇಶ್, ನವೀನ್ ಕೆಂಪಿ, ರಾಜೇಶ್ ಪಳನಿ ಇನ್ನಿತರರು ಉಪಸ್ಥಿತರಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಮತಯಾಚನೆ



ಮೈಸೂರು ದಕ್ಷಿಣ ಶಿಕ್ಷಕರ ಕ್ಷೇತ್ರದ ಜಾ.ದಳ–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರ ಪರವಾಗಿ ಜೆಡಿಎಸ್ ಚಾಮರಾಜಕ್ಷೇತ್ರದ ಅಧ್ಯಕ್ಷ ಮಂಜಣ್ಣ, ಕುಂಬಾರಕೊಪ್ಪಲಿನ 5ನೇ ವಾರ್ಡಿನ ಜೆಡಿಎಸ್ ಅಧ್ಯಕ್ಷ ಶರತ್ ಮತಯಾಚಿಸಿದರು. ಈ ವೇಳೆ ಮಾಜಿ ನಗರಪಾಲಿಕೆ ಸದಸ್ಯ ಜಯರಾಮ್, ಬೋರೇಗೌಡ ಇನ್ನಿತರರಿದ್ದಾರೆ.

ಪರಿಷತ್‌ನಲ್ಲಿ ಶಿಕ್ಷಕರ ಧ್ವನಿಯಾಗಿದ್ದೇನೆ; ಮತ್ತೊಮ್ಮೆ ಗೆಲ್ಲಿಸಿ

ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡರು ಮಾತನಾಡಿದರು.

ಮೈಸೂರು, ಜೂ.1(ಜಿಎ)–ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ನನ್ನನ್ನು ನಾಲ್ಕು ಬಾರಿ ಆಯ್ಕೆ ಮಾಡಿದ್ದಾರೆ. ಈ ಅವಧಿಯಲ್ಲಿ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಿದ್ದೇನೆ. ನನ್ನ ಸೇವೆಯನ್ನು ಪರಿಗಣಿಸಿ ನನ್ನನ್ನು ಮತ್ತೊಮ್ಮೆ ಗೆಲ್ಲಿಸಿ ಎಂದು ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ಬಾರಿ ಗೆದ್ದಾಗಲೂ ನಾನು ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಿದ್ದೇನೆ. ಕೆಲ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿವೆ, ಆದರೆ ಕೆಲ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ. ನನ್ನನ್ನು ಆಯ್ಕೆ ಮಾಡಿದ ಶಿಕ್ಷಕ ಸಮುದಾಯಕ್ಕೆ ಅಪಕೀರ್ತಿ ತರುವಂತಹ ಕೆಲಸ ಮಾಡಿಲ್ಲ. ನಾಲ್ಕು ಬಾರಿ ಆಯ್ಕೆಗೊಂಡಾಗಲೂ ವಿರೋಧ ಪಕ್ಷದಲ್ಲಿ ಇದ್ದುಕೊಂಡು ಕೆಲಸ ಮಾಡಿದ್ದೇನೆ. ಆದರೆ, ಈಗ ಸುವರ್ಣಾವಕಾಶ ಆಡಳಿತ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ. ಇದರಿಂದ ಶಿಕ್ಷಕರ ಮತ್ತಷ್ಟು ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಬಹುದು ಎಂದರು.

ಆರನೇ ವೇತನ ಆಯೋಗವನ್ನು ಸಿದ್ದರಾಮಯ್ಯ ಅವರು ಈ ಹಿಂದೆ ಯಥಾವತ್ತಾಗಿ ಜಾರಿಗೊಳಿಸಿದ್ದಾರೆ. ಏಳನೇ ವೇತನ ಆಯೋಗ ಜಾರಿ ಭರವಸೆ ಇದೆ. ಬಡ್ತಿ ಪಡೆದ ಶಿಕ್ಷಕರಿಗೆ ಕಡಿಮೆ ವೇತನ ದೊರೆಯುತ್ತಿದೆ. ಹಳೇ ಪಿಂಚಣಿ ವ್ಯವಸ್ಥೆ ಜಾರಿಗೆ ತರಬೇಕಾಗಿದೆ. ಅನುದಾನಿತ ಶಿಕ್ಷಣ ಸಂಸ್ಥೆಯ ಬೋಧಕ, ಬೋಧಕೇತರರಿಗೂ ಆರೋಗ್ಯ ವಿಮೆ ಮೊದಲಾದವನ್ನು ದೊರಕಿಸಿಕೊಡಬೇಕಾಗಿದೆ. ಹೀಗಾಗಿ ನಾನು ಆಡಳಿತ ಪಕ್ಷದಿಂದ ಆಯ್ಕೆಯಾದರೆ ಇದು ಸುಲಭವಾಗುತ್ತದೆ. ಆದ್ದರಿಂದ ನನ್ನ ಅನುಭವ, ಇದುವರೆಗೆ ಈ ವರ್ಗಕ್ಕೆ ಮಾಡಿರುವ ಹೋರಾಟ, ದೊರೆತ ಪ್ರತಿಫಲ ಗಮನಿಸಿ ತಮ್ಮನ್ನು ಇನ್ನೊಮ್ಮೆ ಚುನಾಯಿಸಬೇಕೆಂದು ಕೋರಿದರು.

ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಮಾತನಾಡಿ, ಶಿಕ್ಷಕರ ಬೇಡಿಕೆ ಈಡೇರಿಸಲು ಇದು ಸಕಾಲ. ಸಿಎಂ ಸಿದ್ದರಾಮಯ್ಯ ಅವರು ಶಿಕ್ಷಣ, ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಇನ್ನು ಮರಿತಿಬ್ಬೇಗೌಡರು ಸದನದ ಒಳಗೆ, ಹೊರಗೆ ಈ ನಿಟ್ಟಿನಲ್ಲಿ ಹೋರಾಟ ನಡೆಸಿದ್ದಾರೆ. ಹೀಗಾಗಿ ಇನ್ನಷ್ಟು ಹೋರಾಟ ನಡೆಸಲೆಂದು ಮತ್ತೆ ಪ್ರಥಮ ಪ್ರಾಶಸ್ತ್ಯ ಮತ ನೀಡಬೇಕೆಂದು ಶಿಕ್ಷಕ ವೃಂದಕ್ಕೆ ಮನವಿ ಮಾಡಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿಗಳ ಪರ ಸದಾ ಇದೆ. ಹೀಗಾಗಿ ಮರಿತಿಬ್ಬೇಗೌಡ ಆಯ್ಕೆಯಾದರೆ ಇನ್ನಷ್ಟು ಅನುಕೂಲವಾಗಲಿದೆ. ಆದ್ದರಿಂದ ಈ ವರ್ಗದ ಮತದಾರರು ಮರೆಯದೇ ಮರಿತಿಬ್ಬೇಗೌಡರಿಗೆ ಪ್ರಥಮ ಪ್ರಾಶಸ್ತ್ಯ ಮತ ನೀಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖಂಡರಾದ ಕೆ.ವಿ.ಮಲ್ಲೇಶ್, ಪ್ರೊ.ಜಯರಾಮಯ್ಯ ಉಪಸ್ಥಿತರಿದ್ದರು.

> “ಹಳೆಯ ಪಿಂಚಣಿ ಯೋಜನೆ ಮರು ಜಾರಿಗೆ ಒತ್ತಾಯಿಸಿ ಹೋರಾಟ ಮಾಡುತ್ತಿದ್ದೇನೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ಕಾರಣ ಶಿಕ್ಷಕರ ಬಹುಕಾಲದ ಬೇಡಿಕೆಗಳನ್ನು ಈಡೇರಿಸುವ ಅವಕಾಶವಿದೆ. ಹಾಗಾಗಿ ನನ್ನ ಸೇವೆಯನ್ನು ಪರಿಗಣಿಸಿ ಮತ್ತೊಮ್ಮೆ ಗೆಲ್ಲಿಸಬೇಕು. ಕಳೆದ 24 ವರ್ಷಗಳ ಅವಧಿಯಲ್ಲಿ ನಾನು ಶಿಕ್ಷಕ ವೃಂದ, ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಕ್ಷೇತ್ರಕ್ಕಾಗಿ ನಡೆಸಿದ ಹೋರಾಟ, ಅವುಗಳಿಂದ ದೊರೆತ ಪ್ರತಿಫಲ ಗಮನಿಸಿ ತಮಗೆ ಮೊದಲ ಪ್ರಾಶಸ್ತ್ಯ ಮತ ನೀಡುವರು ವಿಶ್ವಾಸವಿದೆ. –ಮರಿತಿಬ್ಬೇಗೌಡ

ಮಾಜಿ ಪ್ರಧಾನಿ ದೇವೇಗೌಡರು, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಂದ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ

ಮೈಸೂರು, ಜೂ.1(ಜಿಎ)–ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಈ ಹಿಂದೆ ರಾಜ್ಯದ ಮುಖ್ಯಮಂತ್ರಿ ಆಗಿದ್ದ ವೇಳೆ ಸುಮಾರು ಒಂದು ಲಕ್ಷ ಶಿಕ್ಷಕರನ್ನು ನೇಮಕ ಮಾಡಿದ್ದರು. ಹೆಚ್.ಡಿ.ಕುಮಾರಸ್ವಾಮಿ ಸಹ ಶಿಕ್ಷಣ ಕ್ಷೇತ್ರಕ್ಕೆ ಅನೇಕ ಕೊಡುಗೆ ನೀಡಿದ್ದಾರೆ. ಹೀಗಾಗಿ ಜೆಡಿಎಸ್ ಸದಾ ಶಿಕ್ಷಕರ ಪರ ಇದ್ದು, ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಶಿಕ್ಷಕರು ಈ ಬಾರಿಯ ದಕ್ಷಿಣ ಶಿಕ್ಷಕರ ಕ್ಷೇತ್ರದ ಪರಿಷತ್ ಚುನಾವಣೆಯಲ್ಲಿ ಆಯ್ಕೆ ಮಾಡಿದಲ್ಲಿ, ಇನ್ನಷ್ಟು ಅನುಕೂಲ ಕಲ್ಪಿಸುವ ವಿಶ್ವಾಸವಿದೆ ಎಂದು ಜೆಡಿಎಸ್ ವಕ್ತಾರ ಎನ್.ಆರ್. ರವಿಚಂದ್ರೇಗೌಡ ತಿಳಿಸಿದರು.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದರ ಗೆಲ್ಲಿಸಲು ಮನವಿ



ವಿವೇಕಾನಂದ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವೇಗೌಡರು ಶಿಕ್ಷಕರ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸಿದ ಹೆಗ್ಗಳಿಕೆ ಹೊಂದಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿ ಅವರು ಈ ಹಿಂದೆ ಬಿಜೆಪಿ, ಜೆಡಿಎಸ್ ಮೈತ್ರಿ ಸರ್ಕಾರದ ಸಿಎಂ ಆಗಿದ್ದ ವೇಳೆ 4,466 ಕೋಟಿ ರೂ.ಗಳನ್ನು ಶಿಕ್ಷಣ ಕ್ಷೇತ್ರಕ್ಕೆ ಹಂಚಿಕೆ ಮಾಡಿದ್ದರು. ಏಳನೇ ತರಗತಿಯಲ್ಲಿ ಉತ್ತೀರ್ಣರಾದ ಮತ್ತು ಎಂಟನೇ ತರಗತಿಗೆ ದಾಖಲಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಎಲ್ಲಾ ಹುಡುಗಿಯರಿಗೆ ಸರ್ಕಾರಿ ವೆಚ್ಚದಲ್ಲಿ ಬೈಸಿಕಲ್ ವಿತರಿಸಿದರು. ಇದೇ ರೀತಿ ಜೆಡಿಎಸ್ ಸದಾ ಶಿಕ್ಷಣ ಕ್ಷೇತ್ರಕ್ಕೆ ಅನುಕೂಲ ಕಲ್ಪಿಸಿದೆ. ಆದ್ದರಿಂದ ಮೈತ್ರಿ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ವಕ್ತಾರ ಮೋಹನ್, ಆರ್.ಮುದ್ದುರಾಜ್, ಮಂಜುನಾಥ್ ಉಪಸ್ಥಿತರಿದ್ದರು.

ಯುವಕನ ಹತ್ಯೆ; ನಾಲ್ವರ ಬಂಧನ

ಮೈಸೂರು, ಜೂ.1(ಎಸ್‌ಪಿಎನ್)– ಯುವಕನನ್ನು ಹತ್ಯೆ ಮಾಡಿದ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉದಯಗಿರಿ ಬಡಾವಣೆಯ ಶಾದಿಲ್, ಶಹಬಾಜ್, ಶೋಯಬ್ ಮತ್ತು ಸಾಹಿಲ್ ಬಂಧಿತರಾಗಿದ್ದು, ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಈ ನಾಲ್ವರು ಸೇರಿ ಉದಯಗಿರಿ ಬಳಿಯ ಶಾಂತಿನಗರ ನಿವಾಸಿ ಜಾವೀದ್ ಖಾನ್ ಎಂಬುವರ ಪುತ್ರ ಅರ್ಬಾಜ್ ಖಾನ್ (18)ನನ್ನು ಗುರುವಾರ ರಾತ್ರಿ ಕೊಲೆ ಮಾಡಿ ಪರಾರಿಯಾಗಿದ್ದಾರೆ ಎಂದು ಮೃತರ ಪೋಷಕರು ದೂರು ನೀಡಿದ್ದರು. ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಲ್ಲಿ ನಗನಾಣ್ಯ ಕಳವು

ಮೈಸೂರು, ಜೂ.1(ಎಸ್‌ಪಿಎನ್)– ಮನೆಯ ಬೀರುವಿನಲ್ಲಿಟ್ಟಿದ್ದ 3 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವಾಗಿದೆ. ನಗರದ ಅಶೋಕಪುರಂನಲ್ಲಿನ ಡಿ.ಮಹದೇವಯ್ಯ ಅವರ ಮನೆಯಲ್ಲಿ ಈ ಘಟನೆ ನಡೆದಿದ್ದು, ಮನೆಯ ಬೀರುವಿನಲ್ಲಿ 3 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ಇಟ್ಟಿದ್ದರು. ಮೇ. 25 ರಂದು ಬೀರು ತೆಗೆದು ನೋಡಿದಾಗ ಯಾವುದೇ ಚಿನ್ನಾಭರಣ ಇರಲಿಲ್ಲ. ಈ ಸಂಬಂಧ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಡಿ.ಮಹದೇವಯ್ಯ ಪ್ರಕರಣ ದಾಖಲಿಸಿದ್ದಾರೆ.

ಮರಿತಿಬ್ಬೇಗೌಡರಿಗೆ ಎಸ್‌ಸಿ, ಎಸ್‌ಟಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಬೆಂಬಲ

ಮೈಸೂರು, ಜೂ.1(ಜಿಎ)–ಮೈಸೂರು ವಿಭಾಗ ಮಟ್ಟದ ಎಸ್‌ಸಿ, ಎಸ್‌ಟಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಬೆಂಬಲಿಸಲು ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಈ ವಿಷಯ ತಿಳಿಸಿ, ಇತ್ತೀಚೆಗೆ ವಿಭಾಗ ಮಟ್ಟದ ಎಸ್‌ಸಿ, ಎಸ್‌ಟಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ನಡೆದ ಸಭೆಯಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರನ್ನು ಬೆಂಬಲಿಸಲು ನಿರ್ಧರಿಸಿದೆ ಎಂದರು.

ಮರಿತಿಬ್ಬೇಗೌಡರು ಕಳೆದ ನಾಲ್ಕು ಬಾರಿಯೂ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪರವಾಗಿ ಕೆಲಸ ಮಾಡಿದ್ದಾರೆ. ಹಿಂದಿನಿಂದಲೂ ಸಾಮಾಜಿಕವಾಗಿ ಎಲ್ಲಾ ಸಮುದಾಯಗಳ ಪರವಾಗಿ ನಿಂತಿದ್ದಾರೆ. ಅದರಲ್ಲೂ ಈ ಭಾಗದಲ್ಲಿ 135 ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸಮಾನವಾಗಿ ಅನುದಾನ ಹಂಚಿಕೆ ಮಾಡಿದ್ದಾರೆ. ತಮ್ಮ ವ್ಯಾಪ್ತಿಯಲ್ಲಿ ಆದಷ್ಟು ನೆರವು ನೀಡುತ್ತಿದ್ದಾರೆ. ಈ ಬಾರಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧೆಗಿಳಿದಿರುವ ಅವರಿಗೆ ಮತ್ತೆ ಮತ ನೀಡುವ ಮೂಲಕ ಅವರನ್ನು ಗೆಲ್ಲಿಸಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಚೆನ್ನಮಲ್ಲಯ್ಯ, ಸೌಕಯ್ಯ ಉಪಸ್ಥಿತರಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಮತಯಾಚನೆ



ಮೈಸೂರು ದಕ್ಷಿಣ ಶಿಕ್ಷಕರ ಕ್ಷೇತ್ರದ ಜಾ.ದಳ–ಬಿಜೆಪಿ ಮೈತ್ರಿ ಅಭ್ಯರ್ಥಿ ಕೆ.ವಿವೇಕಾನಂದರ ಪರವಾಗಿ ಮಾಜಿ ಶಾಸಕ ಹಾಗೂ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಸರಸ್ವತಿಪುರಂನ ಟಿಟಿಎಲ್ ಕಾಲೇಜಿನಲ್ಲಿ ಮತ ಯಾಚಿಸಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಆರ್.ಲಿಂಗಪ್ಪ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಚಾಮರಾಜ ಬಿಜೆಪಿ ಅಧ್ಯಕ್ಷ ದಿನೇಶ್‌ಗೌಡ, ಶಿವಕುಮಾರ್ ಇದ್ದಾರೆ.

ಜೂ.8 ಮೈಸೂರಲ್ಲಿ ಒಡಿಸ್ಸಿ ಉತ್ಸವ

ಮೈಸೂರು, ಜೂ.1(ಜಿಎ)–ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂತರರಾಷ್ಟ್ರೀಯ ಒಡಿಸ್ಸಿ ಫೋರಂ, ಭುವನೇಶ್ವರ ರುದ್ರನೃತ್ಯ ಯೋಗಶಾಲೆ ವತಿಯಿಂದ ಜೂ.8ರಂದು ಸಂಜೆ 6ಗಂಟೆಗೆ ಒಡಿಸ್ಸಿ ಉತ್ಸವ ಏರ್ಪಡಿಸಲಾಗಿದೆ ಎಂದು ರುದ್ರನೃತ್ಯ ಯೋಗಶಾಲೆ ನಿರ್ದೇಶಕಿ ಸಿಂಧು ಕಿರಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಮೂರನೇ ಬಾರಿಗೆ ಒಡಿಸ್ಸಿ ಉತ್ಸವ ಆಯೋಜಿಸುತ್ತಿದ್ದು, ಮುಖ್ಯ ಅತಿಥಿಗಳಾಗಿ ಪುರಿಜಗನ್ನಾಥ ಸಾಂಸ್ಕೃತಿಕ ಕಲ್ಯಾಣ ಟ್ರಸ್ಟ್‌ನ ಅಧ್ಯಕ್ಷ ಘನ ಶ್ಯಾಮ ಧಾನ್, ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ವಿವಿಯ ನಿವೃತ್ತ ಪ್ರಾಧ್ಯಾಪಕರಾದ ಡಾ.ಎಂ.ಎಸ್.ಕೃಷ್ಣಮೂರ್ತಿ ಮತ್ತು ಹಿಂದೂಸ್ತಾನಿ ಗಾಯಕಿ ರೀನಾ ಮುಖರ್ಜಿ ಆಗಮಿಸಲಿದ್ದು, ಉತ್ಸವದಲ್ಲಿ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮೆಚ್ಚುಗೆ ಪಡೆದಿರುವ ಕಲಾವಿದರು ಪಾಲ್ಗೊಳ್ಳಲಿದ್ದಾರೆ ಎಂದರು.

ರೈತರಿಗೆ ಪರ್ಯಾಯ ಬೆಳೆ ವ್ಯವಸ್ಥೆ ಮಾಡಿ; ತಂಬಾಕು ನಿಷೇಧಿಸಿ

ವಿಶ್ವ ತಂಬಾಕುರಹಿತ ಜಾಗೃತಿ ದಿನಾಚರಣೆಯಲ್ಲಿ ಡಾ. ಎಸ್.ಪಿ.ಯೋಗಣ್ಣ ಸಲಹೆ



ಮೈಸೂರು, ಜೂ. 1– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ ಹಾಗೂ ಸುಯೋಗ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸಮೂಹಗಳ ಸಂಯುಕ್ತಾಶ್ರಯದಲ್ಲಿ ಕುವೆಂಪುನಗರ ಕಾಂಪ್ಲೆಕ್ಸ್‌ನಲ್ಲಿ ವಿಶ್ವ ತಂಬಾಕುರಹಿತ ಜಾಗೃತಿ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಕುವೆಂಪುನಗರ ಪೊಲೀಸ್ ಠಾಣೆ ಪೊಲೀಸ್ ಅಧಿಕಾರಿ ಎಸ್.ಪಿ. ಗೋಪಾಲ್ ಮಾತನಾಡಿ, ಧೂಮಪಾನವು ಸೇವಿಸುವವರಿಗೆ ಹಾನಿ ಉಂಟುಮಾಡುವುದಲ್ಲದೇ ಅವರ ಅಕ್ಕಪಕ್ಕದವರಿಗೂ ದುಷ್ಪರಿಣಾಮ ಬೀರುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಭಾರತದಲ್ಲಿ ಸುಮಾರು 15ಕೋಟಿ ಧೂಮಪಾನಿಗಳಿದ್ದು, ಧೂಮಪಾನದಿಂದ ರಾಷ್ಟ್ರಾದ್ಯಂತ ವಾರ್ಷಿಕ 50ಲಕ್ಷ, ಕರ್ನಾಟಕದಲ್ಲಿ 10ಲಕ್ಷ ಜನ ಸಾವಿಗೀಡಾಗುತ್ತಿರುವುದು ಆತಂಕಕಾರಿ ಎಂದು ವಿಷಾದಿಸಿದ ಅವರು, ಜನರಲ್ಲಿ ಹೆಚ್ಚುತ್ತಿರುವ ಕ್ಯಾನ್ಸರ್, ಹೃದಯಾಘಾತ, ಶ್ವಾಸಕೋಶದ ಹಾನಿ ಮುಂತಾದ ಕಾಯಿಲೆಗಳಿಗೆ ತಂಬಾಕು ಸೇವನೆಯೇ ಪ್ರಮುಖ ಕಾರಣವಾದುದರಿಂದ ಸರ್ಕಾರವು ತಂಬಾಕು ಬೆಳೆಯನ್ನೇ ನಿಷೇಧಿಸಬೇಕೆಂದು ಕರೆಯಿತ್ತರು. ಅನಂತರ ತಂಬಾಕು ಬೆಳೆಗೆ ಪರ್ಯಾಯ ಬೆಳೆ ವ್ಯವಸ್ಥೆ ಮಾಡಿಕೊಡುವ ಮೂಲಕ ರೈತರಿಗೆ ನೆರವಾಗಬೇಕೆಂದು ಸಲಹೆ ನೀಡಿದರು. ರೈತರು ಪರ್ಯಾಯ ಬೆಳೆಗೆ ಹೊಂದಿಕೊಳ್ಳುವವರೆಗೆ ಅವರಿಗೆ ಆರ್ಥಿಕ ಚೈತನ್ಯ ತುಂಬಲು ಸಹಾಯಧನ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಇದೇ ವೇಳೆ ಹಾಜರಿದ್ದ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಜೀವನದಲ್ಲಿ ತಂಬಾಕು ಸೇವಿಸದಂತೆ ಡಾ.ಯೋಗಣ್ಣ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ರಾಮಕೃಷ್ಣನಗರದ ಪ್ರಮುಖ ರಸ್ತೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ಕಾಲ್ನಡಿಗೆ ಜಾಥಾ ನಡೆಸಿ, ತಂಬಾಕು ವಿರುದ್ಧ ಘೋಷಣೆ ಕೂಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ವೈದ್ಯಕೀಯ ನಿರ್ದೇಶಕ ಡಾ.ಆರ್. ರಾಜೇಂದ್ರಪ್ರಸಾದ್, ನಿರ್ದೇಶಕಿ ಡಾ.ಸೀಮಾ ಯೋಗಣ್ಣ ಮುಂತಾದವರು ಉಪಸ್ಥಿತರಿದ್ದರು.

ಕತ್ತಿಮುನೇಶ್ವರ ಸ್ವಾಮಿ ದೇವಸ್ಥಾನ ಹಬ್ಬ



ಮೈಸೂರು, ಜೂ. 1– ನಗರದ ಸಿಲ್ಕ್ ಫ್ಯಾಕ್ಟರಿ ಎದುರಿನ ರಾಜೀವ್ ಗಾಂಧಿ ಕಾಲೋನಿಯ ಕತ್ತಿಮುನೇಶ್ವರ ಸ್ವಾಮಿ ಹಾಗೂ ಆದಿಶಕ್ತಿ ಪಟ್ಟಲಮ್ಮ ದೇವಸ್ಥಾನದ ಹಬ್ಬದ ಅಂಗವಾಗಿ ಜಾನಪದ ಕಲಾ ತಂಡಗಳ ಮೆರವಣಿಗೆ ನಡೆಯಿತು.

ಕೋಟೆ ಮಾರಮ್ಮ ದೇವಸ್ಥಾನದಿಂದ ಆರಂಭಗೊಂಡ ಮೆರವಣಿಗೆಯು ರಾಜೀವ್ ಗಾಂಧಿ ಕಾಲೋನಿಯವರೆಗೆ ಸಾಗಿತು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ತಮಟೆ, ನಗಾರಿ, ಪಟ ಕುಣಿತ, ಗಾರುಡಿ ಗೊಂಬೆ, ಕೀಲು ಕುದುರೆ ತಂಡಗಳು ಭಾಗವಹಿಸಿದ್ದವು. ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನಗಾರಿ ಹಾಗೂ ತಮಟೆ ಸಾಂಸ್ಕೃತಿಕ ಕಲಾವೃಂದ ಅಧ್ಯಕ್ಷ ರಾಜಣ್ಣ ಹಾಗೂ ಪದಾಧಿಕಾರಿಗಳು ನೇತೃತ್ವ ವಹಿಸಿಕೊಂಡಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಡಾ.ಬಿ.ಆರ್. ಅಂಬೇಡ್ಕರ್ ಆದಿ ದ್ರಾವಿಡ ಯುವಕರ ಅಭಿವೃದ್ಧಿ ಮಹಾಸಂಘದ ಸಹಕಾರದೊಂದಿಗೆ ನಡೆದ ಹಬ್ಬದಲ್ಲಿ ರಾಜೀವ್ ಗಾಂಧಿ ಕಾಲೋನಿಯ ಯಜಮಾನರು, ಛೇರ್ಮನ್ನರು, ಮಹಾಸಂಘದ ಪದಾಧಿಕಾರಿಗಳು ಹಾಗೂ ಮಹಿಳಾ ಸಂಘಟನೆಯ ಪದಾಧಿಕಾರಿಗಳು ಹಾಜರಿದ್ದರು.


ನಿಧನ

ನಿವೃತ್ತ ಮುಖ್ಯ ಉಪಾಧ್ಯಾಯ ಎಸ್.ಎಸ್.ರಾಜು



ಸಾಗರೆ, ಜೂ. 1–ಸರಗೂರು ತಾಲೂಕಿನ ಸಾಗರೆ ಗ್ರಾಮದ ನಿವೃತ್ತ ಮುಖ್ಯ ಉಪಾಧ್ಯಾಯರು ಹಾಗೂ 24 ಮನೆ ತೆಲುಗುಶೆಟ್ಟರ ಜನಾಂಗದ ಹಿರಿಯ ಮುಖಂಡರಾದ ಎಸ್.ಎಸ್.ರಾಜು (71) ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ ಸಾಗರೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.06.2024 ಭಾನುವಾರ, ಮಳೆ ನಕ್ಷತ್ರ: ರೋಹಿಣಿ, 25.05.2024ರಿಂದ 07.06.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ರೇವತಿ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

- **ಮಾನಸಿನಗರ ನಿವಾಸಿಗಳ ಹಾಗೂ ನಿವೇಶನದಾರರ ಹಿತರಕ್ಷಣಾ ಸಂಘ** : ಮಾನಸಿನಗರದ ಹೆಬ್ಬಾಗಿಲಿನಲ್ಲಿ ಸ್ವಚ್ಛತಾ ಆಂದೋಲನ ಕಾರ್ಯಕ್ರಮ, ಬೆಳಗ್ಗೆ 7ಕ್ಕೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಆಸ್ಪತ್ರೆ** : ಸಂಧಿವಾತ ರೋಗಗಳಲ್ಲಿನ ಸವಾಲುಗಳು ಕುರಿತು ಮುಂದುವರಿದ ವೈದ್ಯಕೀಯ ಶಿಕ್ಷಣ, ಅತಿಥಿಗಳು: ಜೆಎಸ್‌ಎಸ್ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ.ಬಸವನಗೌಡಪ್ಪ, ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 10ಕ್ಕೆ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್** : ಅಕ್ಯೂಪ್ರೆಶರ್, ಸುಜೋಕ್, ಅಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: 222, ಲೀಲಾವತಿ ನಾಯ್ಡು, ಅರವಿಂದನಗರ, ಬೆಳಗ್ಗೆ 10.30ಕ್ಕೆ.
- **ಜನಸೇವಕ ಯುವ ಬ್ರಿಗೇಡ್** : ಮೈಸೂರು ನಗರ ಮತ್ತು ಜಿಲ್ಲೆಯ ಸರ್ಕಾರಿ ಶಾಲೆಯಲ್ಲಿ 2023 ಮತ್ತು 24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕನ್ನಡ ಅಂಕ ವೀರ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ಆರ್.ಎಚ್.ಪವಿತ್ರ, ಸಹ ಪ್ರಾಧ್ಯಾಪಕ ಪ್ರೊ. ಶ್ರೀನಿವಾಸಯ್ಯ, ಆರಕ್ಷಕ ಉಪನಿರೀಕ್ಷಕ ಮಹೇಶ್, ಬಿಜೆಪಿ ಹಿರಿಯ ಮುಖಂಡರಾದ ಗೋಪಾಲ್ ರಾವ್, ಕವಿಶ್‌ಗೌಡ, ಅರುಣ್‌ಕುಮಾರ್‌ಗೌಡ, ಉದ್ಯಮಿ ಮೋನಿಕಾ, ಪ್ರನಮ್ಯ ಎಜುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಸವಿತಾ ಪುಟ್ಟೇಗೌಡ, ಸ್ಥಳ: ರೂಪಾನಗರದಲ್ಲಿರುವ ಗಣಪತಿ ದೇವಸ್ಥಾನದ ಸಭಾಂಗಣ, ಬೆಳಗ್ಗೆ 9.30ಕ್ಕೆ.
- **ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ:** ದಿವಂಗತ ಪಂಡಿತ್ ಕೆ.ಎಸ್.ಹಡಪದ ಅವರ 18ನೇ ಸ್ಮರಣಾರ್ಥ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪುರಸ್ಕಾರ ಹಾಗೂ ಸಂಗೀತ ಕಾರ್ಯಕ್ರಮ, ಸಂಜೆ 5.30ಕ್ಕೆ ಎಸ್‌ಜಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಮೂಹ ತಬಲಾ ವಾದನ, ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ: ರಘುಲೀಲ ಸಂಗೀತ ಮಂದಿರ ನಿರ್ದೇಶಕರಾದ ಶ್ರೀಮತಿ ಸುನೀತ ಚಂದ್ರಕುಮಾರ್, ಅಧ್ಯಕ್ಷತೆ: ಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಮುಖ್ಯ ಅತಿಥಿಗಳು: ರಾಷ್ಟ್ರೀಯ ಕುಸ್ತಿಪಟು ಶಂಕರ್ ಎಸ್.ಕಳಿಗೊನ್ನವರ್, ಅರಿವು ಶಾಲೆ ಮುಖ್ಯ ಶಿಕ್ಷಕ ಡಾ.ಎಂ.ಜಿ. ಚೇತನ, ಪ್ರಶಸ್ತಿ ಪ್ರದಾನ: ಹಿರಿಯ ತಬಲಾ ಕಲಾವಿದ ಶಿವಪುತ್ರಪ್ಪ ಹೂಗಾರ, ಸಂಜೆ 7ಕ್ಕೆ ಪಂಡಿತ್ ಕೆ.ಎಸ್. ಹಡಪದ ಪ್ರಶಸ್ತಿ ಪುರಸ್ಕೃತರಾದ ಬಿ.ಎಸ್.ವೇಣುಗೋಪಾಲರಾಜು ಅವರಿಂದ ತಬಲಾ ಸೋಲೋ, ಸ್ಥಳ:ಗಾನಭಾರತೀ (ರಮಾ ಗೋವಿಂದ ಕಲಾವೇದಿಕೆ), ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ.ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ –ಡಾ.ಕಬ್ಬಿನಾಲೆ ವಸಂತ ಭಾರಧ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ವಿಶ್ವ ಪರಿಸರ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ. ಪರಿಸರ ಮತ್ತು ಆರೋಗ್ಯ ಕುರಿತು ಭಾರತೀಯ ಶಿಶುವೈದ್ಯರ ಸಂಘದ ಕರ್ನಾಟಕ ಶಾಖೆಯ ಖಜಾಂಚಿ ಡಾ.ಶಿವು. ಪಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–'ಸ್ವರ ತರಂಗ' ತಂಡದ ಮಕ್ಕಳಿಂದ ಪರಿಸರ ಕುರಿತ ಕಾರ್ಯಕ್ರಮ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ–ಸುಧಾ ಮಂಜುನಾಥ್, 12.45 ಜನಪದ ಸಂಗೀತ: ಟಿ. ನರಸೀಪುರ ತಾಲೂಕು, ಬನ್ನೂರು ಹೋಬಳಿ, ಯಾಚೇನಹಳ್ಳಿಯ ಲಕ್ಷ್ಮಮ್ಮ ಮತ್ತು ಸಂಗಡಿಗರಿಂದ ಭೈರವನ ಹಾಡು, 1.20 ಭಾವಗೀತೆಗಳು–ವಿಶ್ವನಾಥ್ ನಾಕೋಡ್, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ 'ನಾ ನಿನ್ನ ಮರೆಯಲಾರೆ', 3.45 ಯಕ್ಷಗಾನ : ತಾಳ ಮದ್ದಲೆ, ಪ್ರಸಂಗ– ತುಳಸೀ ಜಲಂಧರ, ಪ್ರಸ್ತುತಿ– ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಕೃಪಾ ಪೋಷಿತ ಯಕ್ಷಗಾನ ಮಂಡಳಿಯ ಕಲಾವಿದರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 6.55 ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ– ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ–ಆರ್.ಲೋಕೇಶ್ವರಿ, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲೂಕು ಆಲದಹಳ್ಳಿಯ ಬೀದಿನಾಟಕ ಕಲಾವಿದೆ, ರಂಗನಟಿ, ಸಿನಿಮಾನಟಿ ಮಂಜುಳಾ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಸಂಗ್ರಾಮಿ ಲಾಹಿರಿ–ಗಾಯನ

- **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ:** ವೀರಶೈವ ಲಿಂಗಾಯತ ವಧು–ವರರ ಬೃಹತ್ ಸಮಾವೇಶ, ಸ್ಥಳ: ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪ, ಉತ್ತರಾದಿ ಮಠದ ರಸ್ತೆ, ಮಧ್ಯಾಹ್ನ 3ರಿಂದ.
- **ನಟನ ರಂಗಶಾಲೆ:** ರಂಗ ತರಬೇತಿ ಆಯ್ಕೆ ಪ್ರಕ್ರಿಯೆ, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ
- **ಬಸವ ಸಮಿತಿ:** ಶರಣ ಸಂಗಮ, ವಿವಾಹ ವಾರ್ಷಿಕೋತ್ಸವದ 40ನೇ ವರ್ಷಾಚರಣೆ, ಕೃತಿ ಬಿಡುಗಡೆ: ಗಮಕ ಕಲಾಶ್ರೀ ವಿದ್ವಾನ್ ಎಂ.ಜಿ.ಸಿದ್ದರಾಮಯ್ಯ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಸಮಿತಿ, ಸಿಐ ನಿವೇಶನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.
- **ವ್ಯವಸ್ಥಾಪಕರು :** ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ವಿದ್ಯಾರ್ಥಿಗಳಿಗೆ ಅಭಿನಂದನೆ : ಮಾಜಿ ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು : ನೈಪುಣ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ರಘು ಆರ್. ಕೌಟಿಲ್ಯ, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ, ಸ್ಥಳ: ನಿವೇದಿತಾನಗರ ಎಸ್.ಆರ್. ಸುಬ್ಬರಾವ್ ಉದ್ಯಾನವನ, ಸಂಜೆ 5ಕ್ಕೆ.
- **ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ:** ಸಿದ್ಧ ಸಮಾಧಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ:ಋಷಿ ಸಂಸ್ಕೃತಿ ವಿದ್ಯಾ ಕೇಂದ್ರ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.
- **ರಂಗವಲ್ಲಿ :** ಭಾಸ ಮಹಾಕವಿಯ ಪ್ರತಿಜ್ಞಾ ಮತ್ತು ಸ್ವಪ್ನ ನಾಟಕ ಪ್ರದರ್ಶನ, ಪರಿಕಲ್ಪನೆ ಮತ್ತು ನಿರ್ದೇಶನ : ಸಾಲಿಯಾನ್ ಉಮೇಶ ನಾರಾಯಣ, ರಂಗವಿನ್ಯಾಸ : ಹೆಚ್.ಕೆ. ದ್ವಾರಕಾನಾಥ್, ಸಂಗೀತ : ದಿಗ್ವಿಜಯ ಹೆಗ್ಗೋಡು, ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ
- **ರಂಗಾಯಣ** : ರಂಗಾಯಣದ ರೆಪರ್ಟರಿ ಕಲಾವಿದರಿಂದ ಸಿ. ಬಸವಲಿಂಗಯ್ಯ ನಿರ್ದೇಶನದ 'ಗೋರ್‌ಮಾಟಿ' ನಾಟಕ ಪ್ರದರ್ಶನ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 2 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 47 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲೋಕಸಭಾ ಚುನಾವಣಾ ಫಲಿತಾಂಶ – 2024



ದಿನಗಣನೆ
3

ಮತದಾನೋತ್ತರ ಸಮೀಕ್ಷಾ ವರದಿ — ಮತ್ತೊಮ್ಮೆ ನರೇಂದ್ರ ಮೋದಿ!

●350ಕ್ಕೂ ಅಧಿಕ ಸ್ಥಾನ ಗೆಲ್ಲುವ ಭವಿಷ್ಯ ●ಕರ್ನಾಟಕದಲ್ಲೂ ಬಿಜೆಪಿಗೆ ಅಧಿಕ ಸ್ಥಾನ



ನವದೆಹಲಿ, ಜೂ.1– ಲೋಕಸಭಾ ಚುನಾವಣೆಯ ಎಲ್ಲಾ 7 ಹಂತದ ಮತದಾನ ಅಂತ್ಯಗೊಂಡಿದೆ. ಇದರ ಬೆನ್ನಲ್ಲೇ ಮತಗಟ್ಟೆ ಸಮೀಕ್ಷಾ ವರದಿಗಳು ಬಹಿರಂಗವಾಗಿದೆ. ಬಹುತೇಕ ಎಲ್ಲಾ ಸಮೀಕ್ಷೆಗಳು ಎನ್‌ಡಿಎ ಮೈತ್ರಿಕೂಟ ಬಹುಮತ ಗಳಿಸಿ, ಅಧಿಕಾರ ಹಿಡಿಯುವ ವಿಶ್ವಾಸ ವ್ಯಕ್ತಪಡಿಸಿವೆ. ಎಲ್ಲವೂ ಎನ್‌ಡಿಎಗೆ 350ಕ್ಕೂ ಅಧಿಕ ಸ್ಥಾನ ಲಭಿಸಲಿದೆ ಎಂದು ಭವಿಷ್ಯ ನುಡಿದಿವೆ. ಇತ್ತ ಇಂಡಿಯಾ ಮೈತ್ರಿಕೂಟಕ್ಕೆ 150 ಸ್ಥಾನ ನೀಡಿವೆ. ಚುನಾವಣಾ ಮತಗಟ್ಟೆ ಸಮೀಕ್ಷೆ ಪ್ರಕಾರ ಪ್ರಧಾನಿ ಮೋದಿ ಮೂರನೇ ಬಾರಿಗೆ ಅಧಿಕಾರಕ್ಕೇರುವುದು ಖಚಿತವಾಗಿದೆ. ಇತ್ತ ಇಂಡಿಯಾ ಮೈತ್ರಿಕೂಟ 150 ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ಕರ್ನಾಟಕದಲ್ಲಿ ಈ ಬಾರಿ ಅತೀ ದೊಡ್ಡ ಪಕ್ಷವಾಗಿ ಬಿಜೆಪಿ ಹೊರಹೊಮ್ಮಲಿದ್ದು, 2019ರ ಚುನಾವಣೆಯಲ್ಲಿ ಕೇವಲ 1 ಸ್ಥಾನ ಗೆದ್ದಿದ್ದ ಕಾಂಗ್ರೆಸ್ ಇನ್ನೂ ಹೆಚ್ಚಿನ ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಕರ್ನಾಟಕದ 28 ಸ್ಥಾನಗಳ ಪೈಕಿ 2019ರಲ್ಲಿ 25 ಸ್ಥಾನ ಪಡೆದಿದ್ದ ಬಿಜೆಪಿ ಈ ಬಾರಿ ಕೆಲ ಕ್ಷೇತ್ರಗಳನ್ನು ಕಳೆದುಕೊಳ್ಳಲಿದೆ. ಇದೇ ವೇಳೆ ಕಾಂಗ್ರೆಸ್ ತನ್ನ ಸ್ಥಾನಗಳನ್ನು ಹೆಚ್ಚಿಸಿಕೊಳ್ಳಲಿದೆ. ಇಂಡಿಯಾ ಟುಡೆ ಪ್ರಕಾರ ಬಿಜೆಪಿ 23 ರಿಂದ 25, ಜೆಡಿಎಸ್ 2 ರಿಂದ 3 ಮತ್ತು ಕಾಂಗ್ರೆಸ್ 3 ರಿಂದ 5 ಸ್ಥಾನ ಗೆಲ್ಲಲಿದೆ. ಇಂಡಿಯಾ ಟಿವಿ ಸಿಎನ್‌ಎಕ್ಸ್ ಪ್ರಕಾರ ಬಿಜೆಪಿ 19 ರಿಂದ 25, ಜೆಡಿಎಸ್–0, ಕಾಂಗ್ರೆಸ್ 4 ರಿಂದ 8 ಸ್ಥಾನ. ಟಿವಿ9 ಭರತವರ್ಷ್ ಪೋಲ್‌ಸ್ಟ್ರಾರ್ ಸಮೀಕ್ಷೆಯಲ್ಲಿ ಬಿಜೆಪಿ 18, ಜೆಡಿಎಸ್ 2, ಕಾಂಗ್ರೆಸ್ 8 ಸ್ಥಾನ. ಎಬಿಪಿ ನ್ಯೂಸ್ ಪ್ರಕಾರ ಬಿಜೆಪಿ 21 ರಿಂದ 23, ಜೆಡಿಎಸ್ 1 ರಿಂದ 3, ಕಾಂಗ್ರೆಸ್ 3 ರಿಂದ ●9ನೇ ಪುಟಕ್ಕೆ

ಇಂಡಿಯಾ ಮತದಾರರ ಸೆಳೆಯುವಲ್ಲಿ ವಿಫಲ

ಎಕ್ಸಿಟ್ ಪೋಲ್ ಭವಿಷ್ಯದ ಬಗ್ಗೆ ಪ್ರಧಾನಿ ಮೋದಿ ಪ್ರತಿಕ್ರಿಯೆ



ನವದೆಹಲಿ: ಲೋಕಸಭಾ ಚುನಾವಣೆಯ ಮತದಾನೋತ್ತರ ಸಮೀಕ್ಷೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಜಯಭೇರಿ ಬಾರಿಸಲಿದೆ ಎಂದು ಭವಿಷ್ಯ ನುಡಿಯಲಾಗಿದೆ. ಈ ಸಮೀಕ್ಷೆಗಳ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ, ಎನ್‌ಡಿಎ ಸರ್ಕಾರವನ್ನು ಮರು ಆಯ್ಕೆ ಮಾಡಲು ಜನರು ದಾಖಲೆ ಸಂಖ್ಯೆಯಲ್ಲಿ ಮತ ಚಲಾಯಿಸಿದ್ದಾರೆ ಎಂದು ವಿಶ್ವಾಸದಿಂದ ಹೇಳಬಲ್ಲೆ ಎಂದು ಹೇಳಿದ್ದಾರೆ. ಅವಕಾಶವಾದಿ INDIA ಬಣ ಮೈತ್ರಿ ಮತದಾರರನ್ನು ಸೆಳೆಯುವಲ್ಲಿ ವಿಫಲವಾಗಿದೆ ಎಂದು ಹೇಳಿದ ಅವರು, ವಿಪಕ್ಷಗಳ ಮೈತ್ರಿಕೂಟವನ್ನು ಜಾತಿವಾದಿ, ಕೋಮುವಾದಿ ಮತ್ತು ಭ್ರಷ್ಟಾಚಾರಿಗಳ ಕೂಟ ಎಂದು ಕರೆದರು. ಚುನಾವಣೆ ಪ್ರಚಾರದ ಮೂಲಕ ವಿಪಕ್ಷಗಳ ಮೈತ್ರಿಕೂಟ ಮೋದಿಯನ್ನು ಧಿಕ್ಕರಿಸುವಲ್ಲಿ ತನ್ನ ಪರಿಣತಿಯನ್ನು ಹೆಚ್ಚಿಸಿಕೊಂಡಿದೆ. ಜನರು ಅಂತಹ ಪ್ರತಿಗಾಮಿ ರಾಜಕೀಯವನ್ನು ತಿರಸ್ಕರಿಸಿದ್ದಾರೆ ಎಂದು ಮೋದಿ ಹೇಳಿದ್ದಾರೆ.

ಚುನಾವಣೋತ್ತರ ಸಮೀಕ್ಷೆಗಳಲ್ಲಿ ನಂಬಿಕೆ ಇಲ್ಲ; ಕಾಂಗ್ರೆಸ್ ಡಬಲ್ ಡಿಜಿಟ್ ದಾಟುತ್ತೆ



ಬೆಂಗಳೂರು: ಚುನಾವಣೋತ್ತರ ಸಮೀಕ್ಷೆಗಳಲ್ಲಿ ನನಗೆ ನಂಬಿಕೆ ಇಲ್ಲ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದಾರೆ.

ಬಹುತೇಕ ಸಮೀಕ್ಷೆಗಳು ಕರ್ನಾಟಕದಲ್ಲಿ ಬಿಜೆಪಿ, ಜೆಡಿಎಸ್ ಮೈತ್ರಿಕೂಟ 20+ ಸ್ಥಾನ ಗೆಲ್ಲಬಹುದು ಎಂದು ಭವಿಷ್ಯ ನುಡಿದ ಬೆನ್ನಲ್ಲೇ ಶಿವಕುಮಾರ್ ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ಯಾವುದೇ ಎಕ್ಸಿಟ್ ಪೋಲ್ ಬಗ್ಗೆ ನಂಬಿಕೆ ಇಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ. ಕರ್ನಾಟಕದಲ್ಲಿ ಕಾಂಗ್ರೆಸ್ ಡಬಲ್ ಡಿಜಿಟ್ ದಾಟುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಚುನಾವಣೋತ್ತರ ಸಮೀಕ್ಷೆ ನಡೆಸುವವರು ಅಲ್ಪಪ್ರಮಾಣದ ಮಾದರಿಗಳನ್ನು ಸಂಗ್ರಹಿಸಿರುತ್ತಾರೆ. ಆಳವಾದ ಸಮೀಕ್ಷೆ ನಡೆಯುವುದಿಲ್ಲ. ಹೀಗಾಗಿ ಈ ಸಮೀಕ್ಷೆಗಳಿಂದ ನಿಖರ ಮಾಹಿತಿ ಬರುವುದಿಲ್ಲ.

ರಾಷ್ಟ್ರದ ಸಮೀಕ್ಷೆ

ಸಮೀಕ್ಷಾ ಸಂಸ್ಥೆ	ಎನ್‌ಡಿಎ	ಇಂಡಿಯಾ	ಇತರೆ
ಝಿ ನ್ಯೂಸ್	367	133	68
ರಿಪಬ್ಲಿಕನ್ ನ್ಯೂಸ್	359	154	30
ಇಂಡಿಯಾ ನ್ಯೂಸ್	371	125	47
ಪಿಮಾರ್ಕ್	359	154	30
ಜನ್ ಕಿ ಬಾತ್	377	151	15
ಲೋಕ್ ಪೋಲ್	325–335	155–165	48–55
ನ್ಯೂಸ್ ನೇಷನ್	378	169	23
ಡೈನಾಮಿಕ್ಸ್	371	125	47

ಕರ್ನಾಟಕದ ಸಮೀಕ್ಷೆ

ಸಮೀಕ್ಷಾ ಸಂಸ್ಥೆ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್
ಇಂಡಿಯಾ ಟು ಡೇ	23–25	3–5	2–3
ಎಬಿಪಿ ನ್ಯೂಸ್	21–23	3–5	2–3
ಟಿವಿ9	18	8	2
ಸಿಎನ್‌ಎನ್	21–24	3–7	1–2
ಇಂಡಿಯಾ ಟಿವಿ	18–22	4–8	1–3
ಸಿ ವೋಟರ್	23	3–5	2
ಆಕ್ಸಿಸ್ ಮೈ ಇಂಡಿಯಾ	22–23	3–5	1–2
ಜನ್ ಕಿ ಬಾತ್	18–22	4–8	1–3
ಡೈನಾಮಿಕ್ಸ್	23	5	0
ಸಿಎನ್‌ಎಕ್ಸ್	19–25	4–8	0
ಟು ಡೇ ಚಾಣಕ್ಯ	20–24	4–8	2–3

ಇಂಡಿಯಾ ಮೈತ್ರಿಕೂಟಕ್ಕೆ ಕನಿಷ್ಟ 295 ಸೀಟು



ದೆಹಲಿ: ಇಂಡಿಯಾ ಮೈತ್ರಿಕೂಟದ ಪ್ರಮುಖ ನಾಯಕರು ಇಂದು ದೆಹಲಿಯಲ್ಲಿ ಮಹತ್ವದ ಸಭೆ ನಡೆಸಿದರು. ಸಭೆಯ ನಂತರ ಮಾಧ್ಯಮ ಹೇಳಿಕೆ ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸುಮಾರು ಎರಡೂವರೆ ತಾಸುಗಳ ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ವಿಸ್ತೃತವಾಗಿ ಚರ್ಚಿಸಲಾಯಿತು ಎಂದರು. ಚುನಾವಣೆ ಸಮಯದಲ್ಲಿ ಮೈತ್ರಿಕೂಟದ ಸದಸ್ಯ ಪಕ್ಷಗಳಿಂದ ಆಗಿರಬಹುದಾದ ಪ್ರಮಾದಗಳು ಮತ್ತು ಫಲಿತಾಂಶಗಳು ಪ್ರಕಟವಾದ ಮೇಲೆ ನಡೆಯುವ ವಿದ್ಯಮಾನಗಳ ಬಗ್ಗೆ ಚರ್ಚಿಸಲಾಯಿತು ಎಂದು ಖರ್ಗೆ ಹೇಳಿದರು. ಇಂಡಿಯಾ ಮೈತ್ರಿಕೂಟಕ್ಕೆ ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಕನಿಷ್ಟ 295 ಸ್ಥಾನಗಳು ಸಿಗಲಿವೆ ಎಂದ ಖರ್ಗೆ ಅಂತಿಮ ಫಲಿತಾಂಶಗಳು ಹೊರಬಿದ್ದಾಗ ತಮಗೆ ಸಿಗುವ ಸ್ಥಾನಗಳ ಸಂಖ್ಯೆ ಹೆಚ್ಚಾಗಬಹುದೇ ಹೊರತು ಕಡಿಮೆಯಂತೂ ಆಗಲಾರದು ಎಂದು ಹೇಳಿದರು. ಮೈತ್ರಿಕೂಟದ ಎಲ್ಲ ಪಕ್ಷಗಳ ನಾಯಕರು ನೀಡಿದ ಮಾಹಿತಿಯ ಆಧಾರದ ಮೇಲೆ ತಮಗೆ ಸಿಗುವ ಸ್ಥಾನಗಳ ಸಂಖ್ಯೆಯನ್ನು ಕಂಡುಕೊಳ್ಳಲಾಗಿದೆ ಎಂದು ಖರ್ಗೆ ಹೇಳಿದರು. ನಾಯಕರು ಜನರಿಂದ ಮತ್ತು ತಮ್ಮ ತಮ್ಮ ಪಕ್ಷಗಳ ಕಾರ್ಯಕರ್ತರಿಂದ ಕಲೆಹಾಕಿರುವ ಮಾಹಿತಿಯನ್ನು ಸಭೆಯಲ್ಲಿ ಶೇರ್ ಮಾಡಿದರು ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಮೈಸೂರಲ್ಲಿ 4 ದಿನ ಮದ್ಯ ಮಾರಾಟ ನಿಷೇಧ

ಆಹಾರ ಒದಗಿಸಲು ಪಬ್–ಬ್ರೀವರೀಸ್‌ಗೆ ಹೈಕೋರ್ಟ್ ಅನುಮತಿ



ಮೈಸೂರು, ಜೂ. 1(ಆರ್‌ಕೆ)– ಲೋಕಸಭಾ ಚುನಾವಣಾ ಮತ ಎಣಿಕೆ ಹಾಗೂ ಕರ್ನಾಟಕ ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ಜೂನ್ ಮೊದಲ ವಾರ ಮೈಸೂರಲ್ಲಿ 4 ದಿನ ಮದ್ಯ ಮಾರಾಟ ನಿಷೇಧಿಸಲಾಗಿದೆ. ಜೂನ್ 3ರಂದು ಕರ್ನಾಟಕ ವಿಧಾನಪರಿಷತ್ ಚುನಾವಣೆ, ಜೂನ್ 4ರಂದು ಲೋಕಸಭಾ ಚುನಾವಣಾ ಮತ ಎಣಿಕೆ ಮತ್ತು ಜೂ.6ರಂದು ವಿಧಾನಪರಿಷತ್ ಚುನಾವಣೆಯ ಮತ ಎಣಿಕೆ ಹಿನ್ನೆಲೆಯಲ್ಲಿ ಜೂ.1ರ ಸಂಜೆ 4 ಗಂಟೆಯಿಂದ ಜೂ.6ರ ಮಧ್ಯರಾತ್ರಿವರೆಗೆ ಮೈಸೂರು ನಗರ ಮತ್ತು ಸುತ್ತಲಿನ 5ಕಿ.ಮೀ. ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ. ಆದರೆ ಜೂ.5ರಂದು ಮಾತ್ರ ಮದ್ಯ ಮಾರಾಟಕ್ಕೆ ಅವಕಾಶವಿದೆ ಎಂದು ಅಬಕಾರಿ ಇಲಾಖೆ ಉಪ ಆಯುಕ್ತ ನಾಗರಾಜಪ್ಪ ತಿಳಿಸಿದ್ದಾರೆ. ಮದ್ಯ ದಂಗಡಿಗಳನ್ನು ಶನಿವಾರ ಸಂಜೆಯೇ ಬಂದ್ ಮಾಡಲಾಗಿದ್ದು, ಜೂ.4ರ ಸಂಜೆವರೆಗೆ 3 ದಿನಗಳ ಕಾಲ ಮದ್ಯ ಮಾರಾಟ ನಿಷೇಧವಿರುತ್ತದೆ. ●9ನೇ ಪುಟಕ್ಕೆ

ಜನ್ಮದಿನದಂದೇ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ದಿನೇಶ್ ಕಾರ್ತಿಕ್ ವಿದಾಯ



ಚೆನ್ನೈ: ಟೀಂ ಇಂಡಿಯಾದ ಸ್ಟಾರ್ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ದಿನೇಶ್ ಕಾರ್ತಿಕ್ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ಐಪಿಎಲ್‌ಗೆ ಗುಡ್ ಬೈ ಹೇಳಿದ್ದ ದಿನೇಶ್ ಕಾರ್ತಿಕ್ ತಮ್ಮ ಹುಟ್ಟುಹಬ್ಬದಂದೇ ವೃತ್ತಿ ಬದುಕಿಗೆ ಅಂತ್ಯ ಹಾಡಿದ್ದಾರೆ.

2004 ರಲ್ಲಿ ಟೀಂ ಇಂಡಿಯಾ ಪರ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ಬದುಕಿಗೆ ಕಾಲಿಟ್ಟಿದ ದಿನೇಶ್ ಕಾರ್ತಿಕ್ ಅವರ ಸುಮಾರು 20 ವರ್ಷಗಳ ಸುದೀರ್ಘ ಕ್ರಿಕೆಟ್ ಪಯಣಕ್ಕೆ ಇಂದು ಫುಲ್ ಸ್ಟಾಪ್ ಬಿದ್ದಿದೆ. ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಒಂದು ನಿಮಿಷದ ವಿಡಿಯೋವನ್ನು ಪೋಸ್ಟ್ ಮಾಡುವ ಮೂಲಕ ದಿನೇಶ್ ಕಾರ್ತಿಕ್ ನಿವೃತ್ತಿ ವಿಚಾರವನ್ನು ಬಹಿರಂಗಪಡಿಸಿದ್ದಾರೆ. ಈ ವಿಡಿಯೋದಲ್ಲಿ ತಮ್ಮ ಬಾಲ್ಯದಿಂದ ವೃತ್ತಿಜೀವನದ ●9ನೇ ಪುಟಕ್ಕೆ

ವಾಸನೆ ಎಂದ ರೂಂನಲ್ಲೇ ಪ್ರಜ್ವಲ್ ವಾಸ್ತವ್ಯ

ಯಾವ ಪ್ರಶ್ನೆ ಕೇಳಿದರೂ ಗೊತ್ತಿಲ್ಲ...! ಈ ಪ್ರಶ್ನೆಗೆ ಕಾರ್ತಿಕ್‌ನಿಂದ ಉತ್ತರ ಸಿಗಬಹುದು...

ಅದು ಸರಿ, ಅವರನ್ನೇಕೆ ಬಂಧಿಸಿಲ್ಲ; ತನಿಖೆ ವೇಳೆ ಅತೀ ನಯ–ವಿನಯ ಪ್ರದರ್ಶನ

ಬೆಂಗಳೂರು, ಜೂ.1 (ಕೆಎಂಶಿ)– ಕೋರ್ಟ್, ಎಸ್‌ಐಟಿ ಕಸ್ಟಡಿಗೆ ಪ್ರಜ್ವಲ್ ರೇವಣ್ಣರನ್ನು ವಹಿಸುವ ಮುನ್ನ ಬಂಧನ ವೇಳೆ ಆತನನ್ನು ಇರಿಸಿದ್ದ ಲಾಕಪ್‌ನಲ್ಲೇ ಈಗಲೂ ಇರಿಸಲಾಗಿದೆ.

ಕಸ್ಟಡಿಗೆ ಪಡೆದ ನಂತರವೂ ಅದೇ ರೂಂನಲ್ಲಿ ಇರಿಸಲಾಗಿದೆ. ನಿನ್ನೆ ಕೋರ್ಟ್‌ನಲ್ಲಿ ರೂಂ ಕ್ಲೀನ್ ಇಲ್ಲ, ಸ್ಮೆಲ್ ಬರ್ತಿದೆ ಅಂದಿದ್ದ ಪ್ರಜ್ವಲ್, ಅದೇ ಕೊಠಡಿಯಲ್ಲಿ ರಾತ್ರಿ ಕಳೆಯಬೇಕಾಯಿತು. ಪ್ರಜ್ವಲ್‌ಗೆ ರೂಂ ಬದಲಾವಣೆ ಮಾಡದೇ ಇದ್ದರಿಂದ ಅದೇ ಕೊಠಡಿ, ಅದೇ ಶೌಚಾಲಯ ಬಳಕೆ ಮಾಡುವ ಸ್ಥಿತಿ ಬಂದೊದಗಿದೆ.

ಕೋರ್ಟ್‌ನಲ್ಲಿ ನಿನ್ನೆ ನ್ಯಾಯಾಧೀಶರ ಮುಂದೆ ಮನವಿ ಮಾಡಿಕೊಂಡಿದ್ದ ಪ್ರಜ್ವಲ್, ರೂಂ ಕೆಟ್ಟ ವಾಸನೆ ಬರ್ತಿದೆ, ಬೇರೆ ರೂಂ ಕೊಡಿಸಿಕೊಡಿ ಎಂದು ಮನವಿ ಮಾಡಿಕೊಂಡಿದ್ದ. ಎಸ್‌ಐಟಿ ಕಸ್ಟಡಿ ಆದೇಶದ ನಂತರ, ಮತ್ತೆ ಅದೇ ಕೊಠಡಿಯಲ್ಲಿ ಪ್ರಜ್ವಲ್ ರೇವಣ್ಣ ರಾತ್ರಿ ಕಳೆಯಬೇಕಾಯಿತು.

ಊಟ ಮಾಡಿದ ನಂತರ ನಿದ್ದೆಗೆ ಜಾರಿದ ಪ್ರಜ್ವಲ್‌ನನ್ನು ತಡರಾತ್ರಿ ಹಾಗೂ ಇಂದು ಇಡೀ ದಿನ ಎಸ್‌ಐಟಿ ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ವಿಚಾರಣೆ ಸಂದರ್ಭದಲ್ಲಿ ಆತ, ಇತ್ತೀಚೆಗೆ ನಡೆದಿರುವ ಯಾವ ಘಟನೆಗಳೂ ನನಗೆ ಗೊತ್ತಿಲ್ಲ. ನನ್ನದು ಎಂದು ಹೊರಬಂದಿರುವ ನಗ್ನ ಚಿತ್ರಗಳಿಗೂ ನನಗೂ ಸಂಬಂಧ ಇಲ್ಲ. ನೀವು ಏತಕ್ಕೆ ಈ ಎಲ್ಲಾ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ ಎಂದು ಎಸ್‌ಐಟಿ ಪೊಲೀಸರನ್ನೇ ಪ್ರಶ್ನಿಸಿದ್ದಾರೆ. ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನಿನ್ನೆ ಜನಪ್ರತಿನಿಧಿಗಳ ನ್ಯಾಯಾಲಯ ಆರು ದಿನದವರೆಗೆ ಎಸ್‌ಐಟಿ ವಶಕ್ಕೆ ನೀಡಿತ್ತು. ವಿಚಾರಣಾ ಸಂದರ್ಭದಲ್ಲಿ ನನಗೆ ಗೊತ್ತಿಲ್ಲ, ಏನೂ ತಿಳಿದಿಲ್ಲ, ನನಗೂ ಅದಕ್ಕೂ ಸಂಬಂಧವಿಲ್ಲ, ಮಹಿಳೆ ನನಗೆ ಯಾರೆಂದೇ ತಿಳಿದಿಲ್ಲ ಎಂದು ಉತ್ತರಿಸಿದ್ದಾರೆ.



ಕೊನೆಗೆ ಅಧಿಕಾರಿಗಳು ಅತ್ಯಾಚಾರ ಆರೋಪದ ದೂರು ನೀಡಿರುವ ಮಹಿಳೆಯ ಚಿತ್ರ ತೋರಿಸಿದ ಸಂದರ್ಭದಲ್ಲಿ, ನಮ್ಮ ಮನೆಗಳು, ತೋಟ, ಕಚೇರಿಗಳಲ್ಲಿ ಬಹಳಷ್ಟು ಮಂದಿ ಕೆಲಸ ಮಾಡುತ್ತಾರೆ. ನನಗೆ ಎಲ್ಲರ ಪರಿಚಯ ಇಲ್ಲ. ಈ ಹೆಣ್ಣಿನ ಬಗ್ಗೆ ನನ್ನ ಕಾರ್ ಡ್ರೈವರ್ ಆಗಿದ್ದ ಕಾರ್ತಿಕ್‌ಗೆ ತಿಳಿದಿರಬಹುದು, ಅವನನ್ನು ನೀವು ಇದುವರೆಗೂ ಬಂಧಿಸಿಲ್ಲವೇ? ಅವನನ್ನು ಪ್ರಶ್ನಿಸಿದರೆ ನಿಮಗೆ ಎಲ್ಲವೂ ತಿಳಿಯುತ್ತದೆ ಎಂದಿದ್ದಾರೆ. ನಂತರ ಮೊಬೈಲ್ ಮತ್ತು ಅದರಲ್ಲಿರುವ ನಗ್ನ ಚಿತ್ರಗಳ ಬಗ್ಗೆ ಪ್ರಶ್ನೆ ಮಾಡಿದಾಗ ಅದಕ್ಕೂ ನನಗೂ ಸಂಬಂಧವೇ ಇಲ್ಲ. ನನ್ನ ಹತ್ತಿರ ಇರುವುದು ಸಾಮಾನ್ಯ ಮೊಬೈಲ್, ತೆಗೆದುಕೊಳ್ಳಿ. ●9ನೇ ಪುಟಕ್ಕೆ

ಸಿಇಟಿ ಪರೀಕ್ಷಾ ಫಲಿತಾಂಶ ಪ್ರಕಟ

ವೆಬ್‌ಸೈಟ್
http://karresults.nic.in

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರ 2024ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (CET-2024)ಯ ಫಲಿತಾಂಶವನ್ನು ಪ್ರಕಟಿಸಿದೆ. ಸಿಇಟಿ ಪರೀಕ್ಷೆ ಬರೆದು ಒಂದೂವರೆ ತಿಂಗಳಾದರೂ ಫಲಿತಾಂಶ ಪ್ರಕಟಿಸದೇ ಇರುವುದು ಅಸಮಾಧಾನಕ್ಕೆ ಕಾರಣವಾಗಿತ್ತು. ಶನಿವಾರ ಎಕ್ಸ್‌ನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಫಲಿತಾಂಶ ಪ್ರಕಟವಾಗಿರುವ ಬಗ್ಗೆ ಮಾಹಿತಿ ಹಂಚಿಕೊಂಡಿದೆ. ಫಲಿತಾಂಶವು ಪ್ರಾಧಿಕಾರದ ವೆಬ್‌ಸೈಟ್ http://karresults.nic.inನಲ್ಲಿ ಲಭ್ಯವಿದ್ದು, ಅಭ್ಯರ್ಥಿಗಳು ವಿಷಯವಾರು ಅಂಕಗಳ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ

ವಿದ್ಯಾರ್ಥಿಗಳಿಗೆ ನಿರಾಳ: 2024–25ನೇ ಸಾಲಿನ ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಕೃಷಿ ವಿಜ್ಞಾನ, ವೆಟರಿನರಿ, ಬಿ–ಫಾರ್ಮ್, ಇತರ ವೃತ್ತಿಪರ ಕೋರ್ಸ್‌ಗಳ ●9ನೇ ಪುಟಕ್ಕೆ

ಭಾರಿ ಮಳೆ ಮುನ್ಸೂಚನೆ: ಕೊಡಗಿಗೆ ಬಂದಿಳಿದ ಎನ್‌ಡಿಆರ್‌ಎಫ್ ತಂಡ



ಮಡಿಕೇರಿ,ಜೂ.1– ಕೊಡಗು ಜಿಲ್ಲೆಯಲ್ಲಿ ಮುಂದಿನ ಕೆಲವು ದಿನಗಳು ಭಾರಿ ಮಳೆ ಮುನ್ಸೂಚನೆ ಹಿನ್ನೆಲೆಯಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಎನ್‌ಡಿಆರ್‌ಎಫ್ ತಂಡ ಕೊಡಗಿಗೆ ಆಗಮಿಸಿದೆ.

ಆಂಧ್ರಪ್ರದೇಶದ ವಿಜಯವಾಡದಲ್ಲಿರುವ 10ನೇ ಬೆಟಾಲಿಯನ್ ಎನ್‌ಡಿಆರ್‌ಎಫ್ ತಂಡ ಶನಿವಾರ ಸಂಜೆ ಕುಶಾಲನಗರಕ್ಕೆ ಆಗಮಿಸಿದ್ದು, ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ಅನನ್ಯ ಕುಮಾರ್ ಈ ತಂಡವನ್ನು ಬರಮಾಡಿಕೊಂಡರು. ಎನ್‌ಡಿಆರ್‌ಎಫ್‌ನ ಕಮಾಂಡೆಂಟ್ ಶಿಯಾಜಯಕುಮಾರ್ ನೇತೃತ್ವದಲ್ಲಿ ಒಟ್ಟು 25 ಮಂದಿಯ ತಂಡ ಆಗಮಿಸಿದ್ದು, ಕುಶಾಲನಗರದ ಕೂಡಿಗೆ ಬಳಿಯ ಜಿಲ್ಲಾ ಕೈಗಾರಿಕಾ ತರಬೇತಿ ಕೇಂದ್ರದ ಶಿಕ್ಷಣಾರ್ಥಿಗಳ ವಸತಿ ನಿಲಯದಲ್ಲಿ ವಾಸ್ತವ್ಯ ಹೂಡಿದೆ.

ಅಗತ್ಯವಿದ್ದಲ್ಲಿ ಹೆಚ್ಚುವರಿ ಯೋಧರನ್ನು ಕೊಡಗಿಗೆ ಕರೆಸಿಕೊಳ್ಳಲಾಗುತ್ತದೆ. ಕಳೆದ ಬಾರಿ 23 ಯೋಧರನ್ನು ಜಿಲ್ಲೆಗೆ ನಿಯೋಜನೆ ಮಾಡಲಾಗಿತ್ತು ಎಂದು ಎನ್‌ಡಿಆರ್‌ಎಫ್ ಮೂಲಗಳು ಮಾಹಿತಿ ನೀಡಿವೆ. ಜೂನ್ ತಿಂಗಳಲ್ಲಿ ಜಿಲ್ಲೆಯಲ್ಲಿ ನಿಯೋಜನೆಯಾಗುವ ಈ ●9ನೇ ಪುಟಕ್ಕೆ



ಕುಡಿಯುವ ನೀರಿನಿಂದ ಜನರ ಆರೋಗ್ಯಕ್ಕೆ ಹಾನಿಯಾದರೆ ಅಧಿಕಾರಿಗಳೇ ನೇರ ಹೊಣೆ

–ಮೈಸೂರು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಎಚ್ಚರಿಕೆ

●ಕುಡಿಯುವ ನೀರು ಸರಬರಾಜು ಬಗ್ಗೆ ವಿಡಿಯೋ ಕಾನ್ಫರೆನ್ಸ್ ಸಭೆ ●ಶುದ್ಧ ಕುಡಿಯುವ ನೀರು ಸರಬರಾಜಿಗೆ ಟಿಪ್ಸ್ ●ನೀರು ಶೇಖರಣಾ ಘಟಕ ಸ್ವಚ್ಛಗೊಳಿಸಬೇಕು ●ಕಡ್ಡಾಯವಾಗಿ ನೀರಿನ ಗುಣಮಟ್ಟ ಪರೀಕ್ಷಿಸಬೇಕು

ಮೈಸೂರು, ಜೂ.1(ಬಿಎಲ್‌ಯು)– ಕುಡಿಯುವ ನೀರು ಸರಬರಾಜಿನಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾದರೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಜೊತೆ ಶನಿವಾರ ನಡೆದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿದ ಅವರು, ನೀರಿನ ಮಾದರಿಗಳನ್ನು ಪರೀಕ್ಷೆ ಮಾಡದೆ ಯಾವುದೇ ಕಾರಣಕ್ಕೂ ಕುಡಿಯುವ ನೀರು ಸರಬರಾಜು ಮಾಡಬಾರದು ಎಂದು ತಾಕೀತು ಮಾಡಿದರು. ಸಾರ್ವಜನಿಕರಿಗೆ ಕುಡಿಯುವ ನೀರು ಸರಬರಾಜು ಮಾಡುವ ಮುನ್ನ ನಿಯಮಿತವಾಗಿ ನೀರನ್ನು ಪರೀಕ್ಷೆ ಮಾಡಬೇಕು. ನೀರಿನಲ್ಲಿ ಯಾವುದೇ ದೋಷ ಇಲ್ಲ ಎಂದು ಖಾತ್ರಿಯಾದ ನಂತರ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದು ಸೂಚನೆ ನೀಡಿದರು.



ಶುದ್ಧ ಕುಡಿಯುವ ನೀರು ಸರಬರಾಜು ಸಂಬಂಧ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಶನಿವಾರ ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ತಾಲೂಕು ಮಟ್ಟದ ಅಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಸಭೆ ನಡೆಸಿದರು.

ಕುಡಿಯುವ ನೀರು ಶೇಖರಣಾ ಘಟಕಗಳನ್ನು ಸ್ವಚ್ಛಗೊಳಿಸಿ, ಪ್ರತಿ ಹಂತದಲ್ಲೂ ಕ್ಲೋರಿನೇಷನ್ ಮಾಡಲು ಕ್ರಮ ಕೈಗೊಳ್ಳಬೇಕು. ಕೊಳವೆ ಬಾವಿಗಳ ಸುತ್ತಮುತ್ತ ಕಲುಷಿತ ನೀರು ಅಥವಾ ಚರಂಡಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ನೀರು ಸರಾಗವಾಗಿ ಹರಿಯಲು ಸೂಕ್ತ ಚರಂಡಿ ವ್ಯವಸ್ಥೆ ಮಾಡಿ, ನೀರಿನ ಮೂಲದ ಸುತ್ತ ಕಾಂಕ್ರೀಟ್ ಕಟ್ಟೆ ಕಟ್ಟಬೇಕು ಎಂದು ಡಾ.ರಾಜೇಂದ್ರ ಸಲಹೆ ನೀಡಿದರು.

ಸ್ವಚ್ಛತೆ, ಚರಂಡಿ ನಿರ್ವಹಣೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಬೇಕು. ಹೋಟೆಲ್, ರಸ್ತೆ ಬದಿಯ ಫಾಸ್ಟ್‌ಫುಡ್‌ಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸೂಚನೆ ನೀಡಬೇಕು. ಶುದ್ಧ ಕುಡಿಯುವ ನೀರು ಒದಗಿಸುವಂತೆ ಕಟ್ಟುನಿಟ್ಟಿನ ಆದೇಶ ನೀಡಬೇಕು ಎಂದು ಹೇಳಿದರು. ವಿವಿಧ ಇಲಾಖೆಯ ಅಧಿಕಾರಿಗಳು ಸಮನ್ವಯತೆಯೊಂದಿಗೆ ಕೆಲಸ ನಿರ್ವಹಿಸಬೇಕು. ಡೆಂಗ್ಯೂ, ಚಿಕನ್‌ಗುನ್ಯಾ ವ್ಯಾಪಿಸದಂತೆ ತೀವ್ರ ನಿಗಾ ವಹಿಸಬೇಕು ಎಂದು ಸೂಚಿಸಿದ ಡಾ.ರಾಜೇಂದ್ರ, ಕುಡಿಯುವ ನೀರಿನ ಪೈಪ್‌ಲೈನ್‌ಗಳ ಮೇಲೆ ಪ್ರತಿದಿನ ಕಣ್ಗಾವಲಿಡಬೇಕು. ಪೈಪ್‌ಲೈನ್‌ಗೆ ಹಾನಿಯಾಗಿದ್ದ ಪಕ್ಷದಲ್ಲಿ ಕಲುಷಿತ ನೀರು ಕುಡಿಯುವ ನೀರಿಗೆ ಸೇರ್ಪಡೆಯಾಗದಂತೆ ಎಚ್ಚರಿಕೆ ವಹಿಸಬೇಕು. ಹಾಗೇನಾದರೂ ಇದ್ದರೆ ತುರ್ತಾಗಿ ದುರಸ್ತಿ ಕಾರ್ಯ ನಡೆಸಬೇಕು ಎಂದು ತಿಳಿಸಿದರು.

ನಗರ ಪ್ರದೇಶಗಳಲ್ಲಿ ಕರುಳುಬೇನೆ, ವಾಂತಿ, ಭೇದಿ ಪ್ರಕರಣಗಳು ಕಂಡು ಬಂದ ತಕ್ಷಣ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ತಾಲೂಕು ಆಸ್ಪತ್ರೆ ಹಾಗೂ ಕ್ಲಿನಿಕ್‌ಗಳಲ್ಲಿ ಇಂತಹ ಪ್ರಕರಣಗಳು ನಡೆದರೆ ನಮಗೆ ಮಾಹಿತಿ ನೀಡಬೇಕು. ಜೊತೆಗೆ ಅಗತ್ಯ ಕ್ರಮ ವಹಿಸಬೇಕು ಎಂದರು.

ಕುಡಿಯುವ ನೀರು ಸರಬರಾಜು ಮಾಡುವ ಕೊಳವೆ ಮಾರ್ಗಗಳು ಒಡೆದು ಹೋದರೆ, ತಕ್ಷಣ ದುರಸ್ತಿ ಮಾಡಬೇಕು. ಕೊಳವೆ ಮಾರ್ಗ ಒಡೆದು ಹೋದರೆ ಕೊಳಚೆ ನೀರು ಹಾಗೂ ತ್ಯಾಜ್ಯ ವಸ್ತು ಅದರೊಳಗೆ ಸೇರದಂತೆ ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಆಗಾಗ್ಗೆ ಎಲ್ಲಾ ಕಡೆ ಇರುವ ಓವರ್ ಹೆಡ್ ಟ್ಯಾಂಕ್‌ಗಳ ನೀರಿನ ಗುಣಮಟ್ಟ ಪರೀಕ್ಷೆ ಮಾಡಬೇಕು ಎಂದು ಡಾ.ರಾಜೇಂದ್ರ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ.ಗಾಯತ್ರಿ, ಮಳೆಗಾಲ ಆರಂಭವಾಗುವ ಕಾರಣ ಚರಂಡಿ ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು. ಜೊತೆಗೆ ಶುಚಿತ್ವದ ಬಗ್ಗೆ ಜನರಲ್ಲಿ ಪರಿಣಾಮಕಾರಿಯಾಗಿ ಅರಿವು ಮೂಡಿಸಿ ಎಂದು ಹೇಳಿದರು. ಸ್ವಚ್ಛ ನೀರು, ಸ್ವಚ್ಛ ವಾತಾವರಣ ನಿರ್ಮಾಣ ನಮ್ಮ ಜವಾಬ್ದಾರಿಯಾಗಿದ್ದು, ಇದನ್ನು ನಿರ್ವಹಣೆ ಮಾಡಬೇಕು ಎಂದು ಗಾಯತ್ರಿ ಸಲಹೆ ನೀಡಿದರು. ಹುಣಸೂರು ಉಪ ವಿಭಾಗಾಧಿಕಾರಿ ಮೊಹಮ್ಮದ್ ಹ್ಯಾರಿಸ್ ಸುಮೇರ್ ಸೇರಿದಂತೆ ಇತರೆ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : (ಕುಡಿದು ಬಂದ ಗಂಡನಿಗೆ) ಏನಾಯ್ತು ರೀ, ಯಾವತ್ತು ಕುಡೀತಿರ್ಲಿಲ್ಲ?
ಪತಿ : ಇನ್ನೇನಿಲ್ಲಾ ಕಣೆ, ಕೆಟ್ಟ ಸಹವಾಸ ಅಷ್ಟೇ"
ಪತ್ನಿ : ಅಂದ್ರೆ?
ಪತಿ : ಒಂದು ಬಾಟ್ಲು ವಿಸ್ಕಿ ಇತ್ತು. ನಾವು ನಾಲ್ಕು ಜನ ಇದ್ವಿ. ಉಳಿದ ಮೂವರು ನಮಗೆ ಅಭ್ಯಾಸ ಇಲ್ಲ ಅಂದ್ರು. ಹಾಗಾಗಿ ನಾನೇ ಎಲ್ಲಾ ಕುಡಿಯಬೇಕಾಯ್ತು!

ಮೈಸೂರು ಮಿತ್ರ

ಭಾನುವಾರ, 2 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮನುಷ್ಯನಿಗೆ ಒಮ್ಮೆ ಸಂಶಯ ಪಿಶಾಚಿ ಹಿಡಿಯಿತೆಂದರೆ ತೀರಿತು, ಸರಿ ತಪ್ಪುಗಳ ವಿಚಾರವಾಗಿ ಯೋಚಿಸುವ ತಾಳ್ಮೆ ಇರುವುದಿಲ್ಲ. –ನುಡಿಮುತ್ತು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಣೆಯಲ್ಲಿ ಬರೆದದ್ದು ಅಣುವಿನಷ್ಟು ತಪ್ಪದು

ನಿಮ್ಮ ಪತ್ರಗಳು

■ ಗುಣಮಟ್ಟವಿಲ್ಲದ ನಂದಿನಿ ಮೊಸರು

ಮಾನ್ಯರೇ,



ದಿನಾಂಕ 28.5.24ರ ಬೆಳಿಗ್ಗೆ ನಾನು ನಮ್ಮ ಮನೆ ಮೈಸೂರಿನ ಕನಕದಾಸನಗರದ ಶಕ್ತಿ ಗಣಪತಿ ದೇವಸ್ಥಾನದ ಬಳಿಯ ನಂದಿನಿ ಹಾಲಿನ ಮಾರಾಟಗಾರರೂ ಆದ ಕಿರಾಣಿ ಅಂಗಡಿಯಿಂದ 200 ಎಂ.ಎಲ್. ಮೊಸರಿನ ಪೊಟ್ಟಣ ಕೊಂಡುಹೋದೆ (ಬ್ಯಾಚ್ ನಂ R04:use by30.04.24 ಎಂದು ನಮೂದಾಗಿತ್ತು) ಮನೆಯಲ್ಲಿ ಪೊಟ್ಟಣ ಕತ್ತರಿಸಿ ಬಳಸಲು ನೋಡಿದಾಗ ಅದು ಇನ್ನೂ ಮೊಸರಾಗಿರದೆ, ಬರೀ ಹಾಲಿನಂತೆಯೇ ಇತ್ತು. ಅದನ್ನು ಹಾಗೆಯೇ ಇಟ್ಟರೂ (fermantation ಆಗದೆ) ರಾತ್ರಿ ಕೂಡ ಮೊಸರು ಹಾಗದೇ ಹಾಲಿನಂತೆಯೇ ಇತ್ತು. ಆದ್ದರಿಂದ ಅದನ್ನು ಉಪಯೋಗಿಸಲು ಸಾಧ್ಯವಾಗಲಿಲ್ಲ. ಕಳೆದ ಕೆಲ ದಿನಗಳಿಂದ ಇರುವ ಶೀತ ವಾತಾವರಣದ ಕಾರಣ ಹಾಗಾಗಿರಬಹುದೆಂದು ಸುಮ್ಮನಾದೆ.

ಮತ್ತೆ ದಿನಾಂಕ 29.5.24 ರಂದು ಬೆಳಗ್ಗೆ ಅದೇ ಅಂಗಡಿಯಲ್ಲಿ ಮೊಸರು ಕೇಳಿದಾಗ ಅವರು ಇಂದು ಕೂಡ ಅದೇ ಮೊಸರು ಡೈರಿಯಿಂದ ಸರಬರಾಜು ಆಗಿರುವುದಾಗಿ ಹೇಳಿದರು. ಒಂದು ದಿನ ಕಳೆದಿರುವುದರಿಂದ ಈಗ ಅದು ಪೂರ್ಣ ಪ್ರಮಾಣದಲ್ಲಿ ಮೊಸರು ಆಗಿರಬಹುದು ಎಂಬ ವಿಶ್ವಾಸದ ಮೇಲೆ ಅದೇ ಮೊಸರಿನ ಪ್ಯಾಕೆಟ್ ಅನ್ನು ಕೊಂಡು ಹೋದೆ. ಆದರೆ ಈ ಬಾರಿ ಅದು ಒಡೆದ ಹಾಲಿನಂತೆ ಗಂಟು ಗಂಟಾಗಿತ್ತು. ಈಗಲೂ ಅದನ್ನು ಉಪಯೋಗಿಸಲು ಸಾಧ್ಯವಾಗದೆ ಚೆಲ್ಲುವಂತೆ ಆಯಿತು.

ಸಾಮಾನ್ಯವಾಗಿ ಚಳಿಗಾಲದಲ್ಲಿ ಈ ರೀತಿ ಆಗುತ್ತಿರುತ್ತದೆ. ಏಜೆಂಟ್‌ರನ್ನು ಈ ಬಗ್ಗೆ ಕೇಳಿದಾಗ ಅವರು, ರಾತ್ರಿ ಹಾಲಿಗೆ ಹೆಪ್ಪು ಹಾಕಿದ ತಕ್ಷಣವೇ ಪ್ಯಾಕ್ ಮಾಡಿ ಸರಬರಾಜು ಮಾಡುತ್ತಾರೆ. ಆದ್ದರಿಂದ ನಾವೇನು ಮಾಡಲು ಸಾಧ್ಯವಿಲ್ಲ. ನಾವು ಕಂಪ್ಲೆಂಟ್ ಮಾಡಿದರೂ ಏನು ಮಾಡುವುದಿಲ್ಲ ಎಂದು ಹೇಳಿದರು. ಇನ್ನು ಗ್ರಾಹಕರೇ ನಂದಿನಿ ಹೆಲ್ಪ್‌ಲೈನ್‌ಗೆ ಅಥವಾ ಪೊಟ್ಟಣದ ಮೇಲೆ ಇರುವ ಲ್ಯಾಂಡ್ ಲೈನ್ ನಂಬರ್‌ಗೆ ಕರೆ ಮಾಡಿದರೂ ಕರೆ ಸ್ವೀಕರಿಸುವುದಿಲ್ಲ. ಒಂದೊಮ್ಮೆ ಸ್ವೀಕರಿಸಿದರೂ ಅವರು ಮಾರಾಟದ ಸಿಬ್ಬಂದಿಯಾಗಿದ್ದು ಅವರು ನೀವು ದೂರನ್ನು ಖುದ್ದಾಗಿ ಕಚೇರಿಗೆ ಬಂದು ಕೊಡಬೇಕು ಎಂದು ಹೇಳಿ ಕರೆ ಕಟ್ ಮಾಡುತ್ತಾರೆ. ಇದು ಗ್ರಾಹಕರು ನಂದಿನಿಯ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ನಂದಿನಿಯವರು ಗ್ರಾಹಕರಿಗೆ ಕೊಡುವ ಉಡುಗೊರೆ!! 90ರ ದಶಕದಲ್ಲಿ ನಂದಿನಿ ಇನ್ನೂ ಆಧುನೀಕರಣ ಗೊಳ್ಳದೆ ಗ್ರಾಹಕರು ಪ್ರತಿದಿನ ಹಾಲು ಒಡೆದು ಹೋಗುವ ಸಮಸ್ಯೆ ಎದುರಿಸುತ್ತಿದ್ದರು. ಆದರೆ ಇಂದು ರಾಸಾಯನಿಕಗಳ ಮಿಶ್ರಣದ ಕಾರಣ ಅಂಗಡಿಯಲ್ಲಿ ಶೀತಲ ಪೆಟ್ಟಿಗೆಯಲ್ಲಿಡದೆ ಹೊರಗಡೆಯೇ ಇಟ್ಟರೂ ಹಾಲು ದಿನ ಪೂರ್ತಿ ಕೆಡದಂತೆ (ಮನುಷ್ಯನ ಆರೋಗ್ಯ ಕೆಟ್ಟರೂ ಸರಿಯೇ) ಮಾಡಿದ್ದಾರೆ. ಅಷ್ಟರಮಟ್ಟಿಗೆ ನಂದಿನಿ ಬೆಳೆದಿದೆ! ಆದರೆ ಗ್ರಾಹಕರ ಸಮಸ್ಯೆ, ದೂರಿಗೆ ಮಾತ್ರ ಕಿವುಡಾಗಿದೆ. ಗ್ರಾಹಕ ಸ್ನೇಹಿಯಾಗದಿದ್ದರೆ ಈಗಾಗಲೇ ಲಗ್ಗೆ ಇಟ್ಟಿರುವ ಅನೇಕ ಖಾಸಗಿ ಡೈರಿಗಳು, ಅಮುಲ್‌ನವರು ಮಾರುಕಟ್ಟೆಯನ್ನು ಆವರಿಸಿದರೂ ಅಚ್ಚರಿ ಇಲ್ಲ.

ಗ್ರಾಹಕರ ದೂರು ಸೆಲ್ ಸರಿಯಾಗಿ ಸ್ಪಂದಿಸುವಂತೆ ಹಾಗೂ ಕೆಟ್ಟ ಪದಾರ್ಥಗಳನ್ನು ಏಜೆಂಟರ ಮೂಲಕ ವಾಪಸ್ ಪಡೆದು ಹಣ ಹಿಂದಿರುಗಿಸುವ ಕ್ರಮ ವಹಿಸಲಿ. ಈ ಬಗ್ಗೆ ಏಜೆಂಟ್ ಅಥವಾ ನಂದಿನಿ ಬೂತ್‌ಗಳಲ್ಲಿ ಸಾರ್ವಜನಿಕರಿಗೆ ಮಾಹಿತಿ ತಿಳಿಸುವ ನೋಟೀಸ್ ಅನ್ನು ಕಡ್ಡಾಯವಾಗಿ ಪ್ರದರ್ಶಿಸುವ ವ್ಯವಸ್ಥೆ ಮಾಡಲಿ. ಏಕೆಂದರೆ ಗ್ರಾಹಕರಿಗೂ ದುಡ್ಡು ಸುಮ್ಮನೆ ಬರುವುದಿಲ್ಲ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಬಿತ್ತನೆ ಬೀಜದ ದರ ಇಳಿಕೆಯಾಗಲಿ

ಮಾನ್ಯರೆ,

ಭಾರತದ ವ್ಯವಸಾಯ ಮಾನ್ಸೂನ್‌ನೊಂದಿಗಿನ ಜೂಜಾಟ ಎಂದೂ ನಮ್ಮ ರೈತರ ಬಗ್ಗೆ ಮಾರ್ಮಿಕ ಮಾತಾಗಿದ್ದು, ಒಂದು ಬೆಳೆ ಬೆಳೆಯಲು ರೈತ ಪಡುವ ಕಷ್ಟ ಅಪಾರವಾಗಿರುತ್ತದೆ. ಬೀಜ ಬಿತ್ತನೆಯಿಂದ ಪ್ರಾರಂಭವಾಗಿ ನಾಟಿ, ಗೊಬ್ಬರ, ಕಳೆ, ಕಟಾವು ಹೀಗೆ ಎಲ್ಲಾ ಹಂತದಲ್ಲೂ ಒಂದೊಂದು ಸವಾಲು ಎದುರಾಗುತ್ತದೆ.

ಇಂತಹ ಹಲವಾರು ಸಮಸ್ಯೆಗಳ ನಡುವೆ ಎಲ್ಲಾ ದರಗಳು ಕೂಡ ಹೆಚ್ಚಾಗಿದ್ದು, ಕೃಷಿ ಯಂತ್ರಗಳು, ಕೂಲಿ, ಕೆಲಸಗಾರರ ಕೊರತೆ ಹೀಗೆ ಹಲವಾರು ಸಮಸ್ಯೆಗಳ ನಡುವೆ ಬಿತ್ತನೆ ಬೀಜದ ದರ ಕೂಡ ಹೆಚ್ಚಾಗಿರುವುದು ದುರದೃಷ್ಟಕರವಾಗಿದೆ.

ಸದ್ಯ ಮುಂಗಾರು ಮಳೆ ಪ್ರಾರಂಭವಾಗುವ ಕಾರಣ ಕೃಷಿ ಚಟುವಟಿಕೆಗಳು ವೇಗವನ್ನು ಪಡೆದುಕೊಳ್ಳುತ್ತದೆ. ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳ ಬೆಳೆಯಲು ಬಿತ್ತನೆ ಬೀಜಗಳು ತುಂಬಾ ಅವಶ್ಯಕವಾಗಿದ್ದು, ಪ್ರಸ್ತುತ ಬಿತ್ತನೆ ಬೀಜಗಳ ದರ ಕಳೆದ ವರ್ಷಕ್ಕಿಂತ ಶೇ.60 ರಷ್ಟು ಹೆಚ್ಚಾಗಿರುವುದು ರೈತರ ಹೊರೆ ಹೆಚ್ಚಾದಂತಾಗಿದೆ.

ಮೊದಲೇ ಸಾಲದ ಸುಳಿಯಲ್ಲಿರುವ ರೈತರು ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗಿದೆ. ರಸಗೊಬ್ಬರ, ಬಿತ್ತನೆ ಬೀಜಗಳ ಮೇಲಿನ ಹೆಚ್ಚುವರಿ ದರವನ್ನು ಕಡಿಮೆ ಮಾಡಿ ನ್ಯಾಯಯುತವಾಗಿ ದರವನ್ನು ನಿಗದಿ ಮಾಡುವ ಮೂಲಕ ಸರ್ಕಾರ ರೈತರ ಹೊರೆಯನ್ನು ಕಡಿಮೆ ಮಾಡಲು ಸಹಕರಿಸಬೇಕು ಎಂದೂ ರೈತರ ಪರವಾಗಿ ಆಗ್ರಹಿಸೋಣ.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

■ ಟ್ರಾಫಿಕ್ ಪೊಲೀಸರಿಂದ ದೌರ್ಜನ್ಯ!

ಮಾನ್ಯರೇ,

ಮೊನ್ನೆ ಮೇ 29ರಂದು ರಾತ್ರಿ 9.45ರ ಸಮಯದಲ್ಲಿ ದಾಸಪ್ಪ ವೃತ್ತದ ಬಳಿ ಟ್ರಾಫಿಕ್ ಪೊಲೀಸರು ಬ್ಯಾರಿಕೇಡ್‌ಗಳನ್ನು ಹಾಕಿ 'ಡ್ರಂಕ್ ಅಂಡ್ ಡ್ರೈವ್' (ಕುಡಿದು ವಾಹನ ಚಾಲನೆ) ತಪಾಸಣೆ ನಡೆಸುತ್ತಿದ್ದರು. ರೂಟ್ ನಂ.307ರಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬ ಆ ಪೊಲೀಸರ ಮೇಲೆ 'ಏಕೆ ಜನರಿಗೆ ತೊಂದರೆ ಕೊಡುತ್ತೀರಿ? ನೀವು 9 ಗಂಟೆ ನಂತರ ಸಿದ್ದರಾಮಯ್ಯನವರಿಗೆ ಹೇಳಿ ಬಾರ್ ಬಂದ್ ಮಾಡಿಸಿ' ಎಂದು ಜೋರು ಧನಿಯಲ್ಲಿ ಹೇಳಿದ. ಬಹುಶಃ ಆತನೂ ಕುಡಿದಿದ್ದ ಅಂತ ಅನ್ನಿಸುತ್ತೆ. ಅದಕ್ಕೆ ಅಲ್ಲಿದ್ದ ಪೊಲೀಸ್ ಒಬ್ಬ ನಿನಗೆ ಮೀಟರ್ ಇದ್ದರೆ ಕೆಳಗೆ ಇಳಿದು ಮಾತನಾಡು ಎಂದ. ಹೀಗೆ ಮಾತಿಗೆ ಮಾತು ಬೆಳೆದು ಪೊಲೀಸರು ಆತನಿಗೆ ಒಂದು ಏಟು ಹೊಡೆದರು. ಅವನೂ ಪೊಲೀಸರ ಭುಜಕ್ಕೆ ಮುಟ್ಟಿದ ಅಷ್ಟೇ. ಅದಕ್ಕೆ ಇನ್ನುಳಿದ ಪೊಲೀಸರು ಬಸ್ಸನ್ನು ನಿಲ್ಲಿಸಿ, ಒಳಗೆ ಬಂದು ಆ ವ್ಯಕ್ತಿಯ ಮೇಲೆ ಮನಸೋಇಚ್ಛೆ ಥಳಿಸಿ ಹೋದರು. ಅವರಿಗೆ ಒಂದು ಕಾನೂನೇ? ನಮಗೆ ಒಂದು ಕಾನೂನೆ? ಪೊಲೀಸರು ಏನು ಬೇಕಾದರೂ ಮಾಡಬಹುದು. ಆದರೆ ಸಾರ್ವಜನಿಕರು ಇದನ್ನೆಲ್ಲಾ ನೋಡಿಕೊಂಡು ಸುಮ್ಮನೆ ಕುಳಿತಿರಬೇಕೆ? ಹೀಗೆ ಯದ್ವಾತದ್ವಾ ಕೈ ಮಾಡುವುದು ತಪ್ಪು. ಕಮಿಷನರ್ ಕಚೇರಿಯ ಸಿಬ್ಬಂದಿ ಇದನ್ನು ಸಿಸಿ ಕ್ಯಾಮರಾದಲ್ಲಿ ವೀಕ್ಷಿಸಿ, ಮುಂದೆ ಹೀಗಾಗದಂತೆ ಕ್ರಮ ಕೈಗೊಳ್ಳುವರೇ?

– ಮನೋಹರ್ ಆರ್., ಯಾದವಗಿರಿ, ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ನ್ಯಾಯಸುಧಾ ಮಂಗಳ

ಶ್ರೀ ಮನ್ಮಧ್ವಾಚಾರ್ಯರು ಪ್ರತಿಷ್ಠಾಪಿಸಿದ ದ್ವೈತ ಸಿದ್ಧಾಂತವು ಕಳೆದ ಏಳು ಶತಮಾನಗಳಲ್ಲಿ ಅನೇಕ ಆಚಾರ್ಯರಿಂದ, ವಿದ್ವಾಂಸರಿಂದ ಮತ್ತು ಗ್ರಂಥಕಾರರಿಂದ ಸಮೃದ್ಧವಾಗಿ ಬೆಳೆದು ದಾರ್ಶನಿಕ ಪ್ರಪಂಚದಲ್ಲಿ ರಾರಾಜ್ಯಮಾನವಾಗಿದೆ, ದೇದೀಪ್ಯಮಾನವಾಗಿ ಕಂಗೊಳಿಸುತ್ತಿದೆ. ಶ್ರೀ ಮಧ್ವಾಚಾರ್ಯರು ಮೂವತ್ತೇಳು ಗ್ರಂಥರತ್ನಗಳನ್ನು ರಚಿಸಿದರು. ಅವುಗಳಲ್ಲಿ ಬ್ರಹ್ಮಸೂತ್ರಗಳ ಮೇಲೆ ರಚಿತವಾಗಿರುವ ಅನುವ್ಯಾಖ್ಯಾನ ಎಂಬುದು ಅನರ್ಘ್ಯವಾದ ರಚನೆ. ದ್ವೈತ ದರ್ಶನದ ಸಾರಸರ್ವಸ್ವವೂ ಇದರಲ್ಲಿ ಅಡಗಿದೆ. ಇದು ಸಾಮಾನ್ಯರಿಗೂ ಗ್ರಾಹ್ಯವಾಗಲೆಂದು ಶ್ರೀ ಜಯತೀರ್ಥಾಚಾರ್ಯರು ರಚಿಸಿದ ಗ್ರಂಥವೇ ಶ್ರೀಮನ್ನ್ಯಾಯಸುಧಾ ಸಂಸ್ಕೃತ ದಾರ್ಶನಿಕ ಸಾಹಿತ್ಯದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಭಾವಿಸಲಾಗುವ ಈ ಗ್ರಂಥ ಪಾಂಡಿತ್ಯದ ಒರೆಗಲ್ಲಿ ನಂತಿದೆ. ಇದರ ರಚನೆಯಿಂದ ಜಯತೀರ್ಥರಿಗೆ ಟೀಕಾಚಾರ್ಯರೆಂಬ ಹೆಸರು ಬಂದಿದೆ. ನ್ಯಾಯಸುಧೆಯನ್ನು ಅಧ್ಯಯನ ಮಾಡಿದ ವಿದ್ವಾಂಸನೇ ನಿಜವಾದ ವಿದ್ವಾಂಸ ಎಂಬುದು ಮಾಧ್ವ ವೇದಾಂತ ಜಗತ್ತಿನ ಪ್ರಚಲಿತೋಕ್ತಿ. ಗುರು ಸನ್ನಿಧಿಯಲ್ಲಿ ಶ್ರೀಮನ್ನ್ಯಾಯಸುಧಾಧ್ಯಯನವನ್ನು ಮುಗಿಸಿದಾಗ ಮಾಡುವ ಮಹೋತ್ಸವವೇ ನ್ಯಾಯಸುಧಾ ಮಂಗಳ. ಯಾವುದೇ ವಿದ್ವಾಂಸನ ಬದುಕಿನಲ್ಲಿ ಇದೊಂದು ಅದ್ಭುತ ಕ್ಷಣ. ನ್ಯಾಯ ಸುಧಾಧ್ಯಾಪನವನ್ನು ಮಾಡಿದ ಗುರುಗಳಿಗೂ ಇದು ವಿಶಿಷ್ಟಾತಿವಿಶಿಷ್ಟ ಸಂದರ್ಭ. ಅಂತಹ ಅಮೃತಮಯ ಸಂದರ್ಭವು ಮೈಸೂರಿನಲ್ಲಿ ಈಗ ಆಸ್ತಿಕರ, ಸಂಸ್ಕೃತಿಪ್ರಿಯರ, ಸಂಸ್ಕೃತಾಭಿಮಾನಿಗಳ ಸುದೈವದಿಂದ ಒದಗಿ ಬಂದಿದೆ. ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀವ್ಯಾಸರಾಯ ಮಠದಲ್ಲಿ ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವವು ಇದೇ ಜೂನ್ ತಿಂಗಳಿನ ಎರಡನೆಯ ತಾರೀಖಿನಿಂದ ಹತ್ತನೆಯ ತಾರೀಖಿನವರೆಗೆ (2–6–2024 ರಿಂದ 10–6–2024) ಸಂಪನ್ನಗೊಳ್ಳಲಿದೆ. ಇದೆಲ್ಲ ಸುಸಂಪನ್ನವಾಗುತ್ತಿರುವುದು ವ್ಯಾಸರಾಜ ಮಠಾಧೀಶರಾದ ಶ್ರೀವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರ ಸತ್ಸಂಕಲ್ಪದಿಂದ.

ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು: ಜ್ಞಾನ, ಕರುಣೆ, ದೈವಭಕ್ತಿಗಳ ತ್ರಿವೇಣಿ ಸಂಗಮದಂತಿರುವ ಶ್ರೀಪಾದಂಗಳವರು ಪೂರ್ವಾಶ್ರಮದಲ್ಲಿ ಪ್ರೊ.ಡಿ.ಪ್ರಹ್ಲಾದಾಚಾರ್ಯರೆಂದು ಪ್ರಖ್ಯಾತರಾಗಿದ್ದ ಸಂಸ್ಕೃತ ವಿದ್ವತ್ತಲ್ಲಜರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರೂ, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಪತಿಗಳೂ ಆಗಿ ಸರಸ್ವತೀ ಸೇವೆಯನ್ನು ಸಲ್ಲಿಸಿದವರು. ನ್ಯಾಯ, ವೇದಾಂತ ಮುಂತಾದ ಶಾಸ್ತ್ರಗಳ ಪಾಂಡಿತ್ಯದಲ್ಲಿ ಇವರಿಗೆ ಇವರೇ ಸಾಟಿ ಎಂದು ದೇಶದ ಸಮಸ್ತ ವಿದ್ವಾಂಸರ ಒಮ್ಮತದ ಅಭಿಪ್ರಾಯವಾಗಿತ್ತು. ಅವರು ಶ್ರೀವಿದ್ಯಾಶ್ರೀಶತೀರ್ಥರೆಂಬ ಅಭಿಧಾನವನ್ನು ಸ್ವೀಕರಿಸಿ ಪೀಠಾರೋಹಣ ಮಾಡಿದ ಕ್ಷಣದಿಂದಲೇ ವ್ಯಾಸರಾಯ ಮಠವು ನಿಜವಾದ ವಿದ್ಯಾಕೇಂದ್ರವಾಯಿತು. ವೇದಗಳ ಮತ್ತು ಶಾಸ್ತ್ರಗಳ ಜ್ಞಾನಗಂಗೆಯು ಹರಿಯಲಾರಂಭಿಸಿತು. ಶ್ರೀವ್ಯಾಸತೀರ್ಥ ವಿದ್ಯಾಪೀಠದ ಆರಂಭದಿಂದ ಜ್ಞಾನಾಕಾಂಕ್ಷಿಗಳ ಕನಸು ನನಸಾಯಿತು. ಅದರ ಸುಫಲವೇ ಈಗ ನಡೆಯುತ್ತಿರುವ ಶ್ರೀಮನ್ನ್ಯಾಯಸುಧಾ ಮಂಗಳ ಮಹೋತ್ಸವ.

> "ಶ್ರೀಪಾದಂಗಳವರು ನ್ಯಾಯಸುಧಾ ಗ್ರಂಥದ ಆಮೂಲಾಗ್ರವಾದ ಅಧ್ಯಯನವನ್ನು ವಿದ್ಯಾರ್ಥಿಗಳಿಂದ ಮಾಡಿಸಿರುವುದಲ್ಲದೆ ಶ್ರೀವ್ಯಾಸರಾಯರ ಗ್ರಂಥಗಳನ್ನೂ ಕಲಿಸಿ ಅವರ ವೈದುಷ್ಯವು ಪರಿಪೂರ್ಣವಾಗುವಂತೆ ಮಾಡಿರುವುದು ದ್ವೈತ ವೇದಾಂತದ ವೈಜಯಂತಿಯನ್ನು ಜ್ಞಾನ ಗಗನದಲ್ಲಿ ಹಾರಿಸಿದಂತಾಗಿದೆ. ಆ ವ್ಯಾಸರಾಯರ ಬಗೆಗೆ ನಾಲ್ಕು ಮಾತುಗಳನ್ನಿಲ್ಲಿ ಹೇಳೋಣ.

ಶ್ರೀಪಾದಂಗಳವರು ನ್ಯಾಯಸುಧಾ ಗ್ರಂಥದ ಆಮೂಲಾಗ್ರವಾದ ಅಧ್ಯಯನವನ್ನು ವಿದ್ಯಾರ್ಥಿಗಳಿಂದ ಮಾಡಿಸಿರುವುದಲ್ಲದೆ ಶ್ರೀವ್ಯಾಸರಾಯರ ಗ್ರಂಥಗಳನ್ನೂ ಕಲಿಸಿ ಅವರ ವೈದುಷ್ಯವು ಪರಿಪೂರ್ಣವಾಗುವಂತೆ ಮಾಡಿರುವುದು ದ್ವೈತ ವೇದಾಂತದ ವೈಜಯಂತಿಯನ್ನು ಜ್ಞಾನ ಗಗನದಲ್ಲಿ ಹಾರಿಸಿದಂತಾಗಿದೆ. ಆ ವ್ಯಾಸರಾಯರ ಬಗೆಗೆ ನಾಲ್ಕು ಮಾತುಗಳನ್ನಿಲ್ಲಿ ಹೇಳೋಣ.

ಶ್ರೀವ್ಯಾಸರಾಯತೀರ್ಥರು: ವಿಜಯನಗರ ಸಾಮ್ರಾಜ್ಯವು ಉತ್ತುಂಗ ಸ್ಥಿತಿಗೆ ಏರಿದ್ದಾಗ ಆಳಿದ ಚಕ್ರವರ್ತಿ ಶ್ರೀಕೃಷ್ಣದೇವರಾಯ. ಆಗ ಸಾಮ್ರಾಜ್ಯವು ಸಂಪತ್ತಿನ ಬೀಡು, ಜ್ಞಾನದ ನಾಡು, ಕವಿಗಳ ಗೂಡು ಆಗಿದ್ದಿತು. ಚಕ್ರವರ್ತಿ ಕೃಷ್ಣದೇವರಾಯನಿಗೆ ಗುರುಗಳೂ ಮಾರ್ಗದರ್ಶಕರೂ ಆಗಿದ್ದವರು ಶ್ರೀವ್ಯಾಸರಾಯರು. ಕುಹೂ ಯೋಗವು ಬಂದಿದ್ದಾಗ ಚಕ್ರವರ್ತಿಗೆ ಕ್ರೂರ ಗ್ರಹಗಳ ಬಾಧೆಯು ತಗುಲಬಾರದೆಂದು ಶ್ರೀವ್ಯಾಸರಾಯರೇ ಸಿಂಹಾಸನದ ಮೇಲೆ ಕುಳಿತಿದ್ದರಂತೆ. ದರ್ಶನ ಕ್ಷೇತ್ರದಲ್ಲಿ ಅವರು ಕೊಟ್ಟ ಕೊಡುಗೆ ಅಪಾರ. ಅವರು ರಚಿಸಿದ ಮೂರು ಗ್ರಂಥಮಣಿಗಳು ನ್ಯಾಯಾಮೃತ, ಚಂದ್ರಿಕಾ ಮತ್ತು ತರ್ಕತಾಂಡವ. ಅವರ ಜೀವನ ಚರಿತ್ರೆಯನ್ನು ತಿಳಿಸುವ ಶ್ರೀವ್ಯಾಸರಾಜ ಚರಿತಮ್ ಎಂಬ ಗ್ರಂಥವೂ ಉಪಲಬ್ಧವಾಗಿದೆ. ಅವರು ಹುಟ್ಟಿದುದು ಮೈಸೂರಿಗೆ ಸಮೀಪದಲ್ಲಿರುವ ಬನ್ನೂರಿನಲ್ಲಿ. ಅವರು ಸ್ಥಾಪಿಸಿದ ಮಠವಿರುವುದು ಸೋಸಲೆ ಎಂಬ ಗ್ರಾಮದಲ್ಲಿ. ಇದನ್ನು ವ್ಯಾಸರಾಯಪುರ ಎಂದು ಕರೆಯುತ್ತಾರೆ. ಅವರ ಮೂರು ಗ್ರಂಥಗಳು ಸ್ವತಂತ್ರ ಚಿಂತನೆಯನ್ನು ಒಳಗೊಂಡಿದ್ದು ವ್ಯಾಸತ್ರಯೀ ಎಂದು ಪ್ರಸಿದ್ಧವಾಗಿವೆ. ಶ್ರೀ ವ್ಯಾಸರಾಯರನ್ನು ಕರ್ನಾಟಕ ವಿದ್ಯಾ ಸಿಂಹಾಸನಾಧೀಶ್ವರರೆಂದು ಅನ್ವರ್ಥವಾಗಿ ಕರೆಯುತ್ತಿದ್ದರು. ಅವರ ಕೀರ್ತಿಯು ಶಾಶ್ವತವಾಗಿರುವಂತೆ ಈಗ ಪೀಠದಲ್ಲಿ ವಿರಾಜಮಾನರಾಗಿರುವ ಶ್ರೀವಿದ್ಯಾಶ್ರೀಶತೀರ್ಥ ಮಹಾಸ್ವಾಮಿಗಳು ಶಿಷ್ಯರಿಗೆ ಈ ಗ್ರಂಥಗಳನ್ನೂ, ಅವುಗಳಿಗೆ ಮೂಲವಾದ ಶ್ರೀಮಧ್ವಾಚಾರ್ಯ ಗ್ರಂಥಗಳನ್ನೂ ಟೀಕಾಚಾರ್ಯ ವಿರಚಿತವಾದ ಶ್ರೀಮನ್ನ್ಯಾಯ ಸುಧೆಯನ್ನೂ ಬೋಧಿಸಿ ಆ ಶಿಷ್ಯರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಶೋಭಿಸುವಂತೆ ಮಾಡಿದ್ದಾರೆ. ಇದು ಸಂಸ್ಕೃತ ಸರಸ್ವತಿಗೆ ಅತ್ಯಂತ ಬೆಲೆ ಬಾಳುವ ಕೊಡುಗೆ ಎಂಬುದು ಸತ್ಯಸ್ಯ ಸತ್ಯ.

ಮಂಗಳ ಮಹೋತ್ಸವ ಎಂದರೇನು?

ಇಲ್ಲಿ ಮಹೋತ್ಸವ ಎಂದರೆ ಶೋಭಾಯಾತ್ರೆ, ವಾದ್ಯಾಡಂಬರ, ಭರ್ಜರಿ ಊಟ ಎಂದು ತಿಳಿಯಬಾರದು. ಈ ಸಂದರ್ಭದಲ್ಲಿ ನಾಡಿನ ಹಿರಿಯ, ನುರಿತ ವಿದ್ವಾಂಸರೂ, ಸರ್ವಜ್ಞಕಲ್ಪರಾದ ಅನೇಕ ಮಠಾಧಿಪತಿಗಳೂ ಉಪಸ್ಥಿತರಾಗಿರುತ್ತಾರೆ. ಅವರ ಸಭೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಒಳಗಾಗುತ್ತಾರೆ. ನ್ಯಾಯಸುಧಾ ಗ್ರಂಥದ ಯಾವ ಭಾಗವನ್ನು ಕೊಟ್ಟರೂ ಅದನ್ನು ಶಾಸ್ತ್ರೀಯವಾಗಿ ಸಂಸ್ಕೃತ ಭಾಷೆಯಲ್ಲಿ ಉಪಪಾದಿಸುತ್ತಾರೆ. ಉಪಸ್ಥಿತರಾದ ವಿದ್ವಾಂಸರು ಕೇಳುವ ಪ್ರಶ್ನೆಗಳಿಗೆ ಸಿದ್ಧಾಂತಾವಿರೋಧಿಯಾದ ಸಮರ್ಪಕ ಉತ್ತರಗಳನ್ನು ನೀಡುತ್ತಾರೆ. ನಿಜವಾಗಿ ಹೇಳಬೇಕೆಂದರೆ ಇದೊಂದು ಅಗ್ನಿಪರೀಕ್ಷೆ. ಮಹಾಕವಿ ಕಾಳಿದಾಸನು ಹೇಳುವಂತೆ –


ತಂ ಸಂತಃ ಶ್ರೋತುಮರ್ಹಂತಿ ಸದಸದ್ವ್ಯಕ್ತಿ ಹೇತವಃ ।
ಹೇಮ್ನಃ ಸಂಲಕ್ಷ್ಯತೇ ಹ್ಯಗ್ನೌ ವಿಶುದ್ಧಿಃ ಶ್ಯಾಮಿಕಾಪಿ ವಾ ॥

(ಆ ಮಾತುಗಳನ್ನು ವಿದ್ವಾಂಸರು ಕೇಳಬೇಕು. ಯಾವುದು ಸರಿ, ಯಾವುದು ತಪ್ಪು ಎಂದು ತೋರಿಸಲು ಅವರೇ ಶಕ್ತರು. ಚಿನ್ನವು ಶುದ್ಧವೋ ಬೆರಕೆಯದೋ ಎಂಬುದು ಗೊತ್ತಾಗುವುದು ಬೆಂಕಿಯಲ್ಲಿ ಹಾಕಿದಾಗ ಮಾತ್ರ.) ಚಿರಂಜೀವಿಗಳಾದ ಸೌಮಿತ್ರಿ ಆಚಾರ್ಯ, ಸುಘೋಷಾಚಾರ್ಯ, ಪ್ರಣವಾಚಾರ್ಯ, ಶ್ರೀಶಾಚಾರ್ಯ ಎಂಬ ನಾಲ್ವರು ಯುವ ವಿದ್ವಾಂಸರು ಈ ಪರೀಕ್ಷೆಯನ್ನು ಎದುರಿಸಲಿದ್ದಾರೆ. ಇದು ವಿದ್ಯಾಕುತೂಹಲಿಗಳಿಗೆಲ್ಲ ಒಂದು ಸುವರ್ಣಾವಕಾಶ. ಮೈಸೂರಿನಲ್ಲಿ ಸಂಸ್ಕೃತ ಲತೆಯು ಬಾಡಿಲ್ಲ, ನವೋನವವಾಗಿ ಜ್ಞಾನವು ಬೆಳೆಯುತ್ತಿದೆ ಎಂಬುದನ್ನು ಕಣ್ಣಾರೆ ಕಾಣುವ ಸಂದರ್ಭ.

ಜಯತು ಜಯತು ಲೋಕೇ ಸರ್ವದಾ ವ್ಯಾಸರಾಜೋ
ಜಯತು ಜಯತು ವಿದ್ಯಾಶ್ರೀಶ ಪಾಂಡಿತ್ಯ ಲಕ್ಷ್ಮೀಃ ।
ಜಯತು ಜಗತಿ ನಿತ್ಯಂ ಶಿಷ್ಯವರ್ಗಸ್ತದೀಯೋ
ಜಯತು ಸಕಲವಂದ್ಯಾ ಶಾರದಾ ಜ್ಞಾನದಾ ಸಾ॥

ಶ್ರೀವ್ಯಾಸತೀರ್ಥಯತಿ ವಚನಗಳು ಜಯಿಸಲಿ
ಜಗದಿ ವಿದ್ಯಾಶ್ರೀಶ ಪಾಂಡಿತ್ಯ ಜಯಿಸಲಿ।
ಅವರ ಶಿಷ್ಯರು ಲೋಕದಲ್ಲೆಲ್ಲ ಜಯಿಸಲಿ
ಶ್ರೀ ಶಾರದೆಯು ಸಕಲವಂದ್ಯೆ ತಾ ಜಯಿಸಲಿ॥

ನಮ್ಮ ಮೈಸೂರಿನ ಅಸಾಮಾನ್ಯರು



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದವರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



21.ದೇವಶಿಖಾಮಣಿ ಅಳಸಿಂಗರಾಚಾರ್ಯ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಈ ಹಿಂದೆ ಕನ್ನಡದಲ್ಲಿ ಅನುವಾದ ಮಾಡಿದ ಪವಿತ್ರ ಗ್ರಂಥಗಳಾದ ರಾಮಾಯಣ, ಭಾರತ, ಭಾಗವತಗಳು ಈಗಿನಂತೆ ಸುಲಭವಾಗಿ ಸಿಗದೆ ದುರ್ಲಭವಾಗಿತ್ತು. ಕಾರಣ ಅವು ಸಂಸ್ಕೃತದಲ್ಲೇ ಇದ್ದು ಕನ್ನಡಕ್ಕೆ ಅನುವಾದವಾಗದೇ ಇದ್ದದ್ದು. ಸಂಸ್ಕೃತ ಬಾರದವರು ಕನ್ನಡದ ಸಂಕ್ಷಿಪ್ತ ತರ್ಜುಮೆಗಳನ್ನೇ ಅವಲಂಬಿಸಬೇಕಾಗಿತ್ತು. ಅವುಗಳನ್ನು ಮೊಟ್ಟ ಮೊದಲ ಬಾರಿಗೆ ಕನ್ನಡ ಸಾಹಿತ್ಯಲೋಕಕ್ಕೆ ಕನ್ನಡಾನುವಾದ ಮಾಡಿಕೊಟ್ಟ ಕೀರ್ತಿ ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರದು. ಅವುಗಳನ್ನು ತರ್ಜುಮೆ ಮಾಡಿದ್ದಷ್ಟೇ ಅಲ್ಲದೆ ಅವುಗಳನ್ನು ಸಂಪುಟಗಳಲ್ಲಿ ಪ್ರಕಟಿಸಿ ಆ ಬೃಹತ್ ಗ್ರಂಥಗಳು ಸುಲಭವಾಗಿ ದೊರೆಯುವಂತೆ ಅವರು ಶ್ರಮವಹಿಸಿದರು.

'ಅಭಿನವ ಕಾಳಿದಾಸ' ಎಂದೇ ಖ್ಯಾತರಾಗಿದ್ದ ಕರಿಬಸಪ್ಪ ಶಾಸ್ತ್ರಿಗಳು ಮಹಾರಾಜರ ಆಸ್ಥಾನದ ಪಂಡಿತರು. ಹಲವಾರು ನಾಟಕಗಳನ್ನು ರಚಿಸಿ ತಮ್ಮದೇ ಛಾಪು ಮೂಡಿಸಿ ಕೀರ್ತಿ ಪಡೆದ ವಿದ್ವಾಂಸರು. ಮೈಸೂರಿನ ರಾಜ್ಯ ಗೀತೆ 'ಕಾಯೌಶ್ರೀ ಗೌರೀ' ಇವರ ರಚನೆ. ಇಂದಿಗೂ ಅರಮನೆಯ ಪ್ರಮುಖ ಕಾರ್ಯಕ್ರಮಗಳಲ್ಲಿ ಈ ಗೀತೆಯನ್ನು ನುಡಿಸಲಾಗುತ್ತಿದೆ. ಇವರು ರಚಿಸಿದ 'ಚಂಡಕೌಶಿಕ' ಸಂಸ್ಕೃತ ನಾಟಕದ ಕನ್ನಡ ಅನುವಾದ ಅಪೂರ್ಣವಾಗಿ ಉಳಿದಿತ್ತು. ಅಳಸಿಂಗರಾಚಾರ್ಯರ ಪಾಂಡಿತ್ಯದ ಅರಿವಿದ್ದ ಮೈಸೂರಿನ ಮಹಾರಾಜರು ಅದನ್ನು ಪೂರ್ಣಗೊಳಿಸಲು ಅಳಸಿಂಗರಾಚಾರ್ಯರನ್ನೇ ನೇಮಿಸಿದರು.

ಪಂಡಿತ ಅಳಸಿಂಗರಾಚಾರ್ಯರು ಪ್ರಸಿದ್ಧ ಶ್ರೀವೈಷ್ಣವ ಕ್ಷೇತ್ರವಾದ ಮೇಲುಕೋಟೆಯಲ್ಲಿ ಸಂಪ್ರದಾಯನಿಷ್ಠ ವಿದ್ವಾಂಸರ ಕುಟುಂಬದಲ್ಲಿ 1877ರ ಏಪ್ರಿಲ್ 18ರಂದು ಜನಿಸಿದರು. ತಂದೆ ಎಂ.ಡಿ. ತಿರುಮಲಯ್ಯಂಗಾರ್ಯರೇ ಮಗನನ್ನು ಸಂಸ್ಕೃತ ಹಾಗೂ ಕನ್ನಡದ ದೊಡ್ಡ ಪಂಡಿತರನ್ನಾಗಿ ತರಬೇತಿಗೊಳಿಸಿದರು. ಅಳಸಿಂಗರಾಚಾರ್ಯರು ಮೈಸೂರಿನ ಮರಿಮಲ್ಲಪ್ಪ ಶಾಲೆಯಲ್ಲಿ ಅಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿದರು. ನಂತರ ಮದ್ರಾಸ್ ಅಂದರೆ ಈಗಿನ ಚೆನ್ನೈಗೆ ತೆರಳಿ ಅಲ್ಲಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ 19 ವರ್ಷ, ಪ್ರೆಸಿಡೆನ್ಸಿ ಕಾಲೇಜಿನಲ್ಲಿ 11 ವರ್ಷ ತಮ್ಮ ವೃತ್ತಿ ಮುಂದುವರಿಸಿದರು. ಕ್ವೀನ್ಸ್ ಮೇರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದುದರ ಜೊತೆಗೆ ಮದ್ರಾಸ್ ವಿಶ್ವವಿದ್ಯಾನಿಲಯದ ಕೆಲವು ಸಮಿತಿಗಳ ಸದಸ್ಯರೂ ಆಗಿದ್ದರು.

ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಹಲವಾರು ಕೃತಿಗಳನ್ನು ಪ್ರಕಟಿಸಿದ್ದ ಚೆನ್ನೈನ ಆನಂದ ಪ್ರೆಸ್ ಮತ್ತು ಶ್ರೀನಿವಾಸ ಪ್ರೆಸ್ ಅಳಸಿಂಗರಾಚಾರ್ಯರಿಗೆ ಸಹಾಯಕರಾಗಿ ನೆರವಾದರು. ಜೊತೆಗೆ ಅಳಸಿಂಗರಾಚಾರ್ಯರು ತಮ್ಮನ್ನು ಸಂಪೂರ್ಣವಾಗಿ ಕನ್ನಡ ಸಾಹಿತ್ಯ ಕೃತಿಗಳ ರಚನೆಯ ಕಾರ್ಯದಲ್ಲಿ ತೊಡಗಿಸಿಕೊಂಡರು. ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಇತ್ಯಾದಿ ವಿಷಯಗಳನ್ನು ಕುರಿತಂತೆ ಉಪನ್ಯಾಸಗಳನ್ನು ಮಾಡುವುದರಲ್ಲಿಯೂ ಅವರು ಪರಿಣತರಾಗಿದ್ದರು. ಹೀಗಾಗಿ ಅವರು ಸಾಮಾನ್ಯರು ಹಾಗೂ ಪ್ರಾಜ್ಞರ ನಡುವೆ ಸಂಬಂಧ ಕಲ್ಪಿಸುವ ಕೊಂಡಿಯಂತಾದರು. ತಾವೇ ಖ್ಯಾತ ವಿದ್ವಾಂಸರಾಗಿದ್ದರೂ ಅವರದಾದರೋ ಸಾಮಾನ್ಯರ ಬದುಕಾಗಿತ್ತು. ಡಿ.ವಿ.ಗುಂಡಪ್ಪನವರು ಅವರನ್ನು ಆಗಾಗ್ಗೆ ಸ್ಮರಿಸಿಕೊಳ್ಳುತ್ತಿದ್ದರಲ್ಲದೆ 1940ರ ಮೇ ತಿಂಗಳಲ್ಲಿ ನಡೆದ ಸಂಸ್ಕೃತ ವಿದ್ವಾಂಸರ ಸಮ್ಮೇಳನದ ಅಧ್ಯಕ್ಷತೆಯನ್ನು ಅವರು ವಹಿಸಿದ್ದಾಗ ಅಳಸಿಂಗರಾಚಾರ್ಯರನ್ನು ಗೌರವಿಸಲಾಯಿತು.

ಅಳಸಿಂಗರಾಚಾರ್ಯರು ಮೂರು ದಶಕಗಳ ಕಾಲ ಮದ್ರಾಸಿನಲ್ಲಿ ವಾಸವಾಗಿದ್ದಾಗ ಹಲವಾರು ಸಾಹಿತ್ಯ ಕೃತಿಗಳನ್ನು ರಚಿಸಿದರು.

ಕಾದಂಬರಿಗಳಲ್ಲದೆ ಅವರು ಧರ್ಮ, ನಾಟಕ, ಜೀವನ ಚರಿತ್ರೆ, ವಿಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ಪುಸ್ತಕಗಳನ್ನು ಬರೆದರು. ಅಲ್ಲದೆ ಕೀರ್ತನೆಗಳನ್ನು, ಬಿಡಿ ಪದ್ಯಗಳನ್ನೂ ರಚಿಸಿದರು. ರಾಮಾಯಣ, ಮಹಾಭಾರತ ಮತ್ತು ಭಾಗವತ ಕನ್ನಡದ ಕೃತಿಗಳು ಅವರನ್ನು ಕನ್ನಡ ಸಾಹಿತ್ಯಲೋಕದಲ್ಲಿ ಅಜರಾಮರರನ್ನಾಗಿ ಮಾಡಿವೆ ಎಂದರೆ ಉತ್ಪ್ರೇಕ್ಷೆಯ ಮಾತಲ್ಲ. ಅಂತಹ ವಿಶಿಷ್ಟ ಕಾಣಿಕೆ ನೀಡಿದ ಅಳಸಿಂಗರಾಚಾರ್ಯರು 1940ರ ಡಿಸೆಂಬರ್ 5ರಂದು ತಮ್ಮ 64ನೇ ವಯಸ್ಸಿನಲ್ಲಿ ಕೀರ್ತಿಶೇಷರಾದರು.

ವಾಲ್ಮೀಕಿಯ ಸಂಸ್ಕೃತದ ಶ್ರೀಮದ್ ರಾಮಾಯಣವನ್ನು ಅವರು 8 ಸಂಪುಟಗಳಲ್ಲಿ ಕನ್ನಡಕ್ಕೆ ತಂದರೆ, ವ್ಯಾಸ ಮಹರ್ಷಿಯ ಸಂಸ್ಕೃತ ಮಹಾಭಾರತದ ಕನ್ನಡ ಗದ್ಯರೂಪಕ 17 ಸಂಪುಟಗಳಿಗೆ ವಿಸ್ತರಿಸಿದೆ. ಅವರು ಬರೆದ ಭಾಗವತವೂ ಎಂಟು ಸಂಪುಟಗಳಿವೆ. ಅವಲ್ಲದೆ ಉತ್ತರ ರಾಮಾಯಣವನ್ನು ಎರಡು ಸಂಪುಟಗಳಲ್ಲಿ ಕನ್ನಡದಲ್ಲಿ ಹೊರತಂದರು. ಯಾವ ಪ್ರಚಾರವನ್ನೂ ಬಯಸದೆ ತಮ್ಮ ಪಾಡಿಗೆ ತಾವು ಕೃತಿಗಳನ್ನು ರಚಿಸಿ 20ನೇ ಶತಮಾನದ ಎರಡು ಮತ್ತು ಮೂರನೆಯ ದಶಕದಲ್ಲಿ ಮದ್ರಾಸಿನ ಕರ್ನಾಟಕ ಬುಕ್ ಡಿಪೋ, ವೆಂಕಟೇಶ್ವರ ಅಂಡ್ ಕಂಪನಿ ಹಾಗೂ ಶ್ಯಾಮ್ ಪ್ರಿಂಟರ್ಸ್ ಮೂಲಕ ಪ್ರಕಟಿಸಿದರು.

ರಾಮಾಯಣದ ಹಕ್ಕನ್ನು ಆನಂದ ಪ್ರೆಸ್ಸಿನವರಿಗೆ ಮಾರಿ ಆ ಹಣದಿಂದ ಮಹಾಭಾರತ, ಭಾಗವತಗಳನ್ನು ಅಚ್ಚು ಮಾಡಿಸಿದರು. ಹಲವು ದಶಕಗಳ ನಂತರ 2000ರಿಂದ 2002ರಲ್ಲಿ ಇವರ ಮಹಾಭಾರತ ಗ್ರಂಥವನ್ನು ಬೆಂಗಳೂರಿನ ಭಾರತೀಯ ವಿದ್ಯಾ ಭವನವೂ, ಶ್ರೀಮದ್ ವಾಲ್ಮೀಕಿ ರಾಮಾಯಣವನ್ನು 2012–13 ಮತ್ತು ಶ್ರೀಮದ್ಭಾಗವತವನ್ನು ಮೈಸೂರಿನ ಸಂಸ್ಕೃತಿ ಫೌಂಡೇಷನ್ ಚಿತ್ರಗಳನ್ನು ಒಳಗೊಂಡಂತೆ ಪುನರ್ ಮುದ್ರಿಸಿದವು. ಕೇವಲ ಒಂದು ವ್ಯಕ್ತಿ ಯಾವುದೇ ನೆರವಿಲ್ಲದೆ ಸುಮಾರು 13,000 ಪುಟಗಳಷ್ಟು ಪುರಾಣ ಗ್ರಂಥಗಳನ್ನು ಕನ್ನಡದಲ್ಲಿ ರಚಿಸಿ, ತಮ್ಮ ಜೀವಿತಾವಧಿಯಲ್ಲೇ ಪ್ರಕಟಿಸಿದ್ದು ಸಾಹಿತ್ಯ ಚರಿತ್ರೆಯಲ್ಲೊಂದು ಅದ್ವಿತೀಯ ಸಾಧನೆ ಎನ್ನಬೇಕು. ಅಂತಹ ಮಹತ್ತರ ಕಾರ್ಯವನ್ನು ಪಂಡಿತ ಅಳಸಿಂಗರಾಚಾರ್ಯರು ಸಾಧಿಸಿ ಕೀರ್ತಿಶೇಷರಾಗಿದ್ದಾರೆ.

ಆಚಾರ್ಯರು ಸಂಸ್ಕೃತದಲ್ಲಿ ಪಾಂಡಿತ್ಯವನ್ನು ಹೊಂದಿದ್ದರೂ ಸಂಸ್ಕೃತ ವಿದ್ವತ್ ಪರೀಕ್ಷೆಯನ್ನು ತೆಗೆದುಕೊಳ್ಳದೆ ಕನ್ನಡ ಪಂಡಿತ ಪರೀಕ್ಷೆಯನ್ನು ತೆಗೆದುಕೊಂಡು 'ಪಂಡಿತ ದೇವಶಿಖಾಮಣಿ' ಎನಿಸಿಕೊಂಡಿದ್ದರೆಂಬುದು ಗಮನಾರ್ಹ. ಅವರ ಕೃತಿಗಳಲ್ಲಿ 'ಪಂಚಭಾಷಾ ಪ್ರಹಸನ', ಅದ್ಭುತ ರಾಮಾಯಣವನ್ನು ಆಧರಿಸಿದ 'ಶ್ರೀಮತಿ ಪರಿಣಯ', 'ಸ್ವಪ್ನ ವಾಸವದತ್ತ' ನಾಟಕಗಳೂ, 'ಪಂಚರಾತ್ರ ರೂಪಕ', 'ಚೆಲುವನಾರಾಯಣ ಶತಕ', 'ಶ್ರೀಮದ್ ಭಗವದ್ಗೀತೆ', 'ಪಾರ್ಥಸಾರಥಿ ಶತಕ', 'ಅಜ್ಞಾತವಾಸ', ದೇವರನಾಮಗಳು ಇತ್ಯಾದಿ ಸೇರಿವೆ. ಅವರು ಬರೆದ ಕೆಲವು ಕೃತಿಗಳು ಅಲಭ್ಯವಾಗಿವೆ ಎನ್ನಲಾಗಿದೆ.

ದೇಶ ವಿದೇಶಗಳಲ್ಲಿ ಪ್ರಕಟವಾದ ಹಲವಾರು ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಪಟ್ಟ ಇಂಗ್ಲಿಷ್ ಲೇಖನಗಳನ್ನು ಅವರು ಕನ್ನಡಕ್ಕೆ ತಂದಿದ್ದಾರೆ. ಅವರ ಈ ಕನ್ನಡ ಲೇಖನಗಳನ್ನು ಡಾ.ಯು. ರಾಮರಾವ್ ಮತ್ತು ಡಾ.ಯು. ಕೃಷ್ಣರಾವ್ ಅವರು ತಾವು ಸಂಪಾದಿಸಿ ಪ್ರಕಟಿಸುತ್ತಿದ್ದ 'ಆರೋಗ್ಯ ಚಂದ್ರಿಕೆ' ಮಾಸ ಪತ್ರಿಕೆಯಲ್ಲಿ ಸತತವಾಗಿ ಹನ್ನೆರಡು ವರ್ಷಗಳು ಪ್ರಕಟಿಸಿದ್ದಾರೆ.

ಉಭಯ ಭಾಷಾ ಪಂಡಿತರಾಗಿದ್ದ ಅಳಸಿಂಗರಾಚಾರ್ಯರದು ವಿದ್ವತ್ತಿಗೆ ತಕ್ಕಂತೆ ಉದ್ದನೆಯ ವ್ಯಕ್ತಿತ್ವ. ಮೇಲುಕೋಟೆಯ ಕಚ್ಚೆ ಪಂಚೆ, ಕೋಟು, ಮೈಸೂರು ಪೇಟ ಮತ್ತು ಕೋಲು ಹಿಡಿದು ಕಾಲೇಜಿಗೆ ಹೊರಟರೆ ಬೀದಿಗಳಲ್ಲಿ ಜಗಲಿಯ ಮೇಲೆ ಕುಳಿತ ಹೆಂಗಸರೆಲ್ಲರೂ ಗೌರವದಿಂದ ಎದ್ದು ನಮಸ್ಕರಿಸುತ್ತಿದ್ದರಂತೆ. ಇವರಿಗೆ ಒಟ್ಟು ಐದು ಮಂದಿ ಹೆಣ್ಣು ಮಕ್ಕಳು, ಮೂವರು ಗಂಡು ಮಕ್ಕಳು. ಮೊದಲ ಪತ್ನಿಯಲ್ಲಿ ಇಬ್ಬರು ಹೆಣ್ಣು ಮಕ್ಕಳಾದರೆ ಉಳಿದ ಮೂರು ಹೆಣ್ಣು ಮತ್ತು ಮೂರು ಗಂಡು ಮಕ್ಕಳು ಎರಡನೇ ಪತ್ನಿಯ ಮಕ್ಕಳು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಭಾನುವಾರ 2 ಜೂನ್ 2024

ಕಳೆದ ವರ್ಷದ ಬರದಿಂದ ಮೈಸೂರಲ್ಲಿ ಮೀನಿಗೂ ಬರ!

● ಬಾಪುಲಿಂಗರಾಜ್ ಅರಸ್

- ಮಾರುಕಟ್ಟೆಯಲ್ಲಿ ಮೀನು ಬೆಲೆ ದುಬಾರಿ
- ಮೀನು ಕೃಷಿ ಕುಸಿತ, ಸಾಕಾಣಿಕೆದಾರರು ಕಂಗಾಲು
- ಮೀನುಗಾರಿಕೆ ಗುತ್ತಿಗೆದಾರರಿಗೆ ಭಾರಿ ನಷ್ಟ
- ಸಮುದ್ರ ಭಾಗದಲ್ಲೂ ಮತ್ಸ್ಯ ಕ್ಷಾಮ
- ಲೈಟ್ ಫಿಶಿಂಗ್ ಇದಕ್ಕೆಲ್ಲಾ ಮೂಲ ಕಾರಣ


ಸಂಗ್ರಹ ಚಿತ್ರ

ಮೈಸೂರು, ಜೂ.1– ಕಳೆದ ವರ್ಷ ಎದುರಾದ ಭೀಕರ ಬರಗಾಲದಿಂದ ಈ ಬಾರಿ ಮತ್ಸ್ಯ ಕ್ಷಾಮ ಎದುರಾಗಿದೆ. ವಾಡಿಕೆಗಿಂತ ಕಡಿಮೆ ಮಳೆಯಾದ ಹಿನ್ನೆಲೆಯಲ್ಲಿ ಕೆರೆಗಳು ಬತ್ತಿ ಮೀನು ಸಾಕಾಣಿಕೆ ಕುಸಿದಿದೆ. ಮೀನಿಗೆ ಬರ ಬಂದ ಹಿನ್ನೆಲೆಯಲ್ಲಿ ಸಹಜವಾಗಿ ಬೆಲೆ ಕೂಡ ದುಬಾರಿಯಾಗಿದೆ.

ಕಳೆದ ವರ್ಷದ ಬರ ಪರಿಸ್ಥಿತಿ ಈ ಬಾರಿ ಬಹಳಷ್ಟು ಪರಿಣಾಮಗಳನ್ನು ಉಂಟು ಮಾಡಿದೆ. ರೈತಾಪಿ ವರ್ಗದವರು ಮಾತ್ರವಲ್ಲ ಮೀನು ಸಾಕಾಣಿಕೆದಾರರು ಕಂಗಾಲಾಗಿದ್ದಾರೆ. ಲಕ್ಷಾಂತರ ರೂ. ಖರ್ಚು ಮಾಡಿ, ಮೀನು ಸಾಕಾಣಿಕೆಗೆ ಕೆರೆಗಳ ಗುತ್ತಿಗೆ ಪಡೆದವರು ನಷ್ಟ ಅನುಭವಿಸಿದ್ದಾರೆ.

ಮೈಸೂರು ಜಿಲ್ಲೆಯ 98 ಸರ್ಕಾರಿ ಕೆರೆಗಳ 4093 ಹೆಕ್ಟೇರ್ ಪ್ರದೇಶದಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ. 3 ಜಲಾಶಯದ 8585 ಹೆಕ್ಟೇರ್‌ನಲ್ಲೂ ಮೀನು ಸಾಕಲಾಗುತ್ತಿದೆ. ನದಿ ಭಾಗದ 12 ಟ್ಯಾಂಕ್‌ಗಳ 215 ಕಿಲೋಮೀಟರ್ ವ್ಯಾಪ್ತಿ ಹಾಗೂ ಗ್ರಾಮ ಪಂಚಾಯಿತಿ 2 ಕೆರೆಯ 76 ಹೆಕ್ಟೇರ್‌ನಲ್ಲಿ ಮೀನು ಸಾಕಾಣಿಕೆ ಮಾಡಲಾಗುತ್ತಿದೆ.

ಸಾಮಾನ್ಯವಾಗಿ ಬೇಡಿಕೆ ಇರುವ ಕಾಟ್ಲಾ, ಕಾಮನ್ ಕಾರ್ಪ್, ರೋಹು, ಮೃಗಾಲ್, ಹುಲ್ಲುಗೆಂಡೆ ಮೀನುಗಳನ್ನು ಸಾಕಾಣಿಕೆ ಮಾಡಲಾಗುತ್ತದೆ. ಇದರಲ್ಲಿ ಕಾಟ್ಲಾ ಹಾಗೂ ಕಾಮನ್ ಕಾರ್ಪ್‌ಗೆ ತುಂಬಾ ಬೇಡಿಕೆ ಹಾಗೂ ಬೆಲೆ ಕೂಡ ಹೆಚ್ಚಾಗಿರುತ್ತದೆ. ದೊಡ್ಡ ಮೀನುಗಳಿಗೆ ಬೇಡಿಕೆ ಹೆಚ್ಚಿರುತ್ತದೆ. ಪ್ರತಿ ವರ್ಷ ಈ ಭಾಗದಲ್ಲಿ ಸರಾಸರಿ 200 ಲಕ್ಷ ಮೀನಿನ ಮರಿ ಬಿತ್ತಲಾಗುತ್ತದೆ. ಆದರೆ ಕಳೆದ ವರ್ಷ ಭೀಕರ ಬರಗಾಲ ಎದುರಾದ ಕಾರಣ ಕೆರೆಗಳಿಲ್ಲದೆ ಇದ್ದರಿಂದ 160 ಲಕ್ಷ ಮೀನಿನ ಮರಿಗಳನ್ನು ಮಾತ್ರ ಬಿತ್ತಲಾಯಿತು.

ಮೀನಿನ ಮರಿಗಳನ್ನು ಕಡಿಮೆ ಪ್ರಮಾಣದಲ್ಲಿ ಬಿತ್ತನೆ ಮಾಡಿದ ಕಾರಣ ಉತ್ಪಾದನೆ ಕೂಡ ಕುಸಿಯಿತು. ಮೈಸೂರು ಜಿಲ್ಲೆಯಲ್ಲಿ ಪ್ರತಿ ವರ್ಷ ಸರಾಸರಿ 24 ಲಕ್ಷ ಟನ್ ಮೀನು ಉತ್ಪಾದನೆ ಆಗುತ್ತಿತ್ತು. ಆದರೆ ಈ ವರ್ಷ ಸುಮಾರು 3ರಿಂದ 4 ಲಕ್ಷ ಟನ್ ಮೀನು ಉತ್ಪಾದನೆ ಕಡಿಮೆಯಾಗಿದೆ. ಖಾಸಗಿ ಮೀನು ಸಾಕಾಣಿಕೆದಾರರು ತೊಟ್ಟಿಗಳನ್ನು ನಿರ್ಮಾಣ ಮಾಡಿ ಮೀನು ಕೃಷಿ ಮಾಡುತ್ತಿದ್ದರು. ಆದರೆ, ಕಳೆದ ವರ್ಷ ಅಂತರ್ಜಲ ಕಡಿಮೆಯಾಗಿ ಬೋರ್‌ವೆಲ್‌ಗಳು ಬತ್ತಿ ಹೋಯಿತು. ಇದರಿಂದ ಖಾಸಗಿ ಮೀನು ಸಾಕಾಣಿಕೆದಾರರ ಮೀನು ಉತ್ಪಾದನೆ ಕೂಡ ಕುಸಿಯಿತು.

ಕೆರೆ ಹಾಗೂ ತೊಟ್ಟಿಗಳಲ್ಲಿ ಮಾಡುವ ಮೀನು ಸಾಕಾಣಿಕೆ ಜೊತೆಗೆ ನದಿಗಳ ಮೀನು ಕೃಷಿ ಕೂಡ ಕುಸಿದಿದೆ. ಮಳೆ ಇಲ್ಲದೆ ಜಲಾಶಯಗಳ ನೀರಿನ ಮಟ್ಟವೂ ಕುಸಿದ ಕಾರಣ ಅಲ್ಲಿ ಕೂಡ ಮೀನು ಕೃಷಿ ಮೇಲೆ ಭಾರಿ ಹೊಡೆತ ಬಿದ್ದಿದೆ.

ಈ ಬಾರಿ ಮಾರುಕಟ್ಟೆಯಲ್ಲಿ ಮೀನುಗಳ ಪ್ರಮಾಣ ಕಡಿಮೆ ಇರುವ ಕಾರಣ ಬೆಲೆ ಕೂಡ ದುಬಾರಿಯಾಗಿದೆ. ಕೆರೆಯಲ್ಲೇ ಹಿಡಿದು ಮಾರಾಟ ಮಾಡುತ್ತಿದ್ದ ಮೀನು ಕೆ.ಜಿ. 80ರಿಂದ 100 ರೂ. ಇರುತ್ತಿತ್ತು. ಈ ವರ್ಷ 100 ರಿಂದ 120 ರೂಪಾಯಿಗೆ ಹೆಚ್ಚಳವಾಗಿದೆ.

ಇನ್ನು ಮಾರುಕಟ್ಟೆಯಲ್ಲಿ ಕೆ.ಜಿ.ಗೆ 120 ರಿಂದ 140 ರೂ. ಇದ್ದ ಮೀನು ಈ ವರ್ಷ 140 ರಿಂದ 160 ರೂ.ಗೆ ಹೆಚ್ಚಳವಾಗಿದೆ. ಬರಗಾಲದ ಕಾರಣ ಹಣ್ಣು, ತರಕಾರಿ ಬೆಲೆ ದುಬಾರಿಯಾದಂತೆ ಮೀನುಗಳ ಬೆಲೆ ಕೂಡ ದುಬಾರಿಯಾಗಿದೆ.

ಕೆರೆ, ಖಾಸಗಿ ತೊಟ್ಟಿ ಹಾಗೂ ನದಿ ಭಾಗದ ಮತ್ಸ್ಯ ಕ್ಷಾಮದ ಜೊತೆಗೆ ಕರಾವಳಿ ಭಾಗದಲ್ಲಿ ಕೂಡ ಮತ್ಸ್ಯಕ್ಕೆ ಬರ ಬಂದಿದೆ. ಸಮುದ್ರದಲ್ಲಿ ಮೀನುಗಳು ಅಷ್ಟಾಗಿ ಸಿಗದ ಕಾರಣ ಬಂದರುಗಳಲ್ಲಿ ಸಾವಿರಾರು ದೋಣಿಗಳು ಸಮುದ್ರ ತಟದಲ್ಲೇ ಲಂಗರು ಹಾಕಿ ನಿಂತಿವೆ.

ಸಮುದ್ರದಲ್ಲಿ ಲೈಟ್ ಫಿಶಿಂಗ್ ಮಾಡುತ್ತಿರುವುದು ಮತ್ಸ್ಯ ಕ್ಷಾಮಕ್ಕೆ ಪ್ರಮುಖ ಕಾರಣವಾಗಿದೆ. ಅಕ್ರಮವಾಗಿ ಮೀನುಗಾರಿಕೆ ಮಾಡುವವರು ಬೋಟ್‌ನಲ್ಲಿ ಜನರೇಟರ್ ಹಾಗೂ ದೊಡ್ಡ ಲೈಟ್‌ಗಳನ್ನು ಅಳವಡಿಸಿ ಮೀನುಗಾರಿಕೆ ಮಾಡುತ್ತಾರೆ. ಬೆಳಕಿಗೆ ಆಕರ್ಷಿತವಾಗುವ ಸಣ್ಣ ಸಣ್ಣ ಮೀನುಗಳು ಸಾವನ್ನಪ್ಪುತ್ತಿವೆ. ಈ ಕಾರಣದಿಂದ ಸಮುದ್ರದಲ್ಲಿ ಕೂಡ ಮತ್ಸ್ಯ ಕ್ಷಾಮ ಎದುರಾಗಿದೆ. ಈ ಕಾರಣದಿಂದ ಸಮುದ್ರದಲ್ಲಿ ಕಡಲ ಮಕ್ಕಳಿಗೆ ಮೀನು ಸಿಗದೆ ಚಿಂತಾಕ್ರಾಂತರಾಗಿದ್ದಾರೆ. ಸಮುದ್ರದ ಮೀನುಗಳು ಕೂಡ ಮಾರುಕಟ್ಟೆಗೆ ನಿರೀಕ್ಷಿತ ಮಟ್ಟದಲ್ಲಿ ಬರುತ್ತಿಲ್ಲ. ದಿನ ಕಳೆದಂತೆ ಮೀನಿಗೆ ಮತ್ತಷ್ಟು ಬೇಡಿಕೆ ಹೆಚ್ಚಾಗುತ್ತಿದೆ. ಈ ಕಾರಣದಿಂದ ಮೀನು ಬೆಲೆ ದುಬಾರಿಯಾಗಿದೆ. ಬರಗಾಲ ಸೇರಿದಂತೆ ಹಲವು ಕಾರಣಗಳಿಂದ ಆಹಾರಕ್ಕೆ ತತ್ವಾರ ಎದುರಾಗುತ್ತಿರುವುದು ಆತಂಕಕಾರಿ ವಿಚಾರ.

ಮೀನು ಸಾಕಾಣಿಕೆದಾರರಿಗೆ ಪರಿಹಾರ ನೀಡುವ ಬಗ್ಗೆ ಚಿಂತನೆ

“ಮೈಸೂರು ಜಿಲ್ಲೆಯಲ್ಲಿ ಮೀನು ಸಾಕಾಣಿಕೆಯಿಂದ ಮೀನುಗಾರಿಕೆ ಇಲಾಖೆಗೆ ಪ್ರತಿ ವರ್ಷ 90 ಲಕ್ಷ ರೂ. ಆದಾಯ ಬರುತ್ತದೆ. ಆದರೆ ಕಳೆದ ವರ್ಷ ಬರಗಾಲದ ಕಾರಣ ಮೀನು ಸಾಕಾಣಿಕೆ ಕುಸಿದಿದೆ. ಇದರಿಂದ ಸಹಜವಾಗಿಯೇ ಮೀನು ಉತ್ಪಾದನೆ ಕಡಿಮೆಯಾಗಿದೆ.

ಇದರಿಂದ ಮೀನು ಸಾಕಾಣಿಕೆದಾರರು ನಷ್ಟಕ್ಕೊಳಗಾಗಿದ್ದಾರೆ. ಇವರಿಗೆ ಪರಿಹಾರ ನೀಡುವ ಸಂಬಂಧ ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಮೀನು ಸಾಕಾಣಿಕೆಗೆ ಕೆರೆಗಳನ್ನು ಗುತ್ತಿಗೆ ಪಡೆಯುವ ವೇಳೆ ಮೀನುಗಾರಿಕೆ ಇಲಾಖೆಗೆ ಗುತ್ತಿಗೆದಾರರು ಹಣ ಪಾವತಿ ಮಾಡಿರುತ್ತಾರೆ. ಈಗ ನಷ್ಟಕ್ಕೊಳಗಾದ ಗುತ್ತಿಗೆದಾರರಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಅವರು ಪಾವತಿ ಮಾಡಿರುವ ಹಣದಲ್ಲಿ ಶೇಕಡ 20ರಿಂದ 25ರಷ್ಟು ಹಣ ಕಡಿಮೆ ಮಾಡಬಹುದು.

ಇದು ಸಾಧ್ಯವಾಗದಿದ್ದರೆ ಮುಂದಿನ ಬಾರಿ ಗುತ್ತಿಗೆ ಅವಧಿಯನ್ನು ವಿಸ್ತರಣೆ ಮಾಡಬಹುದು. ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಸರ್ಕಾರ ಏನು ತೀರ್ಮಾನ ಕೈಗೊಳ್ಳುತ್ತದೆ ಎಂದು ನೋಡಬೇಕಿದೆ. ಕಳೆದ ವರ್ಷ ಬರಗಾಲ ಬಂದ ಕಾರಣ ಮೀನು ಕೃಷಿಗೆ ಹೊಡೆತ ಬಿದ್ದಿತ್ತು.

ಕೆರೆಗಳು ಬತ್ತಿ ಹೋಗಿತ್ತು, ಅಂತರ್ಜಲ ಕಡಿಮೆಯಾಗಿತ್ತು. ಇದರಿಂದ ನಿಗದಿತ ಸಂಖ್ಯೆಯಷ್ಟು ಮೀನು ಬಿತ್ತನೆ ಮಾಡಲು ಸಾಧ್ಯವಾಗದೆ 160 ಲಕ್ಷ ಮೀನು ಮಾತ್ರ ಬಿತ್ತನೆ ಮಾಡಲಾಗಿತ್ತು. ಆದರೆ ಈ ಬಾರಿ ಪೂರ್ವ ಮುಂಗಾರಲ್ಲಿ ಉತ್ತಮ ಮಳೆಯಾಗಿದೆ. ಜೊತೆಗೆ ನೈರುತ್ಯ ಮುಂಗಾರಲ್ಲಿ ಕೂಡ ಹೆಚ್ಚು ಮಳೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಇದರಿಂದ ಕೆರೆಗಳು ಭರ್ತಿಯಾಗಲಿದ್ದು, ಈ ಬಾರಿ ಉತ್ತಮ ಮೀನು ಕೃಷಿ ನಿರೀಕ್ಷಿಸಬಹುದು.

–ಜಿ.ಹೆಚ್.ಮಂಜುನಾಥ್, ಉಪನಿರ್ದೇಶಕ, ಮೀನುಗಾರಿಕೆ ಇಲಾಖೆ, ಮೈಸೂರು.

ವಿಶ್ವ ಪರಿಸರ ದಿನಾಚರಣೆ: ಚಿತ್ರಕಲಾ ಸ್ಪರ್ಧೆ



ಮೈಸೂರು, ಜೂ. 1(ಆರ್‌ಕೆ)– ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮೈಸೂರಿನ ರಂಗಾಯಣ ಆವರಣದಲ್ಲಿ ಶನಿವಾರ ಶಾಲಾ ಮಕ್ಕಳಿಗಾಗಿ ಚಿತ್ರಕಲಾ ಮತ್ತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು.

ಮೈಸೂರು ಜಿಲ್ಲಾಡಳಿತ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ‘ಭೂ ಮರುಸ್ಥಾಪನೆ, ಮರು ಭೂಮೀಕರಣ ಹಾಗೂ ಬರ ತಡೆಯುವಿಕೆ’ ವಿಷಯ ಕುರಿತಾದ ಸ್ಪರ್ಧೆಯಲ್ಲಿ 550 ಮಕ್ಕಳು ಪಾಲ್ಗೊಂಡಿದ್ದರು.

ಚಿತ್ರಕಲೆ, ಪ್ರಬಂಧ ಮತ್ತು ಪರಿಸರ ಸಂಬಂಧ ಸಾಮೂಹಿಕ ಗಾಯನ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಶಾಲಾ ಮಕ್ಕಳು ಸ್ಥಳದಲ್ಲೇ ತಮ್ಮ ಪ್ರತಿಭೆ ಮೆರೆದರು.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಿರಿಯ ಪರಿಸರ ಅಧಿಕಾರಿ ಸವಿತಾ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಜೂನ್ 5ರಂದು ನಡೆಯಲಿರುವ ವಿಶ್ವ ಪರಿಸರ ದಿನಾಚರಣೆ ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಗುವುದು ಎಂದು ಹರಿಶಂಕರ ತಿಳಿಸಿದ್ದಾರೆ.

ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯಲ್ಲಿ ರೋಬೋಟಿಕ್ ವಿಧಾನದ ಮೂಲಕ ನಾಲಿಗೆ ಕ್ಯಾನ್ಸರ್ ಯಶಸ್ವಿ ಶಸ್ತ್ರಚಿಕಿತ್ಸೆ

ಮೈಸೂರು, ಜೂ. 1 (ಜಿಎ)–ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಯಲ್ಲಿ ರೋಬೋಟಿಕ್ ಶಸ್ತ್ರಚಿಕಿತ್ಸೆ ವಿಧಾನದ ಮೂಲಕ ರೋಗಿಯೊಬ್ಬರ ನಾಲಿಗೆ ಕ್ಯಾನ್ಸರ್‌ಗೆ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಲಾಯಿತು ಎಂದು ಡಾ.ಕೆ.ಆರ್.ಸುಹಾಸ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು 40 ವರ್ಷ ವಯಸ್ಸಿನ ಮಹಿಳೆಯೊಬ್ಬರು ಊದಿರುವ ನಾಲಿಗೆ ಸಮಸ್ಯೆ ಕಾರಣ ಮೈಸೂರಿನ ನಾರಾಯಣ ಆಸ್ಪತ್ರೆಗೆ ಬಂದಿದ್ದರು. ವೈದ್ಯಕೀಯ ತಪಾಸಣೆ ಬಳಿಕ ಇವರಿಗೆ ನಾಲಿಗೆಯಲ್ಲಿ ಕ್ಯಾನ್ಸರ್ ಗಡ್ಡೆ ಇರುವುದು ಪತ್ತೆಯಾಯಿತು. ಹೀಗಾಗಿ ತಾವು ರೋಬೋಟಿಕ್ ಶಸ್ತ್ರಚಿಕಿತ್ಸೆಗೆ ಸಲಹೆ ನೀಡಿದ್ದು, ಬಳಿಕ ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆಗೆ ಕರೆದೊಯ್ದು, ನೂತನ ವಿಧಾನದ ಮೂಲಕ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಲಾಯಿತು ಎಂದು ವಿವರಿಸಿದರು.

ಈ ವಿಧಾನದ ಮೂಲಕ ಯಾವುದೇ ದೊಡ್ಡ ಛೇದನವಿಲ್ಲದೇ ಗಡ್ಡೆಗಳನ್ನು ತೆಗೆದು ಹಾಕಬಹುದಾಗಿದೆ. ಇದರಿಂದಾಗಿ ಈಗ ರೋಗಿ ಶೀಘ್ರ ಚೇತರಿಕೆ ಕಂಡಿದ್ದಾರೆ. ತಲೆ, ಕತ್ತಿನ ಕ್ಯಾನ್ಸರ್, ಮೂತ್ರ ನಾಳದ ಸಮಸ್ಯೆ ಮತ್ತು ಮಹಿಳೆಯರಿಗೆ ಸಾಮಾನ್ಯವಾದ ಆರೋಗ್ಯ ಸಂಬಂಧೀ ಸಮಸ್ಯೆಗಳ ವೇಳೆ ಈ ಅತ್ಯಾಧುನಿಕ ರೋಬೋಟಿಕ್ ಶಸ್ತ್ರಚಿಕಿತ್ಸಾ ವಿಧಾನ ಉಪಕಾರಿಯಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್.ರವಿ ಉಪಸ್ಥಿತರಿದ್ದರು.

ಮಾನನಷ್ಟ ಮೊಕದ್ದಮೆ ಸಂಬಂಧ ಕೋರ್ಟ್‌ನಲ್ಲಿ ಜಾಮೀನು ಪಡೆದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯೂ ಕೋರ್ಟ್‌ಗೆ ಹಾಜರಾಗಲಿದ್ದಾರೆ



ಬೆಂಗಳೂರು, ಜೂ.1 (ಕೆಎಂಶಿ)–ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನ್ಯಾಯಾಲಯ ಜಾಮೀನು ನೀಡಿದೆ.

ವಿಚಾರಣೆ ಕೈಗೆತ್ತಿಕೊಂಡ ಜನಪ್ರತಿನಿಧಿಗಳ 42ನೇ ಎಸಿಎಂಎಂ ನ್ಯಾಯಾಲಯ ಜಾಮೀನು ಮಂಜೂರು ಮಾಡಿತು.

ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಶೇ.40ರಷ್ಟು ಕಮಿಷನ್, ಮುಖ್ಯಮಂತ್ರಿ ಹುದ್ದೆಗೆ 2,500 ಕೋಟಿ ರೂ., ಮಂತ್ರಿಗಳ ಹುದ್ದೆಗೆ 500 ಕೋಟಿ ರೂ.ಗಳನ್ನು ಹೈಕಮಾಂಡ್‌ಗೆ ನೀಡಿ ಹುದ್ದೆ ಪಡೆದಿದ್ದಾರೆ, ಇವರ ಆಡಳಿತ ಭ್ರಷ್ಟಾಚಾರದಿಂದ ಕೂಡಿದೆ ಎಂದು 2023ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಆರೋಪ ಮಾಡಿತ್ತು.

ಆ ಪಕ್ಷದ ಮುಖಂಡರಾದ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್‌ನ ಅಧಿನಾಯಕ ರಾಹುಲ್ ಗಾಂಧಿ, ಸಾರ್ವಜನಿಕ ಭಾಷಣಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ಹೇಳಿಕೆ ನೀಡಿದ್ದರು. ಈ ಆರೋಪದ ಜೊತೆಗೆ ಕೋವಿಡ್ ಕಿಟ್ ಖರೀದಿಯಲ್ಲಿ ಶೇ.75ರಷ್ಟು ಡೀಲ್, ಪಿಡಬ್ಲ್ಯೂಡಿ ಗುತ್ತಿಗೆಯಲ್ಲಿ ಶೇ.40ರಷ್ಟು ಡೀಲ್ ಸೇರಿದಂತೆ ಕಾಮಗಾರಿಗಳಲ್ಲಿ ಭಾರಿ ಮೊತ್ತದ ಕಮಿಷನ್ ಅನ್ನು ಬಿಜೆಪಿ ಸರ್ಕಾರ ಪಡೆದು ಭ್ರಷ್ಟ ಆಡಳಿತ ನೀಡುತ್ತಿದೆ ಎಂದು ಪತ್ರಿಕೆಗಳಲ್ಲಿ ಜಾಹೀರಾತು ನೀಡಿದ್ದರು.

ಇದು ಚುನಾವಣಾ ಸಮಯದಲ್ಲಿ ಬಿಜೆಪಿ ಪಕ್ಷಕ್ಕೆ ಮಾಡಿರುವ ಅಪಮಾನ ವಾಗಿದೆ, ಆದ್ದರಿಂದ ಕಾಂಗ್ರೆಸ್ ಪಕ್ಷದ ಮುಖಂಡರ ವಿರುದ್ಧ ಐಪಿಸಿ ಕಲಂ 499, 500 ರೀತ್ಯಾ ಮಾನನಷ್ಟ ಮೊಕದ್ದಮೆ ಖಾಸಗಿ ದೂರನ್ನು ಬಿಜೆಪಿ ದಾಖಲಿಸಿತ್ತು. ಬಿಜೆಪಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೇಶವ ಪ್ರಸಾದ್ 2023ರ ಮೇ 8ರಂದು 42ನೇ ವಿಶೇಷ ನ್ಯಾಯಾಲಯಕ್ಕೆ ಖಾಸಗಿ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಆರೋಪಿಗಳಿಗೆ ನ್ಯಾಯಾಲಯ ಸಮನ್ಸ್ ನೀಡಿತ್ತು, ಇಂದು ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಖುದ್ದು ಹಾಜರಾಗಿ ಪ್ರಕರಣದಲ್ಲಿ ಜಾಮೀನು ಪಡೆದುಕೊಂಡರು.

ಜಾಮೀನು ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, ಬಿಜೆಪಿ ದಾಖಲಿಸಿದ್ದ ಖಾಸಗಿ ದೂರಿನ ಸಂಬಂಧ ನ್ಯಾಯಾಲಯಕ್ಕೆ ಹಾಜರಾಗಿದ್ದೆ, ಇದು ಸಿವಿಲ್ ಸ್ವರೂಪದ ಪ್ರಕರಣವಾಗಿದೆ, ಕಾನೂನು ರಕ್ಷಕರಾಗಿ, ಪಾಲಕರಾಗಿ ನ್ಯಾಯಾಲಯದ ಸೂಚನೆ ಮೇರೆಗೆ ಇಂದು ನಾನು ನ್ಯಾಯಾಧೀಶರ ಮುಂದೆ ಹಾಜರಾಗಿ, ಜಾಮೀನು ಪಡೆದಿದ್ದೇನೆ ಎಂದರು. ಕೆಪಿಸಿಸಿ ಅಧ್ಯಕ್ಷರು ಹಾಗೂ ರಾಹುಲ್ ಗಾಂಧಿ ಅವರ ವಿರುದ್ಧವೂ ಖಾಸಗಿ ದೂರು ದಾಖಲಾಗಿತ್ತು, ರಾಹುಲ್ ಗಾಂಧಿಯವರೂ ನ್ಯಾಯಾಲಯಕ್ಕೆ ಹಾಜರಾಗುತ್ತಾರೆ ಎಂದರು.

ಬಿಜೆಪಿಯವರ ಹೋಗಲಿ ಅಂತ ಸುಮ್ಮನೆ ಬಿಟ್ಟಿದ್ದೆವು...: ಇನ್ನು ಮುಂದೆ ಸುಮ್ಮನಿರಲ್ಲ

ಬಿಜೆಪಿ ವಿರುದ್ಧ ತೊಡೆ ತಟ್ಟಿದ ಡಿಸಿಎಂ ಡಿ.ಕೆ.ಶಿವಕುಮಾರ್

ಬೆಂಗಳೂರು, ಜೂ.1 (ಕೆಎಂಶಿ)– ಬಿಜೆಪಿಯವರನ್ನು ಹೋಗಲಿ ಎಂದು ಸುಮ್ಮನೆ ಬಿಟ್ಟಿದ್ದೆವು. ಇನ್ನು ಮುಂದೆ ಸುಮ್ಮನಿರಲು ಸಾಧ್ಯವಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತೊಡೆ ತಟ್ಟಿದ್ದಾರೆ.

ನಮ್ಮ ವಿರುದ್ಧವೇ ದೂರು ನೀಡಿದ ಮೇಲೆ ಇನ್ನು ನಾವು ಸುಮ್ಮನೆ ಕೂರಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಬಿಜೆಪಿ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಜಾಮೀನು ದೊರೆತ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೊಡ್ಡ ಹೆಸರು ಬರುತ್ತದೆ ಎಂದು ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರ ಹೆಸರನ್ನೂ ಸೇರಿಸಿದ್ದಾರೆ.

ನಮ್ಮನ್ನು ರಾಜಕೀಯ ಮಾಡಲು ಬಿಜೆಪಿ ಅವರು ಕರೆಯುತ್ತಿದ್ದಾರೆ, ಅದನ್ನು ಮಾಡುತ್ತೇವೆ. ಇವರು ದಾಖಲಿಸಿರುವ ಮೊಕದ್ದಮೆಯನ್ನು ಹೇಗೆ ಎದುರಿಸಬೇಕೆಂಬುದು ತಿಳಿದಿದೆ. ಕಾನೂನಿಗೆ ಗೌರವ ಕೊಟ್ಟು ನ್ಯಾಯಾಲಯದ ಮುಂದೆ ಹಾಜರಾಗಿ, ಜಾಮೀನು ಪಡೆದುಕೊಂಡಿದ್ದೇವೆ.

ಇಡೀ ದೇಶದಲ್ಲೇ ಕರ್ನಾಟಕ ಬಿಜೆಪಿ ಅತ್ಯಂತ ಭ್ರಷ್ಟ ಪಕ್ಷ. ಬಿಜೆಪಿಯ ಭ್ರಷ್ಟಾಚಾರ ಬಯಲು ಮಾಡಲು ಅವರೇ ಕರೆಯುತ್ತಿದ್ದಾರೆ, ಈಗ ನಾವು ನಮ್ಮ ಶಕ್ತಿ ತೋರಿಸುತ್ತೇವೆ. ನಮ್ಮ ಜಾಹೀರಾತುಗಳ ಬಗ್ಗೆ ಬಿಜೆಪಿಯವರು ಖಾಸಗಿ ದೂರು ನೀಡಿದ್ದಾರೆ.

ನಾವು ಸುಮ್ಮನೆ ಜಾಹೀರಾತು ನೀಡಿಲ್ಲ. ಬಿಜೆಪಿ ನಾಯಕರ, ಸಚಿವರ ಹೇಳಿಕೆಗಳ ಆಧಾರದ ಮೇಲೆ ಹಾಗೂ ಮಾಧ್ಯಮಗಳಲ್ಲಿ ಬಂದ ವರದಿಯನ್ನು ಆಧರಿಸಿ ಹಿಂದಿನ ರಾಜ್ಯ ಬಿಜೆಪಿ ಸರಕಾರದ ಹಗರಣಗಳ ಬಗ್ಗೆ ಪತ್ರಿಕಾ ಜಾಹೀರಾತು ನೀಡಿದ್ದೆವು. ಇದನ್ನೆಲ್ಲಾ ನಾವು ಸಾಬೀತು ಮಾಡುತ್ತೇವೆ.

ಕೇಂದ್ರದ ಮಾಜಿ ಸಚಿವ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರೇ ತಮ್ಮ ಬಿಜೆಪಿ ಸರ್ಕಾರದ ಮೇಲೆ ಹಗರಣದ ಆರೋಪ ಮಾಡಿದ್ದರು. ಹಣ ನೀಡದೆ ಯಾವುದೇ ಮಂತ್ರಿ ಸ್ಥಾನ ಸಿಗುವುದಿಲ್ಲ ಎಂದು ಹೇಳಿಕೆ ನೀಡಿದ್ದರು, ಮುಖ್ಯಮಂತ್ರಿ ಸ್ಥಾನಕ್ಕೆ 2,500 ಕೋಟಿ, ಮಂತ್ರಿ ಹುದ್ದೆಗೆ 100 ಕೋಟಿ ಎಂದು ಹೇಳಿಕೆ ನೀಡಿದವರು ಬಿಜೆಪಿಯವರೇ.

ಕಾಸಿದ್ದರೆ ಸರ್ಕಾರಿ ಹುದ್ದೆ ಎನ್ನುವ ಪತ್ರಿಕಾ ವರದಿ ಪ್ರಕಾರ, ಎ ದರ್ಜೆಯ ಗೆಜೆಟೆಡ್ ಹುದ್ದೆಗೆ 70 ಲಕ್ಷ, ಎಸಿಗೆ 1.50 ಕೋಟಿ, ಡಿವೈಎಸ್ಪಿಗೆ 80 ಲಕ್ಷ, ತಹಶೀಲ್ದಾರ್ ಹುದ್ದೆಗೆ 60– 80 ಲಕ್ಷ, ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಹುದ್ದೆಗೆ 40 ಲಕ್ಷದಿಂದ 1.5 ಕೋಟಿ, ಅಸಿಸ್ಟೆಂಟ್ ಎಂಜಿನಿಯರ್‌ಗೆ 80 ಲಕ್ಷ, ಸಹಾಯಕ ಅರಣ್ಯ ಅಧಿಕಾರಿಗೆ 50 ಲಕ್ಷ, ಎಸ್‌ಡಿಎಗೆ 10 ರಿಂದ 15 ಲಕ್ಷ ರೂ. ಫಿಕ್ಸ್ ಆಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಈ ಆಧಾರದಲ್ಲಿ ಕಾಂಗ್ರೆಸ್ ಜಾಹೀರಾತು ನೀಡಿತ್ತು ಎಂದರು.

ವಿವೇಕಾನಂದ ಪರ ಮಹದೇವಸ್ವಾಮಿ ಮತಯಾಚನೆ



ಮೈಸೂರು, ಜೂ.1(ಬಿಎಲ್‌ಯು)– ಮೈಸೂರಿನ ದಕ್ಷಿಣ ಶಿಕ್ಷಕ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಇಂದು ಬಿರುಸಿನ ಪ್ರಚಾರ ಮಾಡಿದರು.

ಮೈಸೂರಿನ ಮರಣ ಪ್ರೌಢಶಾಲೆ ಹಾಗೂ ಕಾಲೇಜಿನಲ್ಲಿ ವಿವೇಕಾನಂದ ಪರ ಮಹದೇವಸ್ವಾಮಿ ಮತಯಾಚಿಸಿದರು.

ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ಶಾಲಾ ಮಕ್ಕಳಿಗೆ ಸೈಕಲ್ ವಿತರಣೆ ಮಾಡಿದರು. ಜೊತೆಗೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಆದರೆ ಕಾಂಗ್ರೆಸ್ ಸರ್ಕಾರ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುತ್ತಿದೆ ಎಂದು ಆರೋಪಿಸಿದರು.

ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ 56 ಸಾವಿರ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಜೊತೆಗೆ 2005–06ನೇ ಸಾಲಿನ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ 4,800 ಕೋಟಿ ನೀಡಲಾಗಿದೆ. ಅಲ್ಲದೆ ಶಿಕ್ಷಕರಿಗೆ ವೈದ್ಯಕೀಯ ಭತ್ಯೆ, ಉಪನ್ಯಾಸಕರ ನೇಮಕ ಸೇರಿದಂತೆ ಬಹಳಷ್ಟು ಅಭಿವೃದ್ಧಿ ಮಾಡಲಾಗಿದೆ ಎಂದರು. ಆದರೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಲೂಟಿಯಲ್ಲಿ ತೊಡಗಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಭ್ರಷ್ಟಾಚಾರ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಸಚಿವ ನಾಗೇಂದ್ರ ಭಾಗಿಯಾಗಿರುವ ಅವ್ಯವಹಾರಕ್ಕೆ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಚಂದ್ರಶೇಖರ್ ಬಲಿಯಾಗಿದ್ದಾರೆ. ಇದರಿಂದ ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳು ಭಯದಲ್ಲಿ ಕೆಲಸ ಮಾಡುವ ಪರಿಸ್ಥಿತಿ ಬಂದಿದೆ ಎಂದು ಮಹದೇವಸ್ವಾಮಿ ಆಪಾದಿಸಿದರು.

ಇದನ್ನು ಶಿಕ್ಷಕ ಮತದಾರರು ಗಮನಿಸಿ ಕಾಂಗ್ರೆಸ್ ತಿರಸ್ಕರಿಸಬೇಕು. ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರನ್ನು ಬೆಂಬಲಿಸುವಂತೆ ಮಹದೇವಸ್ವಾಮಿ ಮನವಿ ಮಾಡಿದರು. ಈ ವೇಳೆ ಮಧು, ನಾರಾಯಣಚಾರಿ, ವಿನೋದ, ಶಿವಕುಮಾರ್ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು.

ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ

ಮೈಸೂರು, ಜೂ. 1–ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜೂ. 1ರಿಂದ 30 ರವರೆಗೆ ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 9 ರಿಂದ ಸಂಜೆ 4.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9741513392, ದೂ. 0821–2548231 ಸಂಪರ್ಕಿಸಬಹುದು.

ಯದುವೀರ್ ಜಯಕ್ಕೆ ದೇವರಿಗೆ ವಿಶೇಷ ಪೂಜೆ



ಮೈಸೂರು, ಜೂ.1(ಬಿಎಲ್‌ಯು)– ನರೇಂದ್ರ ಮೋದಿ ಮತ್ತೆ ಪ್ರಧಾನಮಂತ್ರಿ ಆಗಬೇಕು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಯದುವೀರ್ ಜಯಶೀಲರಾಗಲಿ ಎಂದು ಪ್ರಾರ್ಥಿಸಿ ಬಿಜೆಪಿ ಕಾರ್ಯಕರ್ತರು ಮೈಸೂರಿನ ಶ್ರೀ ಕಾರ್ಯಸಿದ್ಧಿ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ವಿಶೇಷ ಪೂಜೆ ಸಲ್ಲಿಸಿದರು.

ಗನ್‌ಹೌಸ್ ಬಳಿಯ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಮಾತನಾಡಿದ ಶ್ರೀವತ್ಸ, ದೇಶದ ಒಳಿತಿಗಾಗಿ ನರೇಂದ್ರ ಮೋದಿ ಮತ್ತೆ ಪ್ರಧಾನಿ ಆಗಬೇಕು. ಜೊತೆಗೆ ಯದುವೀರ್ ಸಂಸದರಾಗಿ ಆಯ್ಕೆಯಾಗಬೇಕು ಎಂದು ದೇವರನ್ನು ಬೇಡಿದ್ದೇವೆ ಎಂದರು.

ಲೋಕಸಭಾ ಚುನಾವಣೆಯ ಫಲಿತಾಂಶಕ್ಕೆ ಇನ್ನು 2 ದಿನ ಬಾಕಿ ಇದೆ. ಚುನಾವಣೆ ಸಂದರ್ಭದಲ್ಲಿ ಬಿಜೆಪಿಗೆ ದೊರೆತ ಅಭೂತಪೂರ್ವ ಜನ ಬೆಂಬಲ ನೋಡಿದರೆ ಎನ್‌ಡಿಎ ಅಧಿಕಾರಕ್ಕೆ ಬರುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ನರೇಂದ್ರ ಮೋದಿ ಕನ್ಯಾಕುಮಾರಿಯಲ್ಲಿ ಧ್ಯಾನದಲ್ಲಿ ತಲ್ಲೀನರಾಗಿದ್ದಾರೆ. ಆದರೆ ಇಲ್ಲಿ ನಾವು ಅವರು ಪ್ರಧಾನಿ ಆಗಲೆಂದು ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ್ದೇವೆ. ದೇವರು ನಮ್ಮ ಪ್ರಾರ್ಥನೆಗೆ ಫಲ ಕೊಡುವ ವಿಶ್ವಾಸವಿದೆ ಎಂದು ಶ್ರೀವತ್ಸ ತಿಳಿಸಿದರು.

ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಬಿಜೆಪಿ ಮುಖಂಡ ಪಾರ್ಥಸಾರಥಿ, ಮಂಜುನಾಥ್ ಸೇರಿದಂತೆ ಇತರರು ಈ ವೇಳೆ ಹಾಜರಿದ್ದರು.



ಮೈಸೂರು ಮಿತ್ರ ಭಾನುವಾರ 2 ಜೂನ್ 2024

ಮಂಡ್ಯ ಲೋಕಸಭಾ ಚುನಾವಣೆ: ಮಂಗಳವಾರ ಮತ ಎಣಿಕೆ

123 ಟೇಬಲ್‌ಗಳಲ್ಲಿ 151 ಸುತ್ತುಗಳ ಮತ ಎಣಿಕಾ ಕಾರ್ಯ: ಜಿಲ್ಲಾಧಿಕಾರಿ ಡಾ.ಕುಮಾರ

ಮಂಡ್ಯ, ಜೂ.1– ಮಂಡ್ಯ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಮತ ಎಣಿಕೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಜಿಲ್ಲೆಯ 8 ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿ ಕ್ಷೇತ್ರಕ್ಕೆ 14 ಟೇಬಲ್‌ಗಳಂತೆ ಒಟ್ಟು 123 ಟೇಬಲ್‌ಗಳಲ್ಲಿ, ಒಟ್ಟು 151 ಸುತ್ತುಗಳ ಮತ ಎಣಿಕೆ ಪ್ರಕ್ರಿಯೆಯು ನಡೆಯಲಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಶನಿವಾರ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳವಳ್ಳಿಯಲ್ಲಿ 20 ಸುತ್ತು, ಮದ್ದೂರು–19 ಸುತ್ತು, ಮೇಲುಕೋಟೆ–19 ಸುತ್ತು, ಮಂಡ್ಯ–19 ಸುತ್ತು, ಶ್ರೀರಂಗಪಟ್ಟಣ–18 ಸುತ್ತು, ನಾಗಮಂಗಲ–19 ಸುತ್ತು, ಕೆ.ಆರ್.ಪೇಟೆ–19 ಸುತ್ತು, ಕೆ.ಆರ್.ನಗರ– 18 ಸುತ್ತುಗಳಲ್ಲಿ ಮತ ಎಣಿಕೆ ನಡೆಯಲಿದೆ ಎಂದು ಹೇಳಿದರು.

ಶೇ.81.67ರಷ್ಟು ಮತದಾನ ನಡೆದಿದ್ದ ಮಂಡ್ಯ ಜಿಲ್ಲೆಯ ಪೈಕಿ ಒಟ್ಟು 1779075 ಮತದಾರರಲ್ಲಿ, 1453016 ಮತದಾರರು ಮತ ಚಲಾಯಿಸಿದ್ದರು. ಮಂಡ್ಯ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮತ ಎಣಿಕೆ ವೀಕ್ಷಕರಾಗಿ ನೀರಜ್‌ಕುಮಾರ್ ಅವರನ್ನು ಭಾರತ ಚುನಾವಣಾ ಆಯೋಗವು ನೇಮಕ ಮಾಡಲಾಗಿದ್ದು, ಅವರು ಭಾನುವಾರ ಜಿಲ್ಲೆಗೆ ಆಗಮಿಸುತ್ತಿದ್ದಾರೆ ಎಂದರು.

ಲೋಕಸಭಾ ಚುನಾವಣೆಯ ಮತ ಎಣಿಕೆ ಪ್ರಕ್ರಿಯೆಯು ಮಂಡ್ಯ ವಿಶ್ವವಿದ್ಯಾನಿಲಯದ ಕಾಮರ್ಸ್ ಬ್ಲಾಕ್‌ನಲ್ಲಿ ಜೂನ್ 4ರಂದು ಬೆಳಿಗ್ಗೆ 8ಗಂಟೆಗೆ ಮತ ಎಣಿಕೆ ಕಾರ್ಯವು ಪ್ರಾರಂಭವಾಗಲಿದೆ. ಚುನಾವಣೆ ಏಜೆಂಟರುಗಳಿಗೆ ಮತದಾನ ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡಲು ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಮತ ಎಣಿಕೆ ಸಿಬ್ಬಂದಿಗಳ ನೇಮಕ ಇವಿಎಂ ಮತ ಎಣಿಕೆಗಾಗಿ ಮತ್ತು ಅಂಚೆ ಮತಪತ್ರ ಹಾಗೂ ಇಟಿಬಿಎಸ್ ಮತ ಪತ್ರಗಳ ಎಣಿಕೆಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 44 ಸಿಬ್ಬಂದಿಗಳು ಹಾಗೂ ಮೀಸಲು 48 ಸಿಬ್ಬಂದಿಗಳು ಸೇರಿದಂತೆ ಒಟ್ಟು 400 ಅಧಿಕಾರಿ/ನೌಕರರನ್ನು ನೇಮಿಸಲಾಗಿದೆ. ಇವರಲ್ಲಿ 16 ಎಆರ್‌ಒಗಳು, 128 ಕೌಂಟಿಂಗ್ ಸೂಪರ್‌ವೈಸರ್‌ಗಳು, 128 ಕೌಂಟಿಂಗ್ ಅಸಿಸ್ಟೆಂಟ್‌ಗಳು, 128 ಮೈಕ್ರೋ ವೀಕ್ಷಕರನ್ನು ನೇಮಕ ಮಾಡಲಾಗಿದೆ ಎಂದು ನುಡಿದರು.

ಅಂಚೆ ಮತಪತ್ರ ಮತ್ತು ಇಟಿಬಿಎಸ್ ಮತಪತ್ರಗಳ ಮತ ಎಣಿಕೆ ಸಿಬ್ಬಂದಿಗಳ ನೇಮಕ ಅಂಚೆ ಮತಪತ್ರ ಮತ್ತು ETPBS ಮತ ಪತ್ರಗಳ ಎಣಿಕೆ ಕಾರ್ಯದ ಸಂಪೂರ್ಣ ಮೇಲ್ವಿಚಾರಣೆಯನ್ನು ಸಹಾಯಕ ಚುನಾವಣಾ ಅಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ನಿರ್ವಹಿಸಲಿದ್ದಾರೆ. ಅಂಚೆ ಮತಪತ್ರ ಮತ್ತು ಇಟಿಬಿಎಸ್ ಮತಪತ್ರಗಳ ಮತ ಎಣಿಕೆಗೆ ಒಟ್ಟು 69 ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದ್ದು, 13–ಎಆರ್‌ಒಗಳು, 14–ಕೌಂಟಿಂಗ್ ಸೂಪರ್ ವೈಸರ್‌ಗಳು, 28–ಕೌಂಟಿಂಗ್ ಅಸಿಸ್ಟೆಂಟ್‌ಗಳು, 14–ಮೈಕ್ರೋ ಅಬ್ಸರ್ವರ್‌ಗಳಿಗೆ ಮತ ಎಣಿಕೆಗೆ ಸಂಬಂಧಿಸಿದಂತೆ ಇವರುಗಳಿಗೆ ಪ್ರತ್ಯೇಕವಾಗಿ ತರಬೇತಿ ನೀಡಲಾಗಿದೆ ಎಂದರು.

ಚುನಾವಣೆಯ ಎಲ್ಲಾ ಮತ ಎಣಿಕೆ ಕೇಂದ್ರಗಳಲ್ಲಿ ಮತ ಎಣಿಕೆ ಪ್ರಕ್ರಿಯೆ ಮತ್ತು ಚುನಾವಣಾ ಏಜೆಂಟರ ಚಲನವಲನಗಳ ಬಗ್ಗೆ ನಿಗಾ ವಹಿಸಲಿಕ್ಕೆ ಪ್ರತಿ ಟೇಬಲ್‌ಗೆ 1 ಸಿಸಿ ಕ್ಯಾಮರಾವಿದ್ದು, ಒಟ್ಟು 123 ಟೇಬಲ್‌ಗಳಿಗೆ 123 ವೆಬ್ ಕಾಸ್ಟಿಂಗ್ ಕ್ಯಾಮರಾವನ್ನು ಅಳವಡಿಸಲಾಗುತ್ತದೆ. ಭದ್ರತಾ ಕೊಠಡಿಯ ಹೊರಾಂಗಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಹಿತದೃಷ್ಟಿಯಿಂದ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಮತ ಎಣಿಕೆಯು ಜೂನ್ 4ರಂದು ಮಂಡ್ಯ ನಗರದಲ್ಲಿ ನಡೆಯಲಿರುವುದರಿಂದ ಮತ ಎಣಿಕೆ ದಿನದಂದು ಮತ್ತು ಮತ ಎಣಿಕೆ ಕಾರ್ಯವು ಮುಗಿಯುತ್ತಿದ್ದಂತೆ ಗೆದ್ದ ಅಭ್ಯರ್ಥಿಗಳು ಅವರ ಬೆಂಬಲಿಗರೊಡನೆ ಪಟಾಕಿ ಸಿಡಿಸಿಕೊಂಡು ಮೆರವಣಿಗೆಯ ಮೂಲಕ ವಿಜಯೋತ್ಸವವನ್ನು ಆಚರಿಸುವುದರಿಂದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಜೂನ್ 4ರ ಬೆಳಿಗ್ಗೆ 6 ಗಂಟೆಯಿಂದ ಜೂನ್ 5ರ ಬೆಳಿಗ್ಗೆ 6 ಗಂಟೆಯವರೆಗೆ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.



ಜಿಲ್ಲಾಧಿಕಾರಿ ಡಾ.ಕುಮಾರ್ ಶನಿವಾರ ಸುದ್ದಿಗೋಷ್ಠಿ ನಡೆಸಿದರು.

ಈಗಾಗಲೇ ಜಿಲ್ಲೆಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುವುದರಿಂದ ಪೊಲೀಸ್ ಇಲಾಖೆಯು ಬಹಳ ಜಾಗರೂಕತೆಯಿಂದ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಗಾಗಿ ಆರಕ್ಷಕ ಅಧೀಕ್ಷಕರ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲು ಒಟ್ಟು 539 ಆರಕ್ಷಕ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದ್ದು, 2–ಎಎಸ್ಪಿ, 3–ಡಿಎಸ್‌ಪಿ, 13–ಪಿಐ, 32–ಪಿಎಸ್‌ಐ, 51–ಎಎ, 337–ಹೆಚ್‌ಸಿಪಿಸಿ, 30–ಡಬ್ಲ್ಯೂಪಿಸಿ, 40–ಡಿಎಆರ್ ತುಕಡಿ, 30–ಕೆಎಸ್‌ಆರ್‌ಪಿಗಳನ್ನು ನೇಮಕ ಮಾಡಲಾಗಿದೆ ಎಂದರು. ಭದ್ರತಾ ಕೇಂದ್ರದ ಒಳಾಂಗಣದಲ್ಲಿನ ಭದ್ರತಾ ಕೊಠಡಿಗಳನ್ನು ದಿನದ 24 ಗಂಟೆಯ ಪಹರೆಗಾಗಿ ಸರದಿವಾರು ಭದ್ರತಾ ಕರ್ತವ್ಯ ನಿರ್ವಹಿಸಲು 30 ಜನರನ್ನೊಳಗೊಂಡ 1 ತುಕಡಿಯ ಸಿ.ಎ.ಪಿ.ಎಫ್ ತಂಡವನ್ನು ಮುಖ್ಯ ಚುನಾವಣಾಧಿಕಾರಿಗಳು ನಿಯೋಜಿಸಿದ್ದಾರೆ –ಎನ್.ಯತೀಶ್, ಎಸ್ಪಿ

ದಕ್ಷಿಣ ಶಿಕ್ಷಕರ ಕ್ಷೇತ್ರ, ಜಿಲ್ಲೆಯಲ್ಲಿ 5403 ಅರ್ಹ ಮತದಾರರು

ಕರ್ನಾಟಕ ವಿಧಾನ ಪರಿಷತ್ತಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ನಡೆಯುವ ಚುನಾವಣೆ 2024 ಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 5403 ಅರ್ಹ ಮತದಾರರಿದ್ದಾರೆ. ಜೂನ್ 3ರಂದು ಬೆಳಿಗ್ಗೆ 8 ರಿಂದ 4 ರವರೆಗೆ ಮತದಾನ ನಡೆಯಲಿದ್ದು, ಜೂನ್ 6 ರಂದು ಮತ ಎಣಿಕೆ ನಡೆಯಲಿದ್ದು, ದಕ್ಷಿಣ ಶಿಕ್ಷಕರ ಕ್ಷೇತ್ರದ ವ್ಯಾಪ್ತಿಗೆ ಡಾ.ಜಿ.ರವಿಶಂಕರ್ ಅವರನ್ನು ಚುನಾವಣಾ ವೀಕ್ಷಕರಾಗಿ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಮಂಡ್ಯ ತಾಲೂಕು ಕಚೇರಿಯಲ್ಲಿ ನೊಂದಣಿಯಾಗಿರುವ ಮತದಾರರ ಸಂಖ್ಯೆ ಹೆಚ್ಚಿದ್ದು, ತಾಲ್ಲೂಕು ಕಚೇರಿಯಲ್ಲಿ ಎರಡು ಮತ ಕೇಂದ್ರ ತೆರೆಯಲಾಗಿದೆ. ಮಂಡ್ಯ ತಾಲೂಕು ಪಂಚಾಯತ್ ಸಾಮರ್ಥ್ಯ ಸೌಧದಲ್ಲಿ ಒಂದು ಮತ ಕೇಂದ್ರ ಒಟ್ಟು 3 ಮತ ಕೇಂದ್ರಗಳು ಕಾರ್ಯನಿರ್ವಹಿಸಲಿದೆ. ಜಿಲ್ಲೆಯಲ್ಲಿ 9 ಮತಕೇಂದ್ರಗಳಿದ್ದು, ಅಂತಿಮ ಮತದಾರರ ಪಟ್ಟಿಯ ಪ್ರಕಾರ 5403 ಮತದಾರರು ಮತದಾರರ ಪಟ್ಟಿಯಲ್ಲಿ ಹೆಸರು ನೊಂದಣಿ ಮಾಡಿಕೊಂಡಿದ್ದಾರೆ ಎಂದರು.

ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಒಟ್ಟು 5403 ಮತದಾರರಲ್ಲಿ, ಇದುವರೆಗೂ 3298 ಮತದಾರರ ಚೀಟಿಯನ್ನು ವಿತರಿಸಿದ್ದು, 2105 ಮತದಾರರ ಚೀಟಿಗಳು ಬಾಕಿ ಇವೆ. ಒಟ್ಟು 65 ಮತಗಟ್ಟೆ ಸಿಬ್ಬಂದಿಗಳ ನೇಮಕ ಮಾಡಿದ್ದು, 18–ಪಿಆರ್‌ಒ, 9–ಎಪಿಆರ್‌ಒ, 18–ಪಿಒ, 19–ಪಿಒ, 11–ಎಂಒಗಳನ್ನು ನೇಮಕ ಮಾಡಲಾಗಿದೆ ಕೆಆರ್.ಪೇಟೆ ತಾಲೂಕಿನ ತಾಲೂಕು ಕಚೇರಿ, ನಾಗಮಂಗಲದ ತಾಲೂಕು ಕಚೇರಿ, ಪಾಂಡವಪುರದ ತಾಲೂಕು ಕಚೇರಿ, ಮಂಡ್ಯ ತಾಲೂಕು ಕಚೇರಿ, ಮದ್ದೂರು ತಾಲೂಕು ಕಚೇರಿ, ಶ್ರೀರಂಗಪಟ್ಟಣದ ತಾಲೂಕು ಕಚೇರಿ, ಮಳವಳ್ಳಿ ತಾಲೂಕು ಕಚೇರಿಯಲ್ಲಿ ಮಸ್ಟರಿಂಗ್ ಸೆಂಟರ್ ಅನ್ನು ಹಾಗೂ ಮಂಡ್ಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಡಿ–ಮಸ್ಟರಿಂಗ್ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸಿಫ್, ವಾರ್ತಾಧಿಕಾರಿ ಹೆಚ್.ಎಸ್.ನಿರ್ಮಲಾ ಉಪಸ್ಥಿತರಿದ್ದರು.

ಶಿಕ್ಷಕರ, ರೈತರ ಪರ ಧ್ವನಿ ಎತ್ತುವ ಮರಿತಿಬ್ಬೇಗೌಡರ ಆಯ್ಕೆ ಮಾಡಿ

ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಮನವಿ

ಮಂಡ್ಯ, ಜೂ.1– ಕರ್ನಾಟಕ ವಿಧಾನ ಪರಿಷತ್ ತನ್ನದೇ ಆದ ಇತಿಹಾಸವನ್ನು ಹೊಂದಿದ್ದು, ವಿಧಾನ ಪರಿಷತ್ ದಕ್ಷಿಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮರಿತಿಬ್ಬೇಗೌಡರು ಸ್ಪರ್ಧಿಸಿದ್ದಾರೆ. ಇವರನ್ನು ಕಳೆದ 24 ವರ್ಷಗಳಿಂದ ನಾನು ಸದನದ ಒಳಗೆ ಹಾಗೂ ಹೊರಗೆ ನಿಕಟವರ್ತಿಯಾಗಿ ನೋಡಿದ್ದೇನೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಶಿಕ್ಷಕರ, ರೈತರ ಹಾಗೂ ಧ್ವನಿ ಇಲ್ಲದವರ ಪರವಾಗಿ ನಿರಂತರವಾಗಿ ಹೋರಾಟವನ್ನು ಮಾಡಿಕೊಂಡು ಬಂದಿರುವ ಮರಿತಿಬ್ಬೇಗೌಡರನ್ನು ಶಿಕ್ಷಕ ಮತದಾರರು ಆಯ್ಕೆ ಮಾಡಬೇಕೆಂದು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮನವಿ ಮಾಡಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ಪರವಾಗಿ ಇವರು ನಿರಂತರವಾಗಿ ಧ್ವನಿ ಎತ್ತಿದ್ದಾರೆ. ಅಲ್ಲದೆ ಮಂಡ್ಯದಲ್ಲಿ ಮೈಷುಗರ್ ಕಾರ್ಖಾನೆ ಮರು ಪ್ರಾರಂಭ ಆಗುವುದರ ಹಿಂದೆ ಇವರ ಪಾತ್ರ ಸಿಂಹಪಾಲು ಇದೆ. ರೈತರಿಗೆ ಕಾಲಕಾಲಕ್ಕೆ ಹಣ ಪಾವತಿಯಾಗಬೇಕು. ಜೊತೆಗೆ ಹೊಸ ಕಾರ್ಖಾನೆ ಸ್ಥಾಪನೆಯಾಗಬೇಕು ಎಂದು ಸದನದಲ್ಲಿ ಹೋರಾಟ ಮಾಡುತ್ತಲೇ ಬಂದಿದ್ದಾರೆ ಎಂದು ಹೇಳಿದರು.

ಇದೆಲ್ಲದರ ಜೊತೆಗೆ ಪ್ರಾಥಮಿಕ ಶಿಕ್ಷಣ, ಪ್ರೌಢ ಶಿಕ್ಷಣ, ಪದವಿ ಪೂರ್ವ ಹಾಗೂ ಪದವಿ ಶಿಕ್ಷಣವೇ ಇರಬಹುದು, ವೈದ್ಯಕೀಯ ಶಿಕ್ಷಣ ಇರಬಹುದು, ತಾಂತ್ರಿಕ ಶಿಕ್ಷಣ ಇರಬಹುದು, ಪಾಲಿಟೆಕ್ನಿಕ್‌ಗೆ ಸಂಬಂಧಪಟ್ಟಂತೆ ಇರಬಹುದು, ಈ ರೀತಿಯ ಯಾವುದೇ ಸಮಸ್ಯೆಗಳಿದ್ದರೂ ಶಿಕ್ಷಕರ, ಉಪನ್ಯಾಸಕ ವರ್ಗದ, ವಿದ್ಯಾರ್ಥಿಗಳ ಪರವಾಗಿ ವಿಧಾನ ಪರಿಷತ್ತಿನಲ್ಲಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಶಿಕ್ಷಕ ಬಂಧುಗಳು ಇಂತಹ ಒಬ್ಬ ಪ್ರತಿನಿಧಿಯನ್ನು ಪಡೆಯಲು ಹೆಮ್ಮೆ ಪಡಬೇಕು. ಮರಿತಿಬ್ಬೇಗೌಡರು, ನಿಮ್ಮೆಲ್ಲರ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಾರೆ. ಹೀಗಾಗಿ ಶಿಕ್ಷಕ ಬಂಧುಗಳು ಅವರ ಕೈ ಹಿಡಿದು 5ನೇ ಬಾರಿಗೆ ವಿಧಾನ ಪರಿಷತ್ತಿಗೆ ಕಳುಹಿಸಿಕೊಡಬೇಕು ಎಂದು ಮನವಿ ಮಾಡಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ದಿನೇಶ್ ಗೂಳಿಗೌಡ, ಮರಿತಿಬ್ಬೇಗೌಡ.

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮಾತನಾಡಿ, ದೀರ್ಘಕಾಲದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಹಿನ್ನಲೆಯಲ್ಲಿ ಶಿಕ್ಷಕ ಬಂಧುಗಳು ಮತ್ತೊಮ್ಮೆ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿತಮ್ಮನ್ನು ಬೆಂಬಲಿಸಬೇಕು. ತಮ್ಮ 24 ವರ್ಷದ ಶಾಸಕ ಅವಧಿಯಲ್ಲಿ ಶಿಕ್ಷಕರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಮತ್ತು ಅಧ್ಯಯನ ನಡೆಸಿ ಸರ್ಕಾರದ ಗಮನ ಸೆಳೆಯಲು ಅನುಭವ ತಂದುಕೊಟ್ಟಿದೆ. ಈ ದಿಸೆಯಲ್ಲಿ ನಾನು ಎಂದಿಗೂ ಶಿಕ್ಷಕ ಬಂಧುಗಳನ್ನು ಕಡೆಗಣಿಸಿಲ್ಲ. ಅಪಾರವಾಗಿ ಶಿಕ್ಷಕ ಸಮುದಾಯವನ್ನು ಗೌರವಿಸಿದ್ದೇನೆ ಎಂದರು.

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಹಳೆ ಪಿಂಚಣಿ ಯೋಜನೆಯ ಬಗ್ಗೆ ಭರವಸೆ ನೀಡಿದೆ. ಈಗ ಮುಖ್ಯಮಂತ್ರಿಗಳು ಒಂದು ಸಮಿತಿಯನ್ನು ಮಾಡಿದ್ದಾರೆ. ಆರನೇ ವೇತನ ಜಾರಿ ಮಾಡಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಈಗಲೂ 7ನೇ ವೇತನ ಆಯೋಗದ ವರದಿಯನ್ನು ಜಾರಿ ಮಾಡುತ್ತಾರೆ ಎನ್ನುವ ವಿಶ್ವಾಸ ತಮಗಿದೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾಸಿರಿ ಯೋಜನೆಯನ್ನು ಸಿದ್ದರಾಮಯ್ಯ ಅವರು ಜಾರಿಗೆ ತಂದು ಪ್ರತಿ ವಿದ್ಯಾರ್ಥಿಗಳಿಗೆ 1500 ನೀಡಿದ್ದಾರೆ. ಹಾಗಾಗಿ ಸುದೀರ್ಘ ಕಾಲದ ಸಮಸ್ಯೆಗಳಿಗೆ ಪರಿಹಾರ ನೀಡಲು ಈ ಸರ್ಕಾರದಲ್ಲಿ ಶ್ರಮಿಸಲಿದ್ದು, ಆದ ಕಾರಣ ಶಿಕ್ಷಕ ಬಂಧುಗಳು ಮತ್ತೊಮ್ಮೆ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

ಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಮಹಿಳಾ ಘಟಕದ ಅಧ್ಯಕ್ಷೆ ಅಂಜನಾ ಶ್ರೀಕಾಂತ್, ಮುಖಂಡರಾದ ಶ್ರೀಧರ್, ಶಿವಕುಮಾರ್ ಸೇರಿದಂತೆ ಇತರರಿದ್ದರು.

ಜೂನ್‌5 ರಿಂದ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ

ಮಂಡ್ಯ, ಜೂ.1–ಮಂಡ್ಯ ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಜೂ.6 ರಿಂದ 30 ರವರೆಗೆ ಉದರ ದರ್ಶಕ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಜೂ.5 ರಂದು ಕೀಲಾರ ಸರ್ಕಾರಿ ಆರೋಗ್ಯ ಕೇಂದ್ರ, ಜೂ.7 ರಂದು ಬಸರಾಳು ಪ್ರಾಥಮಿಕ ಆರೋಗ್ಯ ಕೇಂದ್ರ, ಜೂ.11ರಂದು ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ, ಜೂ.12ರಂದು ಪಾಂಡವಪುರ ಉಪ ವಿಭಾಗ ಆಸ್ಪತ್ರೆ, ಜೂ.13ರಂದು ಕೆರಗೋಡು ಪ್ರಾಥಮಿಕ ಆರೋಗ್ಯ ಕೇಂದ್ರ, ಜೂ.14ರಂದು ಮದ್ದೂರು ತಾಲೂಕು ಆಸ್ಪತ್ರೆ, ಜೂ.15ರಂದು ಮಂಡ್ಯ ಮಿಮ್ಸ್, ಜೂ.19ರಂದು ಕೆಆರ್.ಪೇಟೆ ತಾಲೂಕು ಆಸ್ಪತ್ರೆ, ಜೂ.20ರಂದು ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಜೂ.21 ರಂದು ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಜೂ.25ರಂದು ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ ಮತ್ತು ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ, ಜೂ.26 ರಂದು ನಾಗಮಂಗಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಬೆಳಿಗ್ಗೆ 10 ಗಂಟೆಗೆ ಉದರ ದರ್ಶಕ ಶಸ್ತ್ರ ಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್‌ನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾವಿತ್ರಮ್ಮ ನಿಧನ



ಭಾರತೀನಗರ, ಜೂ.1– ಇಲ್ಲಿಗೆ ಸಮೀಪದ ಗುಡಿಗೆರೆ ಗ್ರಾಮದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಲೇ||ಜಿ.ಎಂ.ಬೋರಯ್ಯ ಅವರ ಧರ್ಮಪತ್ನಿ ಹಾಗೂ ಹಿರಿಯ ಪತ್ರಕರ್ತ ಅಣ್ಣೂರು ಲಕ್ಷ್ಮಣ್ ಅವರ ಸಹೋದರಿ ಸಾವಿತ್ರಮ್ಮ(85) ವಯೋ ಸಹಜದಿಂದ ನಿಧನಗೊಂಡಿದ್ದಾರೆ.

ಮೃತರಿಗೆ ಓರ್ವ ಪುತ್ರ, 4 ಪುತ್ರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಸ್ವಗ್ರಾಮದ ತಮ್ಮ ಜಮೀನಿನಲ್ಲಿ ಕುಟುಂಬದವರೊಂದಿಗೆ ಶನಿವಾರ ಸಂಜೆ 4 ಗಂಟೆಯಲ್ಲಿ ನೆರವೇರಿತು.

ಅಂತರರಾಜ್ಯ ಸರಗಳ್ಳನ ಬಂಧನ

ಮೈಸೂರು, ಜೂ.1(ಎಸ್‌ಪಿಎನ್)– ಅಂತರರಾಜ್ಯ ಸರಗಳ್ಳನನ್ನು ಬಂಧಿಸಿರುವ ಸರಸ್ವತಿಪುರಂ ಠಾಣಾ ಪೊಲೀಸರು, ಈತನಿಂದ 23.5 ಗ್ರಾಂ ಚಿನ್ನದ ಸರ ಮತ್ತು ಕೃತ್ಯಕ್ಕೆ ಬಳಸಿದ ಸ್ಕೂಟರ್ ವಶಕ್ಕೆ ಪಡೆದಿದ್ದಾರೆ.

ಮಹಾರಾಷ್ಟ್ರದ ನಾಗ್ಪುರದ ನಿವಾಸಿ ಸಚಿನ್ ನುಹು ಪೆಶ್ವೆ(41) ಬಂಧಿತ ಆರೋಪಿ. ಈತ ಮೇ 22ರಂದು ಸರಸ್ವತಿಪುರಂ ಠಾಣಾ ವ್ಯಾಪ್ತಿಯ ಟೆಲಿಕಾಂ ಬಡಾವಣೆಯ ರಸ್ತೆಯಲ್ಲಿ ಮಹಿಳೆಯೊಬ್ಬರು ಅಂಗಡಿಯಿಂದ ಹಾಲು ತೆಗೆದುಕೊಂಡು ಮನೆಗೆ ಹೋಗುತ್ತಿದ್ದಾಗ ಹಿಂಬದಿಯಿಂದ ಸ್ಕೂಟರ್‌ನಲ್ಲಿ ಬಂದು ಮಹಿಳೆಯ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರದ ಅರ್ಧಭಾಗವನ್ನು ಕಿತ್ತುಕೊಂಡು ಪರಾರಿಯಾಗಿದ್ದ.

ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ದೂರು ದಾಖಲಾಗಿತ್ತು. ಈ ಪ್ರಕರಣ ಪತ್ತೆ ಹಚ್ಚಲು ಸರಸ್ವತಿಪುರಂ ಠಾಣಾ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ರಚಿಸಿದ್ದರು. ಅದರಂತೆ ಈ ತಂಡವು ಕಾರ್ಯಾಚರಣೆ ಕೈಗೊಂಡು ಮೇ 29ರಂದು ಬೆಂಗಳೂರು ರೈಲ್ವೆ ನಿಲ್ದಾಣದ ಬಳಿ ಆರೋಪಿಯನ್ನು ವಶಕ್ಕೆ ಪಡೆದು, ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಈ ಪ್ರಕರಣ ಸೇರಿದಂತೆ ಮೈಸೂರಿನ ಲಕ್ಷ್ಮೀಪುರಂ ಠಾಣಾ ವ್ಯಾಪ್ತಿಯಲ್ಲಿ ಸರಗಳ್ಳತನ ಹಾಗೂ ಬೆಂಗಳೂರು ಕಾಟನ್ ಪೇಟೆಯ ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಬೆಳಕಿಗೆ ಬಂದಿದೆ.

ಈತ ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ಸುಮಾರು 40 ಪ್ರಕರಣಗಳಲ್ಲಿ ಭಾಗಿಯಾಗಿದ್ದು, 2 ಪ್ರಕರಣದಲ್ಲಿ 7 ವರ್ಷಗಳ ಕಾಲ ಜೈಲಿನಲ್ಲಿ ಶಿಕ್ಷೆ ಅನುಭವಿಸಿರುವುದು ಬೆಳಕಿಗೆ ಬಂದಿದೆ.

ಕೌಟುಂಬಿಕ ಕಲಹ: ಮಹಿಳೆ ಸೇರಿ ಮೂವರ ಮೇಲೆ ಹಲ್ಲೆ

ಮೈಸೂರು, ಜೂ.1–ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮಹಿಳೆ ಸೇರಿ ಮೂವರ ವಿರುದ್ಧ ಗುಂಪೊಂದು ಹಲ್ಲೆ ನಡೆಸಿದ ಘಟನೆ ಮೈಸೂರಿನ ನಾಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಈ ಗ್ರಾಮದ ಮಧುಸೂದನ್, ಇವರ ತಾಯಿಯ ಅಣ್ಣನ ಮಗ ಶಶಿಕುಮಾರ್ ಮತ್ತು ಚಿಕ್ಕಮ್ಮ ಭಾಗ್ಯಮ್ಮ ಹಲ್ಲೆಗೊಳಗಾದವರಾಗಿದ್ದು, ಇವರ ಮೇಲೆ ಮಧುಸೂದನ್ ಸಹೋದರ ಹೇಮಂತ್ ಕುಮಾರ್, ಅವರ ಪತ್ನಿ ಅಪೂರ್ವ, ರಶ್ಮಿ, ವಿದ್ಯಾಶಂಕರ್, ಎಲ್‌ಐಸಿ ಮಹದೇವ, ಚಪಾತಿ ಕೃಷ್ಣ ಎಂಬುವರು ದೊಣ್ಣೆ ಹಾಗೂ ಕಲ್ಲಿನಿಂದ ಹಲ್ಲೆ ಮಾಡಿದ ಆರೋಪಕ್ಕೆ ಗುರಿಯಾಗಿದ್ದಾರೆ.

ವಿವರ: ಮಧುಸೂದನ್ ತಂದೆ ಎಸ್.ಕೃಷ್ಣ ಅವರು ತಮ್ಮ ಮನೆ ಮತ್ತು ಜಮೀನನ್ನು ಮಕ್ಕಳಿಗೆ ದಾನ ಮಾಡಿದ್ದು, ಹಾಲಿ ಬೆಂಗಳೂರಿನಲ್ಲಿ ವಾಸವಿರುವ ಕಿರಿಯ ಮಗ ಹೇಮಂತ್ ಕುಮಾರ್‌ಗೆ ನೀಡಿದ್ದ ನಾಗನಹಳ್ಳಿಯ ಮನೆಯಲ್ಲಿ ಪತ್ನಿಯೊಂದಿಗೆ ವಾಸವಿದ್ದು, ಜಮೀನನ್ನು ಅವರೇ ನೋಡಿಕೊಳ್ಳುತ್ತಿದ್ದರು.

ಆದರೆ ಇತ್ತೀಚೆಗೆ ಹೇಮಂತ್ ಕುಮಾರ್ ತನ್ನ ಮನೆ ಮತ್ತು ಜಮೀನನ್ನು ಕೊಡುವಂತೆ ತಂದೆಯೊಂದಿಗೆ ಗಲಾಟೆ ಮಾಡಿದ್ದಲ್ಲದೇ, ತಂದೆ–ತಾಯಿ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದ ಎನ್ನಲಾಗಿದೆ. ಮೇ 30ರಂದು ಗ್ರಾಮಕ್ಕೆ ಬಂದಿದ್ದ ಹೇಮಂತ್ ಕುಮರ್ ಮತ್ತಿತರ ಆರೋಪಿಗಳು ಮಧುಸೂದನ್‌ನ ತಾಯಿ ಅಣ್ಣನ ಮಗ ಶಶಿಕುಮಾರ್ ಮೇಲೆ ಹಲ್ಲೆ ನಡೆಸಿದ್ದು, ಆತನ ಎಡಗೈ ಬೆರಳನ್ನು ಕಚ್ಚಿ ತುಂಡರಿಸಿದ್ದಾರೆ. ಇದನ್ನು ಪ್ರಶ್ನಿಸಿದ ಮಧುಸೂದನ್ ಮತ್ತು ಚಿಕ್ಕಮ್ಮ ಭಾಗ್ಯಮ್ಮ ಮೇಲೂ ಈ ಗುಂಪು ಹಲ್ಲೆ ನಡೆಸಿತು ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮೇಟಗಳ್ಳಿ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.



ಹಲ್ಲೆಗೊಳಗಾದ ಮಧುಸೂದನ್.

ಡಾ. ಅಹಮದ್ ಕೆ.ಅಫ್ಜಲ್ ನಿಧನ



ಮೈಸೂರು, ಜೂ.1–ಹಿರಿಯ ಹೃದಯ ತಜ್ಞ ಹಾಗೂ ಮೈಸೂರು ಸಿದ್ಧಾರ್ಥನಗರ ನಿವಾಸಿ ಡಾ. ಅಹಮದ್ ಕೆ.ಅಫ್ಜಲ್(84) ಅವರು ಇಂದು ನಿಧನರಾದರು. ಮೃತರು ಪತ್ನಿ ಶ್ರೀಮತಿ ಶಾಹೀನ್ ಕೆ.ಅಫ್ಜಲ್, ಪುತ್ರಿಯರಾದ ಸೀಮಾ, ಸೆಹರ್, ಅಳಿಯ ಮನು ಸೇರಿದಂತೆ ಅಪಾರ ಬಂಧು ವರ್ಗ, ಮಿತ್ರರ ಅಗಲಿದ್ದಾರೆ. ನಾಳೆ (ಭಾನುವಾರ) ಅಜಾಂ ಮಸೀದಿಯಲ್ಲಿನ ಮಾಜ್ ಇ ಜನಾಜ್ ನಂತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾರತದ ಸಂವಿಧಾನದಲ್ಲಿ ಬಸವಣ್ಣನ ಚಿತ್ರ ಸೇರ್ಪಡಿಸುವುದು ನ್ಯಾ.ಕೃಷ್ಣ ಎಸ್.ದೀಕ್ಷಿತ್ ಅಭಿಲಾಷೆ

● ಮೈಸೂರು ವಕೀಲರ ಸಂಘದಿಂದ ಬಸವ ಜಯಂತಿ ಆಚರಣೆ ● ಈಗಾಗಲೇ 22 ಚಿತ್ರಗಳಿವೆ 23ನೇದಾಗಿ ಬಸವಣ್ಣ ಸೇರ್ಪಡೆಗೆ ಕರೆ

ಮೈಸೂರು, ಜೂ.1(ಎಂಕೆ)– ಭಾರತ ಸಂವಿಧಾನದಲ್ಲಿ ರಾಮಾಯಣ, ಮಹಾಭಾರತ ಸೇರಿ ಇನ್ನಿತರೆ 22 ಚಿತ್ರಗಳಿವೆ. 23ನೇ ಚಿತ್ರವಾಗಿ ಜಗಜ್ಯೋತಿ ಬಸವೇಶ್ವರರ ಚಿತ್ರ ಕಂಗೊಳಿಸುವಂತಾಗಬೇಕು. ಇದಕ್ಕಾಗಿ ಒಕ್ಕೊರಲಿನಿಂದ ಮನವಿ ಮಾಡಬೇಕಿದೆ ಎಂದು ಹೈಕೋರ್ಟ್ ನ್ಯಾಯಾಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್ ಕರೆ ನೀಡಿದರು.

ಮೈಸೂರು ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ಮೈಸೂರು ವಕೀಲರ ಸಂಘದ ವತಿಯಿಂದ ಶನಿವಾರ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಸಂವಿಧಾನದಲ್ಲಿ 22 ಚಿತ್ರಗಳಿವೆ. ರಾಮಾಯಣ, ಮಹಾಭಾರತ ಹಾಗೂ ಟಿಪ್ಪು ಸುಲ್ತಾನನ ಚಿತ್ರವೂ ಇದೆ. ಇವುಗಳಿಗೆ ವಿಶೇಷ ಅರ್ಥವಿದೆ ಎಂಬುದಕ್ಕೆ ಆಯಾ ಭಾಗಗಳಲ್ಲಿ ಇವುಗಳನ್ನು ಮುದ್ರಿಸಲಾಗಿದೆ. 12ನೇ ಶತಮಾನದಲ್ಲೇ ಅನುಭವ ಮಂಟಪದ ಮೂಲಕ ಸಂಸತ್ತಿನ ರೂಪುರೇಷೆಗಳನ್ನು ಪೂರ್ಣಪ್ರಮಾಣ ದಲ್ಲಿ ನೀಡಿದ, ಕಾಯಕವೇ ಕೈಲಾಸವೆಂಬ ಮೂಲಮಂತ್ರವನ್ನು ಜನಮಾನಸಕ್ಕೆ ಕೊಟ್ಟ ಬಸವೇಶ್ವರರ ಚಿತ್ರ ಸಂವಿಧಾನದ ಯಾವು ದಾದರೊಂದು ಪುಟದಲ್ಲಿ ಕಂಗೊಳಿಸುವಂತಾಗಬೇಕು ಎಂದು ತಮ್ಮ ಅಭಿಲಾಷೆ ವ್ಯಕ್ತಪಡಿಸಿದರು.

ಭಾರತದ ದೇಶದ ಸಂಸ್ಕೃತಿ ಪ್ಲೇಟೋ ರಿಪಬ್ಲಿಕ್, ಮ್ಯಾಗ್ನಕಾರ್ಟ ಎಂಬ ಥಿಯರಿಗಳಿಂದ ಹುಟ್ಟಿದದಂತಹದಲ್ಲ. ಭಾರತದ ಸಂಸ್ಕೃತಿ ಸಾವಿರಾರು ವರ್ಷಗಳ ಹಳೆಯದು. ಪಾಲ್ಕಿವಾಲಾ ಅವರು ತಮ್ಮ 'ವಿ ದ ಪೀಪಲ್' ಪುಸ್ತಕದಲ್ಲಿ ಅತ್ಯಂತ ಉತ್ಕೃಷ್ಟವಾದ ನಾಗರಿಕತೆ, ಸೂರ್ಯನ ಅಡಿಯಲ್ಲಿ ಭೂಮಿಯ ಮೇಲೆ ಎಲ್ಲಿ ಇದೆ ಎಂದು ಕೇಳಿದರೆ ನನ್ನ ತೋರ್ ಬೆರಳು ಭಾರತದತ್ತ ಎಂದು ಉಲ್ಲೇಖಿಸಿದ್ದಾರೆ. 12ನೇ ಶತಮಾನದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಉತ್ಕೃಷ್ಟವಾದ ನಾಗರಿಕತೆ ಇತ್ತು. ಇದಕ್ಕೆ ಶಾಸನಗಳಿವೆ ಹಾಗೂ ಬರಹಗಳಿದ್ದು, ಬೆಂಜಮಿನ್ ಲೂಯಿ, ಕಿಟೆಲ್, ವಿಲಿಯವ್ಸ್, ಎಂ.ಎಂ.ಕಲಬುರ್ಗಿ ಸೇರಿದಂತೆ ಅನೇಕರು ಬರೆದಿದ್ದಾರೆ. ಅದರಂತೆ ಸಂವಿಧಾನ ರಚನಾ ಸಮಿತಿ ಸಭೆಯಲ್ಲಿ ನಮ್ಮ ದೇಶದ ನಾಗರಿಕತೆ, ನಾಗರಿಕತೆಯ ಮೌಲ್ಯಗಳು ಅನ್ಯ ದೇಶಗಳಿಂದ ಬಂದಿವೆ ಎಂಬುದರ ಚರ್ಚೆಗಳಾಗಿವೆ ಎಂದ ಅವರು, ಅನ್ಯ ಸಂಸ್ಕೃತಿಗಳು, ನಾಗರಿಕತೆಗಳು ಭಾರತಕ್ಕೆ ಹೊರಗಿನಿಂದ ಬಂತು ಎಂಬ ತಪ್ಪು ತಳಹದಿಯ ಮೇಲಿನ ಚರ್ಚೆ ನಮಗ್ಯಾಕೆ ಬೇಕು. 12ನೇ ಶತಮಾನದಲ್ಲಿಯೇ ನಮ್ಮಲ್ಲಿ ಅದ್ಭುತವಾದ ಪಾರ್ಲಿಮೆಂಟ್ ಇತ್ತು. ಅದು ಅನುಭವ, ಅನುಭಾವ ಮಂಟಪ ಎಂದರು.

ಕೇಶವಾನಂದ ಭಾರತಿ ಪ್ರಕರಣದಲ್ಲಿ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಅಧಿಕಾರ ಸಂಸತ್ತಿಗಿದೆ ಎಂದು ಉಲ್ಲೇಖಿಸಲಾಗಿತ್ತು. ಸಂವಿಧಾನಕ್ಕೆ ಹಲವು ತಿದ್ದುಪಡಿಗಳು ಆಗಿವೆ. ಬಸವೇಶ್ವರರ ಅನುಭವ ಮಂಟಪ, ಭಾರತದ ಸಂಸತ್ತಿಗೆ ಪೂರ್ಣಪ್ರಮಾಣದ ರೂಪುರೇಷೆ ನೀಡಿರುವುದಕ್ಕೆ ಅಧಿಕೃತ ದಾಖಲೆಗಳಿದ್ದು, ಅಲ್ಲಗಳೆಯಲಾಗದ ಸಾಕ್ಷಿಗಳಿವೆ. ಅಲ್ಲದೆ ಇತ್ತೀಚೆಗೆ ಪ್ರಧಾನಿ ಮೋದಿಯವರು ತಮ್ಮ ಕೆಲ ಸಚಿವ ಸಂಪುಟದೊಂದಿಗೆ ಇಂಗ್ಲೆಂಡಿಗೆ ಹೋಗಿ ಬಸವೇಶ್ವರರ ಪುತ್ಥಳಿ ಸ್ಥಾಪಿಸಿದ್ದರು. ಹಾಗಾಗಿ ಸಂವಿಧಾನಕ್ಕೆ ಸಣ್ಣ–ಪುಟ್ಟ ತಿದ್ದುಪಡಿಯನ್ನಾದರೂ ತಂದು ಜಗಜ್ಯೋತಿ ಬಸವೇಶ್ವರರ ಚಿತ್ರ ಸಂವಿಧಾನದ ಯಾವುದಾದರೂ ಒಂದು ಪುಟದಲ್ಲಿ ಕಂಗೊಳಿಸುವಂತಾಗಲಿ ಎಂದು ಅಭಿಪ್ರಾಯಪಟ್ಟರು.

ಮೂಲಮಂತ್ರ: ಬಸವೇಶ್ವರರು ವಚನಗಳ ಮೂಲಕ ವೇದ–ಉಪನಿಷತ್ತುಗಳು ಸಾಮಾನ್ಯರಿಗೂ ಅರ್ಥವಾಗುವಂತೆ ಮಾಡಿದರು. ಅದರಲ್ಲೂ 'ಕಾಯಕವೇ ಕೈಲಾಸ' ವೆಂಬ ಮೂಲ ಮಂತ್ರವನ್ನು ನೀಡಿದ್ದು, ಅದು ಶುಕ್ರನೀತಿಯ ಒಂದು ಮಂತ್ರ. ಇದನ್ನು ದನ ಕಾಯುವ, ಹುಳುಮೆ ಮಾಡುವ ಸೇರಿದಂತೆ ಎಲ್ಲಾ ಬಗೆಯ ಕಾಯಕದಲ್ಲಿ ತೊಡಗಿರುವವರಿಗೆ ಅರ್ಥವಾಗುವಂತೆ ಅತ್ಯಂತ ಸರಳೀಕೃತವಾಗಿ ತಿಳಿಸಿದರು. ಅದರಂತೆ ಅನುಭವ ಮಂಟಪದಲ್ಲಿಯೂ ಎಲ್ಲರನ್ನೂ ಕರೆದುಕೊಂಡು ಸಮ–ಸಮಾಜದ ಚರ್ಚೆ ಮಾಡುತ್ತಿದ್ದರು. ಮುಖ್ಯವಾಗಿ ಸ್ತ್ರೀಯರಿಗೆ ವಿಶೇಷವಾದ ಸ್ಥಾನವನ್ನು ಕೊಟ್ಟಿದ್ದರು. ಅವರು ಸಾಕಷ್ಟು ಅಧ್ಯಯನಶೀಲರಾಗಿದ್ದರು ಎಂದು ಬಣ್ಣಿಸಿದರು.

ಇದಕ್ಕೂ ಮುನ್ನ ಹೈಕೋರ್ಟ್ ನ್ಯಾಯಾಮೂರ್ತಿಗಳೂ ಆದ ಮೈಸೂರು ಜಿಲ್ಲಾ ಆಡಳಿತಾತ್ಮಕ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಮಾತನಾಡಿದರು. ಬಳಿಕ ಮುಖ್ಯ ಭಾಷಣ ಮಾಡಿದ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಬಸವಣ್ಣನವರ ಅನುಭವ ಮಂಟಪ, ಸಮ–ಸಮಾಜದ ಹೋರಾಟ ಕುರಿತು ತಿಳಿಸಿದರು. ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗ್ಡೆ, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಸದಸ್ಯ ಬಿ.ಆರ್.ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಕೆ.ಆರ್.ಚರಣ್‌ರಾಜ್, ಮಹಿಳಾ ಜಂಟಿ ಕಾರ್ಯದರ್ಶಿ ಬಿ.ವಿ.ವಿನೋದ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಲಾಯಿತು. ಹೈಕೋರ್ಟ್ ನ್ಯಾಯಾಮೂರ್ತಿಗಳಾದ ಕೃಷ್ಣ ಎಸ್.ದೀಕ್ಷಿತ್, ಶ್ರೀನಿವಾಸ್ ಹರೀಶ್ ಕುಮಾರ್, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ, ಮೈಸೂರು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗ್ಡೆ ಮತ್ತಿತರರಿದ್ದರು.

ಭಾರತ ಸಂವಿಧಾನವೇ ಮಹಾನ್ ಉಪನಿಷತ್ತು...!

ಸಂಸ್ಕೃತವನ್ನು ಬ್ರಾಹ್ಮಣರೇ ಆವರಿಸಿಕೊಂಡಿದ್ದರು. ಬೇರೆ ಸಮುದಾಯವರಿಗೆ ಅವಕಾಶ ಕೊಡಲಿಲ್ಲ ಎಂಬ ವಾದಗಳಿವೆ. ಆದರೆ ರಾಮಾಯಣವನ್ನು ಸಂಸ್ಕೃತದಲ್ಲಿ ಬರೆದ ವಾಲ್ಮೀಕಿ ಮಹರ್ಷಿಗಳು ಪರಿಶಿಷ್ಟ ಪಂಗಡಕ್ಕೆ ಸೇರಿದವರೆಂದು ಹೇಳಲಾಗುತ್ತದೆ. ಭಗವದ್ಗೀತೆಯನ್ನು ಸಂಸ್ಕೃತದಲ್ಲಿ ಹೇಳಿದ ಕೃಷ್ಣ ದನ ಕಾಯುವವ. ಉಪನಿಷತ್ತುಗಳಲ್ಲಿ ಅನೇಕ ಹಾಗೂ ಪ್ರಮುಖ ಉಪನಿಷತ್ತುಗಳನ್ನು ನೀಡಿದ್ದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೇ ಹೊರತು ಬ್ರಾಹ್ಮಣರಲ್ಲ. ವೇದ–ಉಪನಿಷತ್ತುಗಳಿಗೆ ದೊಡ್ಡ ಕೊಡುಗೆ ನೀಡಿದ್ದು ನಿಮ್ಮ ವರ್ಗದ ಜನ. ಇದೆಲ್ಲದಕ್ಕಿಂತ ದೊಡ್ಡ ಉಪನಿಷತ್ತು ಭಾರತ ಸಂವಿಧಾನ. ಅದನ್ನು ಕೊಟ್ಟಿದ್ದು ಡಾ.ಅಂಬೇಡ್ಕರ್. ಅದರ ಮುಂದೆ ಇನ್ನೊಂದು ವೇದ–ಉಪನಿಷತ್ತಿಲ್ಲ.

– ಕೃಷ್ಣ ಎಸ್.ದೀಕ್ಷಿತ್, ಹೈಕೋರ್ಟ್ ನ್ಯಾಯಾಮೂರ್ತಿಗಳು

ಶುಭ ಹಾರೈಕೆ



ಬಿಜೆಪಿ ಯುವ ಮುಖಂಡ ಹಾಗೂ ಸಮಾಜ ಸೇವಕ ಯೋಗೇಶ್ ಹುಟ್ಟುಹಬ್ಬದ ಆಚರಿಸಿಕೊಂಡ ವೇಳೆ ಅವರಿಗೆ ಚಾಮರಾಜ ಕ್ಷೇತ್ರದ ಬಿಜೆಪಿ ಮುಖಂಡ ಡಾ.ಶುಶ್ರುತ್ ಗೌಡ ಅವರು ಶುಭ ಹಾರೈಸಿದರು.

ಕೃಷ್ಣೇಗೌಡರು ಮಲ್ಟಿಪಲ್ ಕೌನ್ಸಿಲ್ ಛೇರ್ಮನ್



317 ಮಲ್ಟಿಪಲ್ ಡಿಸ್ಟ್ರಿಕ್ಟ್ ಕನ್ವೆನ್ಷನ್ ಬೆಂಗಳೂರಿನಲ್ಲಿ ಜರುಗಿತು. 317G ಜಿಲ್ಲಾ ರಾಜ್ಯಪಾಲರಾದ ಲಯನ್ ಡಾ.ಎನ್.ಕೃಷ್ಣೇಗೌಡರು 2024–25ನೇ ಸಾಲಿನ ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಆಗಿ ಆಯ್ಕೆಯಾದರು. ಸಮಾರಂಭದಲ್ಲಿ ಪಾಸ್ಟ್ ಡಿಸ್ಟ್ರಿಕ್ಟ್ ಗವರ್ನರ್ ಲಯನ್ ಕೆ.ದೇವೇಗೌಡ, ಲಯನ್ ಸುಬ್ರಹ್ಮಣ್ಯ, ಲಯನ್ ರಾಜಶೇಖರ್, ಲಯನ್ ವೆಂಕಟೇಶ್, ಲಯನ್ ಎಂ. ಸಿದ್ದೇಗೌಡ, ಲಯನ್ ಮತಿದೇವ್ ಕುಮಾರ್ ಹಾಗೂ ಲಯನ್ ಕಾಂತರಾಜು ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಖ್ಯಾತ ಉದ್ಯಮಿ ಬಸವರಾಜ್‌ಗೆ ಹುಟ್ಟುಹಬ್ಬದ ಸಂಭ್ರಮ...



ಹುಟ್ಟುಹಬ್ಬ ಆಚರಿಸಿಕೊಂಡ ಖ್ಯಾತ ಉದ್ಯಮಿ, ಬಸವ ಮಾರ್ಗ ಫೌಂಡೇಶನ್ ಅಧ್ಯಕ್ಷ ಬಸವರಾಜ್ ಅವರನ್ನು ನಿಕಟಪೂರ್ವ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಎಂಜೆ ಕಿರಣ್‌ಗೌಡ, ಪೈಲ್ವಾನ್ ಆದರ್ಶ್, ಐಕಾನ್ ರಾಜು, ಸಂತೋಷ್‌ಕುಮಾರ್, ದಿಲೀಪ್‌ಕುಮಾರ್, ಮಂಜೇಶ, ದರ್ಶನ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಮೈಸೂರಲ್ಲಿ ಪ್ರವಾಸಿಗರ ಸಂಭ್ರಮದ ನಡುವೆ ವಾಹನ ದಟ್ಟಣೆ

ಮೈಸೂರು, ಜೂ.1(ಎಸ್‌ಬಿಡಿ)– ಮೈಸೂರಿನ ವಿವಿಧೆಡೆ ಶನಿವಾರ ವಾಹನ ದಟ್ಟಣೆ ಉಂಟಾಗಿ, ಸಂಚಾರ ಅಸ್ತವ್ಯಸ್ತವಾಗಿತ್ತು. ಶಾಲೆಗಳು ಪುನಾರಂಭವಾಗಿದ್ದು, ಸೋಮವಾರದಿಂದ ನಿರಂತರ ತರಗತಿಗಳು ಆರಂಭವಾಗಲಿವೆ. ಈ ಹಿನ್ನೆಲೆಯಲ್ಲಿ ಮೈಸೂರಿಗೆ ಶನಿವಾರ ಮಕ್ಕಳೊಂದಿಗೆ ಹೆಚ್ಚು ಪ್ರವಾಸಿಗರು ಆಗಮಿಸಿದ್ದರು. ಪರಿಣಾಮ ಅರಮನೆ, ಮೃಗಾಲಯ ಸೇರಿದಂತೆ ಪ್ರವಾಸಿ ತಾಣಗಳ ಬಳಿ ವಾಹನ ದಟ್ಟಣೆ ವಿಪರೀತವಾಗಿತ್ತು. ಚಾಮುಂಡಿಬೆಟ್ಟಕ್ಕೂ ಭಕ್ತ ಸಾಗರ ಹರಿದು ಬಂದಿದ್ದರಿಂದ ರಸ್ತೆ ಹಾಗೂ ಬೆಟ್ಟದಲ್ಲಿ ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಕೆ.ಜಿ.ಕೊಪ್ಪಲಿನ ಕಾಮಾಕ್ಷಿ ಆಸ್ಪತ್ರೆ ರಸ್ತೆ, ಪೆಟ್ರೋಲ್ ಬಂಕ್ ಬಳಿ ಮರದ ರೆಂಬೆಯೊಂದು ಮುರಿದು ಬಿದ್ದಿದ್ದರಿಂದ ಕೆಲ ಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು.

ಮಳೆಯಲ್ಲಿ ಹೈರಾಣ: ವಾರಾಂತ್ಯ ದಿನಗಳಲ್ಲಿ ಮೈಸೂರಿನ ಹೃದಯ ಭಾಗದ ರಸ್ತೆಗಳಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಆದರೆ ಶನಿವಾರ ಮಧ್ಯಾಹ್ನ 3.30ರ ವೇಳೆಗೆ ಆರಂಭವಾದ ಜೋರು ಮಳೆ ವಾಹನ ದಟ್ಟಣೆಯಲ್ಲಿ ಸಿಲುಕಿದ್ದವರ ಹೈರಾಣಾಗಿಸಿತು. ಹಾರ್ಡಿಂಜ್ ವೃತ್ತದಿಂದ ಸಂಸ್ಕೃತ ಪಾಠಶಾಲೆ ಬಳಿಯ ಬಸವೇಶ್ವರ ವೃತ್ತ ತಲುಪಲು ಅರ್ಧ ಗಂಟೆ ಬೇಕಾಯಿತು. ಕುವೆಂಪು ಉದ್ಯಾನದ ಎದುರು ರಸ್ತೆಯಲ್ಲೇ ನೀರು ತುಂಬಿದ್ದರಿಂದ ವಾಹನ ಸಂಚಾರಕ್ಕೆ ಮತ್ತಷ್ಟು ಅಡ್ಡಿಯಾಯಿತು. ಗನ್‌ಹೌಸ್ ವೃತ್ತದಲ್ಲಿ ಎಲ್ಲಾ ಮಾರ್ಗಗಳಿಂದಲೂ ನಿರಂತರವಾಗಿ ವಾಹನಗಳು ಬಂದು, ಅಧ್ವಾನವಾಗಿತ್ತು. ಟ್ರಾಫಿಕ್ ಜಾಮ್ ಉಂಟಾಗಿ, ಯಾವ ಕಡೆಗೂ ಸಂಚರಿಸಲಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಕೆ.ಆರ್.ವೃತ್ತ, ಚಾಮರಾಜ ವೃತ್ತದಲ್ಲೂ ಇದೇ ಪರಿಸ್ಥಿತಿ ಉಂಟಾಗಿತ್ತು. ಡಿ.ದೇವರಾಜ ಅರಸು ರಸ್ತೆಯಲ್ಲೂ ವಾಹನ ದಟ್ಟಣೆ ಉಂಟಾಗಿದ್ದರಿಂದ ವಾಹನಗಳು ನಿಧಾನವಾಗಿ ಸಂಚರಿಸುತ್ತಿದ್ದವು. ಅರಸು ರಸ್ತೆ–ಜೆಎಲ್‌ಬಿ ರಸ್ತೆ ಜಂಕ್ಷನ್‌ನಲ್ಲಿ ಸಂಚಾರ ಅಸ್ತವ್ಯಸ್ತವಾಗಿದ್ದರಿಂದ ಎರಡೂ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಬೋಗಾದಿ ರಸ್ತೆ–ವಿಶ್ವಮಾನವ ಜೋಡಿ ರಸ್ತೆ ಜಂಕ್ಷನ್, ಕುಕ್ಕರಹಳ್ಳಿ ಕೆರೆ ಬಳಿಯ ಟ್ರಾಫಿಕ್ ಸಿಗ್ನಲ್ ನಿರ್ವಹಣಾ ಉಪಕರಣವನ್ನು ಕಿಡಿಗೇಡಿಗಳು ಒಡೆದು ಹಾಕಿರುವುದರಿಂದ ಸಿಗ್ನಲ್ ಲೈಟ್ ಕೆಟ್ಟಿದೆ. ಇದರಿಂದ ಇಲ್ಲಿಯೂ ರಸ್ತೆ ಸಂಚಾರ ಅಧ್ವಾನವಾಗಿ, ಸಾರ್ವಜನಿಕರು ಪರಿತಪಿಸಿದರು. ಹೀಗೆ ಮಳೆ ವೇಳೆ ಹಲವು ಸಿಗ್ನಲ್ ಲೈಟ್‌ಗಳು ಆಫ್ ಆಗಿದ್ದರಿಂದ ಅಡ್ಡಾದಿಡ್ಡಿ ವಾಹನ ಸಂಚಾರ ಉಂಟಾಗಿತ್ತು. ಕೆಲವೆಡೆ ಸಂಚಾರ ಪೊಲೀಸರು ವಾಹನ ದಟ್ಟಣೆ ನಿರ್ವಹಣೆ ಮಾಡಿದರೆ, ಹಲವೆಡೆ ತುಂಬಾ ತೊಂದರೆ ಉಂಟಾಗಿತ್ತು. ದ್ವಿಚಕ್ರ ಸವಾರರಂತೂ ವಾಹನ ದಟ್ಟಣೆಯಲ್ಲಿ ಸಿಲುಕಿ ಮಳೆಯಲ್ಲಿ ತೊಯ್ದರು.



ಮೈಸೂರಿನ ಡಿ.ದೇವರಾಜ ಅರಸು ರಸ್ತೆಯಲ್ಲಿ ಶನಿವಾರ ವಾಹನ ದಟ್ಟಣೆ ಉಂಟಾಗಿತ್ತು.



ಸಿಗ್ನಲ್ ಲೈಟ್ ಕೆಟ್ಟಿರುವುದರಿಂದ ಕುಕ್ಕರಹಳ್ಳಿ ಬಳಿ ರಸ್ತೆ ಸಂಚಾರ ಅಸ್ತವ್ಯಸ್ತವಾಗಿರುವುದು.



ಕೆ.ಜಿ.ಕೊಪ್ಪಲು ಪೆಟ್ರೋಲ್ ಬಂಕ್ ಬಳಿ ಮರದ ರೆಂಬೆ ಮುರಿದು ಬಿದ್ದಿರುವುದು.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ

ಮೈಸೂರು, ಜೂ.1– 2023–2024ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ಮೂಗೂರು ಕರ್ನಾಟಕ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಜೂ.22 ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಸಂಘದ ಆವರಣ ಶ್ರೀ ಶಾರದಾ ನಿಕೇತನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮುದಾಯದ ಅರ್ಹ ವಿದ್ಯಾರ್ಥಿಗಳು ಸ್ವಯಂ ಲಿಖಿತ ಅರ್ಜಿಯೊಂದಿಗೆ ತಮ್ಮ ಅಂಕಪಟ್ಟಿಯ ನಕಲು ಹಾಗೂ ಇತ್ತೀಚಿನ ಎರಡು ಭಾವಚಿತ್ರದೊಂದಿಗೆ ಜೂ.10ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ನೋಂದಣಿ ಹಾಗೂ ಮಾಹಿತಿಗೆ ಸಂಘದ ಅಧ್ಯಕ್ಷ ಎಂ.ವಿಶ್ವನಾಥಯ್ಯ (ಮೊ.ಸಂ.9845110272), ಕಾರ್ಯದರ್ಶಿ ಕೆ.ಆರ್.ಮಂಜುನಾಥ್(9945657522), ಹೊಮ್ಮ ಮಂಜುನಾಥ್ (9845926973) ನಾಗಶಯನ(9448773575) ಅಥವಾ ನಟೇಶ್(9448468800) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇಂಡಿಯನ್ ಟಿವಿ ಸಂಸ್ಥಾಪಕ ಬಸವರಾಜು ಹುಟ್ಟುಹಬ್ಬ ಸಂಭ್ರಮದ ಆಚರಣೆ



ಮೈಸೂರಿನ ಬಸವ ಮಾರ್ಗ ಫೌಂಡೇಶನ್ ಹಾಗೂ ಇಂಡಿಯನ್ ಟಿವಿ ಸಂಸ್ಥಾಪಕ ಎಸ್.ಬಸವರಾಜು ಅವರ ಹುಟ್ಟುಹಬ್ಬ ಅದ್ದೂರಿಯಾಗಿ ನೆರವೇರಿತು.

ಮೈಸೂರು, ಜೂ.1(ಎಸ್‌ಬಿಡಿ)– ಸರ್ಕಾರಿ ಶಾಲೆ ಸೌಕರ್ಯಕ್ಕೆ 2 ಲಕ್ಷ ರೂ. ನೆರವು ಘೋಷಣೆ ಹಾಗೂ ವಿವಿಧೆಡೆ ಗಿಡ ನೆಟ್ಟು, ಪೋಷಿಸುವ ಸಂಕಲ್ಪದೊಂದಿಗೆ ಇಂಡಿಯನ್ ಟಿವಿ ಹಾಗೂ ಬಸವ ಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು ಅರ್ಥಪೂರ್ಣವಾಗಿ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡರು.

ಮೈಸೂರಿನ ಹೆಬ್ಬಾಳದಲ್ಲಿರುವ ಬಸವ ಮಾರ್ಗ ಫೌಂಡೇಶನ್ ಆವರಣದಲ್ಲಿ ಆಯೋಜಿಸಿದ್ದ ಹುಟ್ಟುಹಬ್ಬ ಸಮಾರಂಭದಲ್ಲಿ ಮಾತನಾಡಿದ ಅವರು, ಬಂಧುಗಳು, ಸ್ನೇಹಿತರು, ಅಭಿಮಾನಿಗಳು ತೋರುತ್ತಿರುವ ಪ್ರೀತಿ, ವಿಶ್ವಾಸಕ್ಕೆ ನಾನೆಂದೂ ಚಿರಋಣಿ. ನಮ್ಮ ಸೇವೆಗಳನ್ನು ಗುರುತಿಸಿ ಎಲ್ಲರೂ ಪ್ರೀತಿ ತೋರುತ್ತಿದ್ದಾರೆ. ಇದಕ್ಕೆ ಬೆಲೆ ಕಟ್ಟಲಾಗದು. ವ್ಯಸನ ಮುಕ್ತ ಸಮಾಜ ನಿರ್ಮಾಣ, ಮಕ್ಕಳ ಶಿಕ್ಷಣ ಹಾಗೂ ವೃದ್ಧರಿಗೆ ಆಸರೆಯಾಗುವುದು ನನ್ನ ಕನಸು. ಅದನ್ನು ನನಸು ಮಾಡುವ ನಿಟ್ಟಿನಲ್ಲಿ ಸಾಗುತ್ತಿದ್ದೇನೆ. ಕುಕ್ಕರಹಳ್ಳಿ ಸರ್ಕಾರಿ ಶಾಲೆಯ ಮೂಲಸೌಕರ್ಯ ಅಭಿವೃದ್ಧಿಗೆ 2 ಲಕ್ಷ ರೂ. ನೆರವು ನೀಡಲಿದ್ದೇನೆ. ನಗರದ ವಿವಿಧೆಡೆ ಗಿಡಗಳನ್ನು ನೆಡುವ ಸಂಕಲ್ಪ ಮಾಡಿದ್ದೇನೆ ಎಂದರು.

ಈ ವೇಳೆ ಇಂಡಿಯನ್ ಟಿವಿ ಎಂಡಿ ಎಸ್.ವೆಂಕಟೇಶ್ ಕುಮಾರ್, ಸಿಇಒ ಎಸ್.ರಾಜು, ಪ್ರಕಾಶ್, ಕೃಷ್ಣ ಪ್ರಜ್ವಲ್, ಮಂಜೇಶ್, ನವೀನ, ದ್ವಾರಕಿ, ರಾಜಣ್ಣ, ಸೀನಣ್ಣ, ರಾಕಿ, ರವಿಕುಮಾರ್, ಅರುಣ್, ಮಹೇಶ್, ಬಸವ ಮಾರ್ಗ, ಇಂಡಿಯನ್ ಟಿವಿ ಹಾಗೂ ಓಂಕಾರ್ ಅಂಡ್ ಕಂಪನಿ ಸಿಬ್ಬಂದಿ ಸೇರಿದಂತೆ ಸಾವಿರಾರು ಮಂದಿ, ಬಸವರಾಜು ಅವರಿಗೆ ಶುಭ ಹಾರೈಸಿದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ. 1–ಜೂ.2ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ಕಡಕೊಳ ವಿ.ವಿ ಕೇಂದ್ರದ ವ್ಯಾಪ್ತಿಯ ಕಡಕೊಳ, ಬ್ಯಾತಹಳ್ಳಿ, ದಡದಹಳ್ಳಿ, ಸಿಂಧುವಳ್ಳಿ, ದೊಡ್ಡಕಾನ್ಯ, ಚಿಕ್ಕಕಾನ್ಯ, ಕೂಡನಹಳ್ಳಿ, ಕೋಚನಹಳ್ಳಿ, ಮರಸೆ, ಮಾಕನಹುಂಡಿ, ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯಾ, ವಿಮಾನ ನಿಲ್ದಾಣ, ಬೀರೇಗೌಡನಹುಂಡಿ, ಕೆ.ಎಂ. ಹುಂಡಿ, ಬಿ.ಜಿ. ಹುಂಡಿ, ಕೆ.ಎನ್. ಹುಂಡಿ, ಆಯರಹಳ್ಳಿ, ಕಿರಾಳು, ದೂರ, ಮುರುಡಗಳ್ಳಿ, ತಳೂರು, ಡಿ. ಕಾಟೂರು, ಟಿ.ವಿ.ಎಸ್. ಫ್ಯಾಕ್ಟರಿ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಎಫ್.ಟಿ.ಎಸ್ ವಿ.ವಿ ಕೇಂದ್ರದ ವ್ಯಾಪ್ತಿಯ ಸುಭಾಷ್ ನಗರ, ಕೆಸರೆ 1ನೇ, 2ನೇ ಹಾಗೂ 3ನೇ ಹಂತ, ನ.ರಾ. ಮೊಹಲ್ಲಾ, ಗಾಂಧಿನಗರ, ಮೊಹಮ್ಮದ್ ಸೇಠ್ ಬ್ಲಾಕ್, ವೀರನಗೆರೆ, ಉದಯಗಿರಿ, ಬನ್ನಿಮಂಟಪ, ನೆಲ್ಸನ್ ಮಂಡೇಲಾ ರಸ್ತೆ, ಎಲ್‌ಐಸಿ, ಹೈವೆ ವೃತ್ತ, ತಿಲಕ್‌ನಗರ, ಉಮ್ಮರ್ ಖಾಯಂ ರಸ್ತೆ, ನ್ಯೂ ಸಯ್ಯಾಜಿರಾವ್ ರಸ್ತೆ, ರಾಜೇಂದ್ರ ನಗರ, ಮೇದರ್ ಬ್ಲಾಕ್, ಬಂಬೂ ಬಜಾರ್, ಲಯನ್ಸ್ ಕ್ಲಬ್, ಫರೂಕೀಯಾ ಡೆಂಟಲ್ ಕಾಲೇಜು, ಜೈಲ್ ವಸತಿ ಗೃಹ, ಐ.ಟಿ.ಐ ಕಾಲೇಜು, ಭಾವನಾ ಮಾರ್ಬಲ್ ರಸ್ತೆ, 'ಎ' ಬಡಾವಣೆ, ಬಿ.ಬಿ ಕೇರಿ, ಬಿ.ಟಿ ಮಿಲ್ ರಸ್ತೆ, ಈದ್ಗಾ ಮೈದಾನ, ಕಬೀರ್ ಮಠ, ಆನೆಗುಂದಿ ರಸ್ತೆ, ಹನುಮಂತನಗರ, ಕೆಎಸ್‌ಆರ್‌ಟಿಸಿ, ಎಸ್.ಎಸ್ ನಗರ, ಕಾವೇರಿ ನಗರ, ಸಿದ್ದಿಖಿನಗರ, ಬನ್ನಿಮಂಟಪ 'ಸಿ' ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಲೋಕಸಭಾ ಚುನಾವಣಾ ಮತ ಎಣಿಕೆ ಸಂಬಂಧ ಅಧಿಕಾರಿಗಳು, ಸಿಬ್ಬಂದಿಗೆ ತರಬೇತಿ





ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಲೋಕಸಭಾ ಚುನಾವಣಾ ಮತ ಎಣಿಕೆ ಮೇಲ್ವಿಚಾರಕರು, ಮೈಕ್ರೋ ಅಬ್ಸರ್‌ವರ್‌ಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಗೆ ಮಾಸ್ಟರ್ ಟ್ರೈನರ್‌ಗಳು ಮತ ಎಣಿಕೆ ಸಂಬಂಧ ತರಬೇತಿ ನೀಡಿದರು.

ಮೈಸೂರು, ಜೂ. 1(ಆರ್‌ಕೆ)– ಮೈಸೂರಿನ ಕಲಾಮಂದಿರದಲ್ಲಿ ಇಂದು ಲೋಕಸಭಾ ಚುನಾವಣಾ ಮತ ಎಣಿಕೆ ಮೇಲ್ವಿಚಾರಕರು, ಮೈಕ್ರೋ ಅಬ್ಸರ್‌ವರ್‌ಗಳು ಹಾಗೂ ಸಹಾಯಕ ಚುನಾವಣಾಧಿಕಾರಿಗಳಿಗೆ ಮಾಸ್ಟರ್ ಟ್ರೈನರ್‌ಗಳು ಮತ ಎಣಿಕೆ ಸಂಬಂಧ ತರಬೇತಿ ನೀಡಿದರು.

ಹೆಚ್.ಡಿ. ಕೋಟೆ ಸರ್ಕಾರಿ ಪದವಿ ಕಾಲೇಜು ಸಹಪ್ರಾಧ್ಯಾಪಕ ಕೃಪಾಗಣೇಶ್, ಮಹಾರಾಣಿ ಬಿ.ಇಡಿ ಕಾಲೇಜು ಸಹಾಯಕ ಪ್ರಾಧ್ಯಾಪಕ ಕೆ.ಸಿ.ಸತೀಶ್ ಹಾಗೂ ಮಹಾರಾಣಿ ಕಾಲೇಜು ಪ್ರಾಧ್ಯಾಪಿಕ ಪಿ.ಎಸ್.ರಘು ಮತ ಎಣಿಕಾ ಪ್ರಕ್ರಿಯೆ ಬಗ್ಗೆ ತರಬೇತಿ ನೀಡಿದರು.

530 ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಂಚೆ ಮತ ಪತ್ರಗಳ ಎಣಿಕಾ ಕ್ರಮ, ವಿದ್ಯುನ್ಮಾನ ಮತ ಯಂತ್ರಗಳಲ್ಲಿ ದಾಖಲಾಗಿರುವ ಮತಗಳ ಎಣಿಕೆ, ವಿವಿ ಪ್ಯಾಟ್‌ನೊಂದಿಗೆ ಹೋಲಿಕೆ ಮಾಡಿ ಮತಗಳ ಸಂಖ್ಯೆ ಮ್ಯಾಚ್ ಮಾಡುವ ಬಗ್ಗೆ ಮಾಸ್ಟರ್ ಟ್ರೇನರ್‌ಗಳಿಂದ ತಿಳಿದುಕೊಂಡರು.

ಸಿಂಧು–ಅಸಿಂಧು ಮತಗಳ ನಿರ್ಧಾರಣೆ, ಪ್ರತೀ ಟೇಬಲ್‌ಗೆ ಹಂಚಲಾಗುವ ತಲಾ 500 ಅಂಚೆ ಮತಪತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸ್ವೀಕೃತ ಮತ್ತು ತಿರಸ್ಕೃತ ಮತ ಪತ್ರಗಳನ್ನು ವಿಂಗಡಿಸಿ ಪಟ್ಟಿ ಮಾಡಬೇಕು ಎಂದು ತಿಳಿಸಿದರು.

ಮತದಾನದ ಮಾಹಿತಿಯನ್ನು ಗೌಪ್ಯವಾಗಿರಿಸಬೇಕು, ಅಭ್ಯರ್ಥಿಗಳ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ಇವಿಎಂಗಳನ್ನು ತೆರೆದು ತೋರಿಸಿ ಎಣಿಕೆ ಮಾಡುವ ಜೊತೆಗೆ ಒಂದು ಯಂತ್ರದಲ್ಲಿ ಯಾರ್‍ಯಾರಿಗೆ ಎಷ್ಟು ಮತಗಳು ಬಂದಿವೆ ಎಂಬುದನ್ನು ಇವಿಎಂ ಸಂಖ್ಯೆ ಸಮೇತ ದಾಖಲಿಸಿ ಆಯಾ ಸಹಾಯಕ ಚುನಾವಣಾಧಿಕಾರಿಗಳಿಗೆ ಸಲ್ಲಿಸಿ ಸಹಿ ಪಡೆಯುವುದು ಅತೀ ಮುಖ್ಯ ಎಂಬುದನ್ನು ಮನವರಿಕೆ ಮಾಡಲಾಯಿತು. ಎಣಿಕೆಗೆ ನೇಮಕವಾಗಿರುವವರು ಕಡ್ಡಾಯವಾಗಿ ಗುರುತಿನ ಚೀಟಿಯನ್ನು ಕೊರಳಿಗೆ ಹಾಕಿಕೊಂಡು ಒಂದು ಗಂಟೆ ಮುಂಚಿತವಾಗಿ ಬೆಳಗ್ಗೆ 7 ಗಂಟೆಗೆ ಕೇಂದ್ರಕ್ಕೆ ಬಂದು ವರದಿ ಮಾಡಿಕೊಳ್ಳಬೇಕೆಂದು ಮಾಸ್ಟರ್ ಟ್ರೇನರ್‌ಗಳು ತಿಳಿಸಿದರು.

ಯುವ ಸಮುದಾಯಕ್ಕೆ ಶ್ರೀನಿವಾಸ ಪ್ರಸಾದ್ ಆದರ್ಶ

ಪ್ರಸಾದ್ ನೆನಪಿನ ಕಾರ್ಯಕ್ರಮದಲಿ ಲೇಖಕ ಅಗ್ನಿ ಶ್ರೀಧರ್



ಮೈಸೂರಿನ ಮಾನಸ ಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಶ್ರೀನಿವಾಸ ಪ್ರಸಾದ್ ನೆನಪಿನ ಕಾರ್ಯಕ್ರಮದಲ್ಲಿ ಪ್ರಸಾದ್ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಮೈಸೂರು,ಜೂ.1(ಪಿಎಂ)– ಜಾತಿ–ಧರ್ಮದ ಹೆಸರಿನಲ್ಲಿ ಯುವ ಸಮುದಾಯವನ್ನು ರಾಜಕೀಯ ವ್ಯವಸ್ಥೆ ಒಡೆದಿದ್ದು, ಇದನ್ನು ಮೀರಿ ಯುವ ಸಮುದಾಯ ಒಂದಾಗಬೇಕು. ಇದಕ್ಕೆ ವಿ.ಶ್ರೀನಿವಾಸ ಪ್ರಸಾದ್ ಆದರ್ಶವಾಗಬೇಕು. ಅವರಂತೆ ಪ್ರಶ್ನಿಸುವ ಮತ್ತು ಅರಿವು ಹೊಂದುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಲೇಖಕ ಅಗ್ನಿ ಶ್ರೀಧರ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಇಎಂಎಂಆರ್‌ಸಿ ಸಭಾಂಗಣದಲ್ಲಿ ಮೈಸೂರು ವಿವಿ ದಲಿತ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಬಂಡಾಯದ ಬೆಂಕಿ ಶ್ರೀನಿವಾಸ ಪ್ರಸಾದ್ ಅವರ ನೆನಪಿನ ಕಾರ್ಯಕ್ರಮದಲ್ಲಿ ಪ್ರಸಾದ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಇಡೀ ಪ್ರಪಂಚವನ್ನೇ ಉದ್ಧಾರ ಮಾಡುತ್ತೇವೆಂದು ಯುವ ಜನರು ಹೋಗುವುದನ್ನು ಬಿಟ್ಟು ಸರಿಯಾದ ಚಿಂತನೆ ಮೂಲಕ ಅರಿವು ಹೊಂದಬೇಕು. ಇಡೀ ಪ್ರಪಂಚವೆಲ್ಲಾ ಒಮ್ಮೆಗೆ ಎಂದಿಗೂ ಉದ್ಧಾರವಾಗಲು ಸಾಧ್ಯವಿಲ್ಲ. ಈಗ ಅಂಗೈಯಲ್ಲೇ ಇಡೀ ಪ್ರಪಂಚದಲ್ಲಿ ಯಾರನ್ನು ಬೇಕಾದರೂ ತಲುಪಬಹುದು. ಅದನ್ನು ಸದ್ಬಳಕೆ ಮಾಡಿಕೊಂಡು ಸಂಘಟಿತರಾಗಬೇಕೆಂದು ಸಲಹೆ ನೀಡಿದರು.

70ರ ದಶಕದ ಕೊನೆಯಲ್ಲಿ ನಾನು ಮೊದಲ ಬಾರಿಗೆ ಪ್ರಸಾದ್ ಹೆಸರು ಕೇಳಿದೆ. ನಾನು ಆಗ ಲಂಕೇಶ ಅವರೊಂದಿಗೆ ಕೆಲಸ ಮಾಡುತ್ತಿದ್ದೆ. ಮೈಸೂರಿನಿಂದ ಆಗ ಶ್ರೀನಿವಾಸ ಪ್ರಸಾದ್, ದೇವನೂರ ಮಹಾದೇವ ಅವರು ರಾಜಕೀಯ ಪ್ರವೇಶಿಸಬೇಕೆಂಬ ಒತ್ತಾಯ ಕೇಳಿ ಬಂದಿದ್ದವು. ಆದರೆ ದೇವನೂರ ಮಹಾದೇವ ರಾಜಕಾರಣಕ್ಕೆ ಬರಲಿಲ್ಲ ಎಂದು ಹಳೇ ನೆನಪಿಗೆ ಜಾರಿದರು.

ಶ್ರೀನಿವಾಸ ಪ್ರಸಾದ್ ಹೆಸರು ಮಾಡಿದ ಕಾರಣಕ್ಕೆ ರಾಜಕೀಯಕ್ಕೆ ಬಂದವರು. ಅಸಮಾನತೆ ಕಾರಣಕ್ಕಾಗಿ ಸವರ್ಣೀಯರ ವಿರುದ್ಧ ಅವರು ಹೋರಾಟ ಮಾಡಿದ್ದರು. ಅಂದು ನೆರೆಹೊರೆಯ ಸವರ್ಣೀಯರ ವಿರುದ್ಧ ಪ್ರಸಾದರ ಗುಂಪು ತಿರುಗಿ ಬೀಳುತ್ತಿತ್ತು. ಇದನ್ನು ಅಧ್ಯಯನ ಮಾಡಿದ್ದೆ. ಕಾರಣ ಸಿನಿಮಾ ಮಾಡುವ ಉದ್ದೇಶವಿತ್ತು. ಮೈಸೂರಿನಲ್ಲಿ ಒಂದು ಕೋಮು, ನಂಜನಗೂಡಿನಲ್ಲಿ ಮತ್ತೊಂದು ಕೋಮನ್ನು ವಿರೋಧಿಸಿದ್ದರು. ಆದರೆ ಪ್ರಸಾದ್ ಎಲ್ಲಾ ಸಮುದಾಯದವರ ಪ್ರೀತಿ–ವಿಶ್ವಾಸ ಗಳಿಸಿದ್ದರು ಎಂದರು.

ದಳದಲ್ಲಿದ್ದಾಗ ಪ್ರಸಾದ್ ನನ್ನೊಂದಿಗೆ ಹೆಚ್ಚು ಸಂಪರ್ಕದಲ್ಲಿದ್ದರು. ದೇವೇಗೌಡರ ಕ್ಯಾರೆಕ್ಟರೇ ಒಂಥರ, ಹೆಚ್ಚು ಹಿಲ್ಡ್ ಆಗಬೇಡಿ ಎಂದು ಅವರಿಗೆ ಹೇಳಿದ್ದೆ. ಎರಡು ವರ್ಷಗಳ ಅವಧಿಗಾದರೂ ಶ್ರೀನಿವಾಸ ಪ್ರಸಾದ್ ಅವರನ್ನು ಮುಖ್ಯಮಂತ್ರಿ ಮಾಡಬೇಕೆಂದು ಕುಮಾರಸ್ವಾಮಿ ಹೇಳಿದ್ದರು. ಆದರೆ ನಾನು ದೇವೇಗೌಡರನ್ನು ನಂಬಿಕೊಳ್ಳಲು ಆಗಲ್ಲ ಎಂದಿದ್ದಕ್ಕೆ ಶ್ರೀನಿವಾಸ ಪ್ರಸಾದ್ ನನ್ನೊಂದಿಗೆ ಸಿಟ್ಟು ಮಾಡಿಕೊಂಡಿದ್ದರು. ಈ ವಿಷಯದಲ್ಲಿ ನಾನು ದೇವೇಗೌಡರನ್ನು ಖಂಡಿಸುವುದಿಲ್ಲ. ಏಕೆಂದರೆ ರಾಜಕೀಯದ ಸಮೀಕರಣಗಳು ಅಂದುಕೊಂಡಷ್ಟು ಸುಲಭವಲ್ಲ ಎಂದು ಹೇಳಿದರು.

ಪ್ರಸಾದ್ ಅವರನ್ನು ಸಚಿವ ಸ್ಥಾನದಿಂದ ಕೈಬಿಟ್ಟಾಗ ಇದು ತಪ್ಪೆಂದು ಆಪ್ತರ ಮೂಲಕ ಸಿದ್ದರಾಮಯ್ಯನವರಿಗೆ ಹೇಳಿ ಕಳುಹಿಸಿದ್ದೆವು. ಆದರೆ ಇದಕ್ಕೆ ಸಿದ್ದರಾಮಯ್ಯ ಕಾರಣ ಆಗಿರಲಿಲ್ಲ. ಪ್ರಸಾದ್ ಯಾವ ಅರಿವನ್ನು ನಮ್ಮಲ್ಲಿ ಬಿತ್ತಿ ಹೋಗಿದ್ದಾರೆ ಎಂಬುದು ಮುಖ್ಯ. ಅವರು ರಾಜೀ ಮಾಡಿಕೊಳ್ಳದೇ ಪ್ರಶ್ನೆ ಮಾಡುತ್ತಿದ್ದರು ಎಂದು ತಿಳಿಸಿದರು.

ರಾಜಶೇಖರಮೂರ್ತಿ, ಶ್ರೀನಿವಾಸ ಪ್ರಸಾದ್, ಸಿದ್ದರಾಮಯ್ಯ ಈ ಮೂವರು ಮೊದಲಿನಿಂದ ಕೊನೆವರೆಗೂ ಒಟ್ಟಾಗಿ ನಿಂತಿದ್ದರೆ ಕರ್ನಾಟಕದ ಸ್ಥಿತಿ ಉನ್ನತ ಮಟ್ಟದಲ್ಲಿ ಇರುತ್ತಿತ್ತು. ಊಳಿಗಮಾನ್ಯ ಪದ್ಧತಿ ಹೇಗಿದೆ ಎಂಬುದಕ್ಕೆ ಪ್ರಜ್ವಲ್ ನಿದರ್ಶನ. ಇನ್ನು ರಾಜ್ಯದ ಉಪ ಮುಖ್ಯಮಂತ್ರಿ ತಮ್ಮನ್ನು ಸಾಯಿಸಲು ಮಾಟ ಮಾಡಿದ್ದಾರೆಂದು ಬಹಿರಂಗವಾಗಿ ಹೇಳಿಕೊಳ್ಳುವ ಮೂಲಕ ಯಾವ ಸಂದೇಶ ಕೊಡಲು ಹೊರಟಿದ್ದಾರೆ. ಅವರಿಗಿನ್ನು ಚಿಕ್ಕ ವಯಸ್ಸು ಅವರು ಚೆನ್ನಾಗಿರಲಿ. ಆದರೆ ಅಕಸ್ಮಾತ್ ಕಾಕತಾಳೀಯವಾಗಿ ಏನಾದರೂ ಆದಲ್ಲಿ ಎಷ್ಟೋ ಜನ ನಂಬುತ್ತಾರೆ. ಎಷ್ಟೋ ಮಂದಿ ತಾವು ಅದರ ಮೊರೆ ಹೋಗುತ್ತಾರೆ. ಇಂತಹ ಮೌಢ್ಯ ನಂಬುವುದು ಸರಿಯಲ್ಲ ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್, ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಬಸಪ್ಪ, ಕಾಂಗ್ರೆಸ್ ಮುಖಂಡ ಹೆಚ್.ವಾಸು, ಹಿರಿಯ ಪತ್ರಕರ್ತ ಕೆ.ಶಿವಕುಮಾರ್, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ನಾಗರಾಜ್, ನಟರಾಜ್ ಶಿವಣ್ಣ, ಮುಖಂಡರಾದ ಅಹಿಂದ ಜವರಪ್ಪ, ಸೋಸಲೆ ಮಹೇಶ್, ತಾಪಂ ಮಾಜಿ ಅಧ್ಯಕ್ಷ ಮಂಜುಳಾ ಮಂಜುನಾಥ್ ಮತ್ತಿತರರು ಹಾಜರಿದ್ದರು.

ಮರಿತಿಬ್ಬೇಗೌಡರ ಗೆಲುವು ನಿಶ್ಚಿತ: ಕೆ.ಮರಿಗೌಡ ವಿಶ್ವಾಸ



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮುಡಾ ಅಧ್ಯಕ್ಷ ಕೆ.ಮರೀಗೌಡ ಮತಯಾಚಿಸಿದರು.

ಮೈಸೂರು, ಜೂ.1– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಆಯ್ಕೆಯಾಗುವುದು ನಿಶ್ಚಿತ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರಿಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ವಿಶ್ವಮಾನವ ಶಾಲೆ, ಸುಪ್ರೀಂ ಕಾನ್ವೆಂಟ್, ಕೌಟಿಲ್ಯ ವಿದ್ಯಾಸಂಸ್ಥೆ, ಇಂದಿರಾ ಸ್ಕೂಲ್, ದಿ ಅಕ್ಮಿ ಸ್ಕೂಲ್, ಪ್ರಗತಿ ಪ್ರೌಢಶಾಲೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರವಾಗಿ ಮತಯಾಚಿಸಿದ ಅವರು, ಶಿಕ್ಷಕರು ಹೆಚ್ಚು ಮತಗಳ ಅಂತರದೊಂದಿಗೆ ಮರಿತಿಬ್ಬೇಗೌಡರನ್ನು ಆಯ್ಕೆ ಮಾಡುವ ವಿಶ್ವಾಸವಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ, ಶಿಕ್ಷಣ ಕ್ಷೇತ್ರದ ಪ್ರಗತಿಗೆ ಆದ್ಯತೆ ನೀಡಿದೆ. ಮಹಾರಾಣಿ ಕಾಲೇಜು ಹಾಗೂ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಿದೆ. ಆರು ವರ್ಷದಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣಕ್ಕೆ ಒತ್ತು ನೀಡಿದೆ. ವಿದೇಶದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುತ್ತಿದೆ. ರಾಜ್ಯಾದ್ಯಂತ ಹಾಸ್ಟೆಲ್‌ಗಳ ನಿರ್ಮಾಣ ಮಾಡಿದೆ ಎಂದು ತಿಳಿಸಿದರು. ಮರಿತಿಬ್ಬೇಗೌಡರು ಕಳೆದ 24 ವರ್ಷಗಳಿಂದ ವಿಧಾನಪರಿಷತ್ ಸದಸ್ಯರಾಗಿ ದಕ್ಷಿಣ ಶಿಕ್ಷಕರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಶಿಕ್ಷಕ ಸಮುದಾಯದ ಪ್ರತಿನಿಧಿಯಾಗಿ ಅವರು ಶಿಕ್ಷಣ ಕ್ಷೇತ್ರದ ಘನತೆ ಮತ್ತು ಶಿಕ್ಷಕರ ಆತ್ಮಗೌರವಕ್ಕೆ ಧಕ್ಕೆಯಾಗದಂತೆ ಕೆಲಸ ಮಾಡಿದ್ದಾರೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಸದನದ ಒಳಗೆ ಮತ್ತು ಹೊರಗೆ ಹೋರಾಟ ಮಾಡಿ, ನ್ಯಾಯ ದೊರಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ವಿಧಾನಪರಿಷತ್ತಿನ ಉಪ ಸಭಾಪತಿಯಾಗಿ ನಿಸ್ವಾರ್ಥದಿಂದ ನಿಷ್ಪಕ್ಷಪಾತವಾಗಿ ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದಾರೆ. ಆದ್ದರಿಂದ ಮೊದಲ ಪ್ರಾಶಸ್ತ್ಯದ ಮತವನ್ನು ಮರಿತಿಬ್ಬೇಗೌಡರಿಗೆ ನೀಡುವ ಮೂಲಕ ಅವರನ್ನು ಆಯ್ಕೆ ಮಾಡ ಬೇಕೆಂದು ಮನವಿ ಮಾಡಿದರು. ಇದೇ ವೇಳೆ ಕಾಂಗ್ರೆಸ್ ಮುಖಂಡರಾದ ಸತೀಶ್ ಕುಮಾರ್, ಬಿ.ಗುರುಸ್ವಾಮಿ, ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, 58ನೇ ವಾರ್ಡಿನ ರವಿ .ಬಿ, ಕೃಷ್ಣ ಕುಮಾರ್ ಸಾಗರ್, ಚಂದ್ರು, ಸುಗ್ಗಿಹಟ್ಟಿ ಹರೀಶ್, ಹರೀಶ ಮಹಾದೇವ, ವಿಕ್ಕಿ ವಾಸು, ಕೃಷ್ಣಪ್ಪ, ಮಾದೇಗೌಡರು, ಅರಸು, ಮೇರಿ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಕಾಡಾನೆ ದಾಳಿ

ಸಿಬ್ಬಂದಿಗಳಿಗೆ ಗಾಯ, ಆಸ್ಪತ್ರೆಗೆ ದಾಖಲು

ಸಿದ್ದಾಪುರ, ಜೂ.1– ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ವೇಳೆ ಇಟಿಪಿ ಹಾಗೂ ಆರ್‌ಆರ್‌ಟಿ ಸಿಬ್ಬಂದಿ ಮೇಲೆ ದಾಳಿ ಮಾಡಿದ ಘಟನೆ ಅಮ್ಮತಿ ಸಮೀಪ ಇಂಜಲಗೆರೆ ಬಳಿಯ ಬಿಟಿ ಕಾಡು ಕಾಫಿ ತೋಟದಲ್ಲಿ ನಡೆದಿದ್ದು, ಕಾಡಾನೆ ದಾಳಿಯಿಂದ ಇಪಿಟಿ ಸಿಬ್ಬಂದಿ ಮುರುಗನ್ ಗಂಭೀರ ಗಾಯಗೊಂಡು ಸಿದ್ದಾಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಬಳಿಕ ವಿರಾಜಪೇಟೆ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜೊತೆಯಲ್ಲಿದ್ದ 12 ಸಿಬ್ಬಂದಿಗಳ ಪೈಕಿ ಇತರ ಮೂವರು ಸಿಬ್ಬಂದಿಗಳಿಗೆ ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪ್ರಾಯದಿಂದ ಪಾರಾಗಿದ್ದಾರೆ. ಗುಯ್ಯ ಇಂಜಲಗೆರೆ ಭಾಗದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದ ಹತ್ತಕ್ಕೂ ಹೆಚ್ಚು ಕಾಡಾನೆಗಳ ಹಿಂಡನ್ನು ಕಾಡಿಗಟ್ಟಲು ಅರಣ್ಯ ಇಲಾಖೆ ಸಿಬ್ಬಂದಿ ಮುಂದಾಗಿದ್ದರು.

ಅಂದಾಜು 3 ಕಿ.ಮೀ ದೂರದ ಬಿಟಿ ಕಾಡು ವ್ಯಾಪ್ತಿಗೆ ಕಾಡಾನೆಗಳನ್ನು ಓಡಿಸಲಾಗಿತ್ತು. ಹರಸಹಾಸದಿಂದ ಕಾಡಿಗಟ್ಟಲು ಆನೆ ಹಿಂಡುಗಳನ್ನು ಹಿಂಬಾಲಿಸಿದ ಸಂದರ್ಭ ಗುಂಪಿನಲ್ಲಿದ್ದ 2 ಕಾಡಾನೆಗಳು ಸಿಬ್ಬಂದಿಗಳನ್ನು ಅಟ್ಟಾಡಿಸಿತು. ದಾಳಿಗೆ ಸಿಲುಕಿದ ಸಿಬ್ಬಂದಿ ಮುರುಗನ್ ಮೇಲೆ ಕಾಡಾನೆ ದಾಳಿ ಮಾಡಿ ಗಂಭೀರ ಗಾಯಗೊಳಿಸಿತು.



ಗಾಯಾಳು ಇಪಿಟಿ ಸಿಬ್ಬಂದಿ ಮುರುಗನ್.

ಕಾಫಿ ಗಿಡಗಳ ಮಧ್ಯೆ ಸಿಲುಕಿದ ಮುರುಗನ್ ಭಾರಿ ಅನಾಹುತದಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನಂತರ ಸಿಬ್ಬಂದಿ ಕಿರುಚಾಟದಿಂದ ಕಾಡಾನೆ ಸ್ಥಳದಿಂದ ತೆರಳಿದೆ. ತಕ್ಷಣ ಸಿಬ್ಬಂದಿ ಮುರಗನ್‌ನನ್ನ ಸಿದ್ದಾಪುರ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಬಳಿಕ ವಿರಾಜಪೇಟೆ ಆಸ್ಪತ್ರೆಗೆ ದಾಖಲಿಸಿದ್ದಾರೆ.

ನಾಲ್ಕು ಐದು ದಿನಗಳ ಹಿಂದೆ ಗುಯ್ಯ ಗ್ರಾಮದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳನ್ನು ಕಾಡಿಗಟ್ಟಲಾಗಿತ್ತು. ಗುಂಪು ಆನೆಗಳ ಪೈಕಿ 12 ಆನೆಗಳು ಮತ್ತೆ ವಾಪಸ್ ಬಂದು ಗ್ರಾಮ ಸುತ್ತಮುತ್ತಲಿನ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದವು.

ಶಾಲೆ ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಆನೆಗಳನ್ನು ಕಾಡಿಗಟ್ಟಲು ಸಿಬ್ಬಂದಿ ಮುಂದಾಗಿದ್ದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಆತ್ಮಹತ್ಯೆ ಪ್ರಕರಣ

ಸಚಿವ ನಾಗೇಂದ್ರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ಮಡಿಕೇರಿ,ಜೂ.1– ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧೀಕ್ಷಕ ಪಿ.ಚಂದ್ರಶೇಖರ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶಿಷ್ಟಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಕೊಡಗು ಜಿಲ್ಲಾ ಬಿಜೆಪಿ ಯುವ ಮೋರ್ಚಾದ ನೇತೃತ್ವದಲ್ಲಿ ನಗರದ ಜನರಲ್ ತಿಮ್ಮಯ್ಯ ವೃತ್ತದಲ್ಲಿ 'ಮಾನವ ಸರಪಳಿ' ರಚಿಸಿ ಪ್ರತಿಭಟನೆ ನಡೆಸಲಾಯಿತು.

ಜನರಲ್ ತಿಮ್ಮಯ್ಯ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಕೆಲ ಕಾಲ ರಸ್ತೆ ತಡೆ ಮಾಡಿದ ಬಿಜೆಪಿ ಪ್ರಮುಖರು ಮತ್ತು ಕಾರ್ಯಕರ್ತರು, ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ನಾಗೇಂದ್ರ ಅವರು ರಾಜೀನಾಮೆ ನಿಡಬೇಕೆಂದು ಆಗ್ರಹಿಸಿದರು. ಅವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪಿಸಿ ಡೆತ್ ನೋಟ್ ಬರೆದಿಟ್ಟು ನಿಗಮದ ಅಧೀಕ್ಷಕ ಪಿ.ಚಂದ್ರಶೇಖರ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪ್ರಕರಣವನ್ನು ರಾಜ್ಯ ಸರಕಾರ ಗಂಭೀರವಾಗಿ ಪರಿಗಣಿಸಬೇಕು. ಸೂಕ್ತ



ಮಡಿಕೇರಿಯ ಜನರಲ್ ತಿಮ್ಮಯ್ಯ ವೃತ್ತದಲ್ಲಿ 'ಮಾನವ ಸರಪಳಿ' ರಚಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತನಿಖೆ ನಡೆಸಿ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಮೀಸಲಿಟ್ಟಿದ್ದ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸಿಕೊಳ್ಳಲು ಪ್ರಭಾವಿಗಳು ಒತ್ತಡ ಹೇರಿದ್ದಾರೆ. ಬಡವರ ವಿರೋಧಿ ಕಾಂಗ್ರೆಸ್ ಸರಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೊಡಗು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮಹೇಶ್ ತಿಮ್ಮಯ್ಯ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದ ಬಳಿಕವು ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಸಂಬಂಧಪಟ್ಟ ಸಚಿವರ ವಿರುದ್ಧ ಅಗತ್ಯ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿದರಲ್ಲದೆ, ಸಚಿವರು ತಕ್ಷಣ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಮಾತನಾಡಿ, ರಾಜ್ಯದ ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಸಂಪೂರ್ಣ ವಿಫಲವಾಗಿದೆ. ಈ ಸರ್ಕಾರದ ಅವಧಿಯಲ್ಲಿ ದಿನಕ್ಕೊಂದು ಭ್ರಷ್ಟಾಚಾರ, ಅಪರಾಧ ಪ್ರಕರಣಗಳು ನಡೆಯುತ್ತಲೆ ಇದೆ ಎಂದು ಟೀಕಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾದ ವಿ.ಕೆ. ಲೋಕೇಶ್, ಮಹೇಶ್ ಜೈನಿ, ಉಪಾಧ್ಯಕ್ಷ ಮನು ಮಂಜುನಾಥ್, ವಕ್ತಾರ ಬಿ.ಕೆ. ಅರುಣ್ ಕುಮಾರ್, ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಅನಿತಾ ಪೂವಯ್ಯ, ನಗರ ಉಪಾಧ್ಯಕ್ಷ ಬಿ.ಕೆ.ಜಗದೀಶ್, ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಪಿ.ಎಂ.ರವಿ, ನಗರ ಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಸಿ. ಸತೀಶ್, ಕೆ.ಎಸ್. ರಮೇಶ್, ಅರುಣ್ ಶೆಟ್ಟಿ, ಸವಿತಾ ರಾಕೇಶ್, ನಾಗೇಶ್ ಕುಂದಲ್ಪಾಡಿ, ರಮೇಶ್ ಹೊಳ್ಳ ಮತ್ತಿತರರು ಪಾಲ್ಗೊಂಡಿದ್ದರು.


ಲಿಂಗಪತ್ತೆ ಮಾಡುತ್ತಿದ್ದ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ದಾಳಿ

ಕುಶಾಲನಗರದ ಸ್ಕ್ಯಾನಿಂಗ್ ಸೆಂಟರ್ ವಿರುದ್ಧ ಕೋರ್ಟ್‌ನಲ್ಲಿ ಮೊಕದ್ದಮೆ

ಮಡಿಕೇರಿ: ಲಿಂಗಪತ್ತೆ ಮಾಡುತ್ತಿದ್ದ ಸ್ಕ್ಯಾನಿಂಗ್ ಸೆಂಟರ್‌ಗಳ ಮೇಲೆ ದಾಳಿ ನಡೆಸಲಾಗಿದ್ದು, ಆರೋಗ್ಯ ಇಲಾಖೆಯ ರಾಜ್ಯ ತಪಾಸಣಾ ಮತ್ತು ಮೇಲ್ವಿಚಾರಣ ತಂಡದ ನಿರ್ದೇಶನದಂತೆ ಕುಶಾಲನಗರದ ಗಣೇಶ್ ಸ್ಕ್ಯಾನಿಂಗ್ ಸೆಂಟರ್ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸತೀಶ್ ಮಾಹಿತಿ ನೀಡಿದ್ದಾರೆ.

ಮೇ 21ರಂದು ಎಂದಿನಂತೆ ಜಿಲ್ಲಾ ಮಟ್ಟದ ತಪಾಸಣಾ ಮತ್ತು ಮೇಲ್ವಿಚಾರಣೆ ತಂಡ ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ 1994 ಹಾಗೂ ನಿಯಮ 1996ರ ಉಲ್ಲಂಘನೆ ಹಾಗೂ ಲಿಂಗ ಪತ್ತೆ ಮಾಡುತ್ತಿರುವ ಬಗ್ಗೆ ಮಾಹಿತಿ ಆಧರಿಸಿ ಕುಶಾಲನಗರದ ಸ್ಕ್ಯಾನಿಂಗ್ ಕೇಂದ್ರಗಳಾದ ಶ್ರೀ ಲಕ್ಷ್ಮಿ ರಾಮನ್ ಬಾಲಾಜಿ ಆಸ್ಪತ್ರೆ, ಶ್ರೀ ಸಾಗರ್ ಆಸ್ಪತ್ರೆ, ಮೆಡಿಪ್ಲೆಕ್ಸ್ ಡಯಾಗೋಸ್ಟಿಕ್ ಸೆಂಟರ್ ಹಾಗೂ ಗಣೇಶ್ ಎಕ್ಸ್–ರೇ ಆಂಡ್ ಸ್ಕ್ಯಾನಿಂಗ್ ಸೆಂಟರ್‌ಗೆ ಭೇಟಿ ನೀಡಿ ತಪಾಸಣೆ ನಡೆಸಲಾಗಿತ್ತು.

ಕುಶಾಲನಗರದ ಗಣೇಶ್ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ತಪಾಸಣೆ ನಡೆಸಿದ ಸಂದರ್ಭ



ಪಿ.ಸಿ ಮತ್ತು ಪಿ.ಎನ್.ಡಿ.ಟಿ ಕಾಯ್ದೆ 1994 ಹಾಗೂ ನಿಯಮ 1996ರ ಉಲ್ಲಂಘನೆ ಹಾಗೂ ಲಿಂಗ ಪತ್ತೆ ಮಾಡುತ್ತಿರುವ ಸಂಶಯ ಎದುರಾಗಿತ್ತು ಈ ಹಿನ್ನೆಲೆಯಲ್ಲಿ ಸ್ಕ್ಯಾನಿಂಗ್ ಸೆಂಟರ್ ವಿರುದ್ಧ ರಾಜ್ಯ ಮಟ್ಟದ ತಪಾಸಣಾ ಮತ್ತು ಮೇಲ್ವಿಚಾರಣಾ ಸಮಿತಿಗೆ ವರದಿ ನೀಡಲಾಗಿತ್ತು ಈ ವರದಿಯನ್ನಾಧರಿಸಿ ಮೇ.31ರಂದು ಉನ್ನತ ಸಮಿತಿಯ ಸದಸ್ಯ ಡಾ.ವಿವೇಕ್ ದೊರೈ ಮತ್ತು ತಂಡ ಹಾಗೂ ಜಿಲ್ಲಾ ತಂಡಗಳಿಂದ ಸ್ಕ್ಯಾನಿಂಗ್ ಸೆಂಟರ್‌ನ ತಪಾಸಣೆ ನಡೆಸಲಾಗಿತ್ತು.

ನಿಯಮಗಳ ಉಲ್ಲಂಘನೆ ಪತ್ತೆ: ಉನ್ನತ ಸಮಿತಿಯ ತಪಾಸಣೆ ವೇಳೆ ನಿಯಮಾನುಸಾರ ದಾಖಲಾತಿ ಸಂಗ್ರಹಿಸದಿರುವುದು, ಸ್ಕ್ಯಾನಿಂಗ್ ಮಾಡಿದ ಪ್ರತಿಯನ್ನು ಬಾಲಿಕಾ ವೆಬ್ ಸೈಟ್‌ಗೆ ಅಪ್ ಲೋಡ್ ಮಾಡದಿರುವುದು, ಮತ್ತು ಅಪ್ ಲೋಡ್ ಮಾಡದ ಪ್ರತಿಯನ್ನು ಗರ್ಭಿಣಿಗೆ ನೀಡಿರುವುದು ಕಂಡು ಬಂದಿತ್ತು. ಕಾಯ್ದೆ ಉಲ್ಲಂಘನೆಯಾಗಿರುವ ಹಿನ್ನೆಲೆಯಲ್ಲಿ ಸ್ಕ್ಯಾನಿಂಗ್ ಸೆಂಟರ್‌ನ ಎಲ್ಲಾ ದಾಖಲಾತಿ ವಶಕ್ಕೆ ಪಡೆದು ಸೆಂಟರ್ ಅನ್ನು ಬಂದ್ ಮಾಡಲಾಗಿದೆ. ಇದೀಗ ಉನ್ನತ ಮಟ್ಟದ ಸಮಿತಿ ಮಾಡಿದ ಶಿಫಾರಸು ಆಧರಿಸಿ ಗಣೇಶ್ ಸ್ಕ್ಯಾನಿಂಗ್ ಸೆಂಟರ್ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲು ಕ್ರಮ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ಲಿಂಗಾನುಪಾತ ಇಳಿಕೆ: ಕೊಡಗು ಜಿಲ್ಲೆಯಲ್ಲಿ ಲಿಂಗಾನುಪಾತ ಇಳಿಕೆ ಕಾಣುತ್ತಿದೆ. ಕಳೆದ 10 ವರ್ಷಗಳಿಗೆ ಹೋಲಿಸಿದರೆ ಲಿಂಗಾನುಪಾತ ಪ್ರಮಾಣ ಶೇ.20ರಷ್ಟು ಕುಸಿತವಾಗಿದೆ ಎಂದು ಜಿಲ್ಲಾ ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಎನ್. ಆನಂದ್ ಆತಂಕ ವ್ಯಕ್ತಪಡಿಸಿದರು. 2011ರಲ್ಲಿ ಲಿಂಗಾನುಪಾತ 1 ಸಾವಿರಕ್ಕೆ 978 ಇದ್ದರೆ, ಇದರ ಪ್ರಮಾಣ 2021ರ ಅವಧಿಯಲ್ಲಿ 958ಕ್ಕೆ ಕುಸಿದಿದೆ. ಇಂತಹ ಕುಸಿತ ಸಾಮಾಜಿಕ ಮತ್ತು ಕೌಟುಂಬಿಕ ಅಸಮತೋಲನಕ್ಕೆ ಕಾರಣವಾಗಲಿದೆ. ಲಿಂಗಾನುಪಾತ ಸರಾಸರಿ 1 ಸಾವಿರಕ್ಕೆ 980ಕ್ಕೂ ಹೆಚ್ಚಿರಬೇಕಿದೆ ಎಂದು ಹೇಳಿದರು.

ಇಂಥ ಕಾರಣಗಳಿಗಾಗಿಯೇ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಸ್ಕ್ಯಾನಿಂಗ್ ಸೆಂಟರ್‌ಗಳನ್ನು ತಪಾಸಣೆ ನಡೆಸಲಾಗುತ್ತದೆ ಎಂದರು.

ಜೂ.4 ರಂದು ಕೊಡಗು ಜಿಲ್ಲೆಯಾದ್ಯಂತ ನಿಷೇಧಾಜ್ಞೆ

ಮಡಿಕೇರಿ, ಜೂ.1– ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಮತ ಎಣಿಕೆ ಜೂ.4 ರಂದು ನಡೆಯಲಿದ್ದು, ಈ ದಿನದಂದು ಕೊಡಗು ಜಿಲ್ಲೆಯಲ್ಲಿ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ದಂಡ ಪ್ರಕ್ರಿಯಾ ಸಂಹಿತೆ 1973 ರ ಸೆಕ್ಷನ್ 144 ಮತ್ತು 144(ಎ) ಹಾಗೂ ಕರ್ನಾಟಕ ಪೊಲೀಸ್ ಆಕ್ಟ್ 1963 ರ ಕಲಂ 35 ರಡಿ ದತ್ತವಾದ ಅಧಿಕಾರದಂತೆ ಜೂ.4 ರಂದು ಬೆಳಗ್ಗೆ 6 ಗಂಟೆಯಿಂದ ಅದೇ ದಿನ ಮಧ್ಯ ರಾತ್ರಿ 12 ಗಂಟೆಯವರೆಗೆ ಕೊಡಗು ಜಿಲ್ಲೆಯಾದ್ಯಂತ ಗುಂಪು ಸೇರುವುದು, ಪಟಾಕಿ ಸಿಡಿಸುವುದು, ವಿಜಯೋತ್ಸವ, ಮೆರವಣಿಗೆ, ಪ್ರತಿಭಟನೆ, ಖಾಸಗಿ ವ್ಯಕ್ತಿಗಳು ಧ್ವನಿವರ್ಧಕ ಬಳಸುವುದು, ಮಾರಕ ಆಯುಧಗಳನ್ನು ಹೊಂದಿರುವುದು ಅಥವಾ ಹಿಡಿದು ಓಡಾಡುವುದು ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ವೆಂಕಟ್ ರಾಜಾ ಅವರು ಆದೇಶ ಹೊರಡಿಸಿದ್ದಾರೆ.

ತ್ಯಾಜ್ಯ ಸುರಿಯುವವರಿಗೆ 5000 ರೂ. ದಂಡ

ನಾಪೋಕ್ಲು: ಸಮೀಪದ ಹೊದ್ದೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಬೊಳಿಬಾಣೆ ಸಮೀಪ ಕಾವೇರಿ ನದಿ ತೀರದಲ್ಲಿ ನಾಪೋಕ್ಲು ಪಟ್ಟಣದ ವರ್ತಕರು ತ್ಯಾಜ್ಯ ವಸ್ತುಗಳನ್ನು ಹಾಕುತ್ತಿರುವುದು ಕಂಡು ಬಂದ ಹಿನ್ನೆಲೆಯಲ್ಲಿ ಸದರಿ ಪ್ರದೇಶವನ್ನು ಸ್ವಚ್ಛಗೊಳಿಸಿ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

ಪಂಚಾಯತಿ ವ್ಯಾಪ್ತಿಯಲ್ಲಿ ವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದು ರಸ್ತೆ ಬದಿ ಹಾಗೂ ನದಿ ತೀರದಲ್ಲಿ ತ್ಯಾಜ್ಯ ಸುರಿಯುವವರ ಮೇಲೆ 5000 ರೂ.



ಬೊಳಿಬಾಣೆ ಸಮೀಪ ಕಾವೇರಿ ನದಿ ತೀರದಲ್ಲಿ ಸ್ವಚ್ಛಗೊಳಿಸಿ ಸಿಸಿ ಕ್ಯಾಮರಾ ಅಳವಡಿಸಲಾಯಿತು.

ದಂಡ ಹಾಗೂ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಹೊದ್ದೂರು ಗ್ರಾಪಂ ಅಧ್ಯಕ್ಷ ಹೆಚ್.ಎ. ಹಂಸ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ



ಮಡಿಕೇರಿ ಜೂ.1– ಸುಂಟಿಕೊಪ್ಪ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸಬೇಕಿರುವುದರಿಂದ ಜೂ.3 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಕುಶಾಲನಗರ ಪಟ್ಟಣ, ಹೆಬ್ಬಾಲೆ ಶಿರಂಗಾಲ, ಕೂಡಿಗೆ, ರಸಲ್‌ಪುರ, ಭುವನಗಿರಿ, ಬಲಮುರಿ, ಹಾರಂಗಿ, ನಂಜರಾಯಪಟ್ಟಣ, ಎಸ್.ಎಲ್.ಎನ್, ಸಿದ್ದಲಿಂಗಪುರ ಕಾವೇರಿ ನಿಸರ್ಗ ಧಾಮ, ಸೋಮೇಶ್ವರ, ಕೂಡುಮಂಗಳೂರು, ನಾಕೂರು, ಮಾದಾಪುರ, ಹಟ್ಟಿಹೊಳೆ, ಕಾಂಡನಕೊಲ್ಲಿ, ಗರ್ವಾಲೆ, ಬಿಳಿಗೇರಿ, ಕಂಬಿಬಾಣೆ, ಕೊಡಗರಹಳ್ಳಿ, ಉಪ್ಪುತೋಡು, ಚೆಟ್ಟಳ್ಳಿ, ಶಿರಂಗಾಲ, ವಾಲ್ನೂರು ತ್ಯಾಗತ್ತೂರು, ವತ್ತಿಕಾಡು, ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಇಇ ಅನಿತಾ ಕೋರಿದ್ದಾರೆ.


ಮುಂಗಾರು ಪ್ರಾರಂಭ: ಕೃಷಿ ಚಟುವಟಿಕೆ ಚುರುಕು

● ಚಾಮರಾಜನಗರ ಜಿಲ್ಲಾದ್ಯಂತ ಬಿತ್ತನೆ ಬೀಜ ಖರೀದಿ ಜೋರು ● 1.09 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆ ಗುರಿ

ಚಾಮರಾಜನಗರ, ಜೂ.1– ಈ ಬಾರಿ ಜಿಲ್ಲೆಯಲ್ಲಿ ಜೂನ್ ಆರಂಭದಿಂದಲೇ ಮುಂಗಾರು ಮಳೆ ಶುರುವಾಗಿದ್ದು, ಕೃಷಿ ಚಟುವಟಿಕೆ ಚುರುಕು ಪಡೆದುಕೊಂಡಿದೆ. ಅಲ್ಲದೇ ರೈತರು ಬಿತ್ತನೆ ಕಾರ್ಯ ಕೈಗೊಂಡಿದ್ದಾರೆ.

ಕಳೆದೆರಡು ವರ್ಷಗಳಿಂದ ಮುಂಗಾರು ಮಳೆ ವಿಳಂಬವಾಗಿ ಆರಂಭವಾಗುತ್ತಿತ್ತು. ಅಲ್ಲದೇ ನಿರೀಕ್ಷಿತ ಸಮಯದಲ್ಲಿ ಮಳೆಯಾಗದೇ ರೈತರನ್ನು ಸಂಕಷ್ಟಕ್ಕೆ ದೂಡುವಂತೆ ಮಾಡಿತ್ತು. ಆದರೆ, ಈ ಬಾರಿ ನಿರೀಕ್ಷಿತ ಅವಧಿಯಲ್ಲಿ ಮುಂಗಾರು ಆಗಮನವಾಗುತ್ತಿರುವುದರಿಂದ ಉತ್ತಮ ಬೆಳೆ ನಿರೀಕ್ಷೆಯಲ್ಲಿ ಅನ್ನದಾತರು ಇದ್ದಾರೆ. ಈಗಾಗಲೇ ಪೂರ್ವ ಮುಂಗಾರಿನ ಅವಧಿಯಲ್ಲಿ ಜಿಲ್ಲೆಯಲ್ಲಿ ಉತ್ತಮ ಮಳೆ ಆಗಿದ್ದು, ರೈತರು ತಮ್ಮ ಜಮೀನು ಹದ ಗೊಳಿಸಿ ಬಿತ್ತನೆ ಕಾರ್ಯ ಪ್ರಾರಂಭಿಸಿದ್ದಾರೆ.

ಜಿಲ್ಲಾ ಕೃಷಿ ಇಲಾಖೆಗೆ 921.80 ಕ್ವಿಂಟಾಲ್ ಬಿತ್ತನೆ ಬೀಜ ಪೂರೈಕೆಯಾಗಿದ್ದು, ಈಗಾಗಲೇ ಜಿಲ್ಲಾದ್ಯಂತ 57.77 ಕ್ವಿಂಟಾಲ್‌ಗಳಷ್ಟು ಬಿತ್ತನೆ ಬೀಜವನ್ನು ವಿತರಣೆ ಮಾಡಲಾಗಿದ್ದು, 864.03 ಕ್ವಿಂಟಾಲ್ ದಾಸ್ತಾನು ಮಾಡಲಾಗಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು.



ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರು.

ಜಿಲ್ಲೆಯಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಹಂಗಾಮಿನ ಅವಧಿಯಲ್ಲಿ ಒಟ್ಟು 1.09 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡುವ ಗುರಿಯನ್ನು ಈ ಬಾರಿ ಕೃಷಿ ಇಲಾಖೆ ಹಾಕಿಕೊಂಡಿದೆ.

ಬಿತ್ತನೆ ಬೀಜ ಖರೀದಿ ಜೋರು: ಕೃಷಿ ಇಲಾಖೆ ಅಧಿಕಾರಿಗಳು ಮಳೆಗೂ ಮುನ್ನವೇ ಬಿತ್ತನೆ ಬೀಜಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದರು. ಇಲಾಖೆ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಬೇಡಿಕೆಗೆ ಅನುಗುಣವಾಗಿ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದ್ದು, ರೈತರು ಬಿತ್ತನೆ ಬೀಜಗಳ ಖರೀದಿಗೆ ಮುಂದಾಗಿದ್ದಾರೆ. ಕೃಷಿ ಇಲಾಖೆಯಿಂದ ಅಗತ್ಯಕ್ಕೆ ಅನುಗುಣವಾಗಿ ಬಿತ್ತನೆ ಬೀಜ ಹಾಗೂ ಗೊಬ್ಬರ ದಾಸ್ತಾನು ಮಾಡಿಕೊಳ್ಳಲಾಗಿದ್ದು, ಇದರಿಂದಾಗಿ ಈ ಬಾರಿ ಬಿತ್ತನೆ ಬೀಜ ಹಾಗೂ ಗೊಬ್ಬರಕ್ಕೆ ಸಮಸ್ಯೆ ಇಲ್ಲ ಎಂದು ಹೇಳಲಾಗುತ್ತಿದೆ.

ಜಿಲ್ಲೆಯಲ್ಲಿ ಧಾರಕಾರ ಮಳೆ

ಚಾಮರಾಜನಗರ ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯ ಹಲವೆಡೆ ಶನಿವಾರ ಮಧ್ಯಾಹ್ನದಿಂದ ಗುಡುಗು, ಮಿಂಚು ಸಹಿತವಾಗಿ ಧಾರಾಕಾರ ಮಳೆಯಾಗಿದೆ. ಮಧ್ಯಾಹ್ನ 3 ಗಂಟೆಗೆ ಆರಂಭವಾದ ಮಳೆ ನಡುರಾತ್ರಿವರೆಗೂ ಬಿಟ್ಟು ಬಿಟ್ಟು ಸುರಿಯಿತು. ಹಲವೆಡೆ ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗಿ ಸಾಕಷ್ಟು ಅವಾಂತರ ಸೃಷ್ಟಿಸಿತು.

ಎತ್ತುಗಳಿಗೆ ಹೆಚ್ಚಿದ ಬೇಡಿಕೆ: ಗ್ರಾಮೀಣ ಭಾಗದ ಬಹುತೇಕ ರೈತರ ಬಳಿ ಎತ್ತುಗಳಿಲ್ಲ. ಹೀಗಾಗಿ ಜಾನುವಾರುಗಳನ್ನು ಹೊಂದಿರುವ ರೈತರಿಗೆ ಬೇಡಿಕೆ ಹೆಚ್ಚಿದೆ. ನೇಗಿಲಿನ ಮೂಲಕವೇ ಬಿತ್ತನೆ ಮಾಡಿಸಬೇಕೆಂಬುದು ರೈತರ ಆಶಯ. ಹೀಗಾಗಿ ಕೆಲವು ರೈತರು ಒಂದು ದಿನಕ್ಕೆ 2 ಸಾವಿರ ರೂ. ನೀಡಿ ಸೂರ್ಯಕಾಂತಿ, ಜೋಳ, ಅಲಸಂದೆ ಬಿತ್ತನೆ ಮಾಡಿಸುತ್ತಿದ್ದಾರೆ.

ಟ್ರಾಕ್ಟರ್ ಮೊರೆ ಹೋದ ರೈತರು: ಬಹುತೇಕ ರೈತರು ಬರ ಹಾಗೂ ಸಾಕಣೆಗೆ ತೊಂದರೆಯಾದ ಕಾರಣ ದನ ಕರುಗಳನ್ನು ಮಾರಾಟ ಮಾಡಿದ್ದಾರೆ. ಇದರಿಂದ ಜಮೀನಿನಲ್ಲಿ ಉಳುಮೆ ಹಾಗೂ ಬಿತ್ತನೆ ಕಾರ್ಯಕ್ಕೆ ಜಾನುವಾರು ಸಿಗದೇ ಟ್ರಾಕ್ಟರ್ ಸಹಾಯದಿಂದ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿ ರೈತರು ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆ ನಿರೀಕ್ಷೆಯಲ್ಲಿ ಭೂಮಿ ಸಿದ್ಧತೆಯಲ್ಲಿ ತೊಡಗಿದ್ದಾರೆ. ಹಲವು ರೈತರು ಬೇಸಿಗೆ ಬೆಳೆಯಾಗಿ ಕಬ್ಬು, ಭತ್ತ, ರಾಗಿ, ಉದ್ದು, ಮುಸುಕಿನ ಜೋಳ ಮತ್ತು ಬಿಳಿಜೋಳ ನಾಟಿ ಮಾಡಿದ್ದು, ವರುಣನ ಕೃಪೆಗಾಗಿ ಕಾಯುತ್ತಿದ್ದಾರೆ.

ಮಾನ್ಸೂನ್ ಆಗಮನಕ್ಕೆ ಕ್ಷಣಗಣನೆ

ಚಾ.ನಗರ ಜಿಲ್ಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲು ಜಿಲ್ಲಾಧಿಕಾರಿ ಸೂಚನೆ

ಚಾಮರಾಜನಗರ, ಜೂ.1– ಕೇರಳ ಕರಾವಳಿ ಮತ್ತು ಈಶಾನ್ಯ ಭಾಗಗಳಲ್ಲಿ ನೈರುತ್ಯ ಮಾನ್ಸೂನ್ ಅಪ್ಪಳಿಸಲಿದ್ದು, ಕೆಲವೇ ಗಂಟೆಗಳಲ್ಲಿ ಮುಂಗಾರು ಆಗಮಿಸುವ ಬಗ್ಗೆ ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿರುವ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಅಗತ್ಯ ಮಳೆ ಮುನ್ನೆಚ್ಚರಿಕೆ ಕ್ರಮಗಳನ್ನು ಸಮಾರೋಪಾದಿಯಲ್ಲಿ ಕೈಗೊಳ್ಳುವಂತೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಕೇರಳದಲ್ಲಿ ಮಾನ್ಸೂನ್ ಆಗಮಿಸಿರುವುದರಿಂದ ಇದಕ್ಕೆ ಪೂರಕವಾಗಿ ಮುಂದಿನ 48 ಗಂಟೆಗಳಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಮಳೆಯಾಗುವ ಸಂಭವವಿದ್ದು, ಚಾಮರಾಜನಗರ ಜಿಲ್ಲೆಯಲ್ಲಿಯೂ ಸಹ ಇಂದಿನಿಂದ ಜೂನ್ 7ರವರೆಗೆ ಮಳೆಯಾಗುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಪ್ರವಾಹ ಪೀಡಿತ ಗ್ರಾಮ, ಪ್ರದೇಶಗಳನ್ನು ಗುರುತಿಸಿ ಮಳೆಯಿಂದ ನೀರು ತುಂಬಿಕೊಳ್ಳುವ ತಗ್ಗು ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಇದಕ್ಕಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರಸ್ಥಾನದಲ್ಲಿದ್ದು, ಸೂಕ್ತ ಕ್ರಮ ಕೈಗೊಳ್ಳಬೇಕು.

ತಪ್ಪಿದ್ದಲ್ಲಿ ವಿಪತ್ತು ನಿರ್ವಹಣಾ ಕಾಯ್ದೆ–2005ರ ಸೆಕ್ಷನ್ 51 ರಿಂದ 60ರವರೆಗೆ ಅನ್ವಯವಾಗಬಹುದಾದ ಕಲಂ ರನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂಬರೀಶ್ ಮಾನವೀಯತೆಯ ಗುಣ ಹೊಂದಿದ್ದರು

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ



ಚಾಮರಾಜನಗರದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಕಚೇರಿಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಂಘಟನೆಗಳ ಒಕ್ಕೂಟದ ವತಿಯಿಂದ ದಿ.ಅಂಬರೀಶ್ ಅವರ 72ನೇ ವರ್ಷದ ಹುಟ್ಟುಹಬ್ಬ ಆಚರಿಸಿದರು.

ಚಾಮರಾಜನಗರ, ಜೂ.1– ಚಿತ್ರನಟರು, ಮಾಜಿ ಸಂಸದ ದಿವಂಗತ ರೆಬಲ್ ಸ್ಟಾರ್ ಅಂಬರೀಶ್ ಅವರು ಮಾನವೀಯತೆಯ ಬಹುದೊಡ್ಡ ಗುಣ ಹೊಂದಿದ್ದರು ಎಂದು ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ಸುರೇಶ್ ಎನ್. ಋಗ್ವೇದಿ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಕಚೇರಿಯಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಂಘಟನೆಗಳ ಒಕ್ಕೂಟದ ವತಿಯಿಂದ ದಿ.ಅಂಬರೀಶ್ ಅವರ 72ನೇ ವರ್ಷದ ಹುಟ್ಟುಹಬ್ಬದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅಂಬರೀಶ್ ಅವರು ಕನ್ನಡ ಚಿತ್ರರಂಗದಲ್ಲಿ ದೊಡ್ಡ ಕಲಾವಿದರು ಆಗಿದ್ದು, ಅಪಾರ ಅಭಿಮಾನಿ ಬಳಗ ಹೊಂದಿದ್ದು ಜನರ ಅಚ್ಚುಮೆಚ್ಚಿನ ನಟರಾಗಿದ್ದರು. ಚಿತ್ರರಂಗ ಅಲ್ಲದೇ ಉತ್ತಮ ರಾಜಕಾರಣಿಯಾಗಿದ್ದು ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ರೆಬೆಲ್‌ಸ್ಟಾರ್ ಅಂಬರೀಶ್ ಅವರ ಹೆಸರನ್ನು ನಗರದ ಪ್ರಮುಖ ರಸ್ತೆಗೆ ನಾಮಕರಣ ಮಾಡುವ ಕೆಲಸ ಆಗಬೇಕು. ಕಲಾವಿದರನ್ನು ಗೌರವಿಸಿದರೆ ಸಮಾಜದ ಅಸ್ತಿತ್ವದಲ್ಲಿದ್ದು, ಗೌರವ ಹೆಚ್ಚಾಗುತ್ತದೆ. ಇಲ್ಲದಿದ್ದರೆ ಮಾನವೀಯ ಗುಣ, ಸಂಸ್ಕಾರ, ಸಂಸ್ಕೃತಿ ಗುಣ ನಾಶವಾಗುತ್ತದೆ ಎಂದರು.

ಕನ್ನಡ ಸಂಘಟನೆಗಳ ಒಕ್ಕೂಟದಿಂದ ಚಾಮರಾಜನಗರದಲ್ಲಿ 1996ರಲ್ಲಿ ಅಂಬರೀಷ್ ರವರ ಚಲನಚಿತ್ರ ಕೊಡುಗೆಯ 25ನೇ ವರ್ಷದ ಸಂಭ್ರಮದ ಹಿನ್ನೆಲೆಯಲ್ಲಿ ಬೃಹತ್ ಮೆರವಣಿಗೆ ಹಾಗೂ ಬೆಳ್ಳಿ ಕಿರೀಟ ಧಾರಣೆ ಮಾಡಿ ಗಡಿ ಭಾಗದ ಕನ್ನಡಿಗರ ಪರವಾಗಿ ಗೌರವ ಸಲ್ಲಿಸಲಾಗಿತ್ತು ಎಂದರು.

ಬರಹಗಾರ ಲಕ್ಷ್ಮೀನರಸಿಂಹ ಮಾತನಾಡಿ, ಅಂಬರೀಶ್ ಅವರು ಹೃದಯವಂತ ಕಲಾವಿದರಾಗಿದ್ದರು. ಖಳನಾಯಕನಾಗಿ, ಪೋಷಕ ನಟನಾಗಿ, ನಾಯಕರಾಗಿದ್ದು, ಉತ್ತಮ ರಾಜಕಾರಣಿಯಾಗಿ ಸಮಾಜಕ್ಕೆ ಉತ್ತಮ ಸಂದೇಶ ಕೊಟ್ಟರು.

ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅಂಬರೀಶ್ ಅವರ ಭಾವಚಿತ್ರ ಪುಷ್ಪಾರ್ಚನೆ ಮಾಡಿ, ಮಾತನಾಡಿ, ಅಂಬರೀಶ್ ಅವರು ಸರಳ ವ್ಯಕ್ತಿತ್ವ ಹೊಂದಿದ್ದರೂ ಅವರು ಮುಖ್ಯಮಂತ್ರಿಯಾಗುವ ಎಲ್ಲಾ ಅರ್ಹತೆ ಹೊಂದಿದ್ದರು. ಕಾವೇರಿ ವಿಚಾರದಲ್ಲಿ ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅಂಬರೀಶ್, ನಾಡಕಂಡ ಅಭೂತಪೂರ್ವ ಕಲಾವಿದರು, ರಾಜಕಾರಣಿಯಾಗಿದ್ದರು ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಸಿ.ಎಸ್.ಸುರೇಶ್‌ನಾಯಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪಣ್ಯದಹುಂಡಿ ರಾಜು, ಶಿಕ್ಷಕ ರಂಗನಾಥ್, ನಗರಸಭಾ ಮಾಜಿ ಅಧ್ಯಕ್ಷ ಮಹದೇವನಾಯಕ, ಶ್ರೀಗಂಧ ಕನ್ನಡ ಯುವ ವೇದಿಕೆ ಅಧ್ಯಕ್ಷ ರವಿಚಂದ್ರಪ್ರಸಾದ್ ಕಹಳೆ, ಪ್ರಕಾಶ್, ಶಿವಲಿಂಗಮೂರ್ತಿ, ತಾಂಡವಮೂರ್ತಿ, ನಂಜುಂಡಶೆಟ್ಟಿ, ಅರುಣ್‌ಕುಮಾರ್ ಗೌಡ ಇತರರು ಹಾಜರಿದ್ದರು.

ಐಟಿಐ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ: ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2024–25ನೇ ಶೈಕ್ಷಣಿಕ ಸಾಲಿನ ಐ.ಟಿ.ಐ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ 2 ವರ್ಷ ಅವಧಿಯ ಎಲೆಕ್ಟ್ರಿಷಿಯನ್ ಹಾಗೂ ಫಿಟ್ಟರ್ ಕೋರ್ಸ್‌ಗಳು ಲಭ್ಯವಿದ್ದು, ವೆಬ್‌ಸೈಟ್ https://cite.karnataka.gov.in ನ ಮೂಲಕ ಅಥವಾ ಖುದ್ದಾಗಿ ಕಚೇರಿಗೆ ಜೂನ್ 3 ರೊಳಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ 9448322941, 9110607107 ಅಥವಾ ತೆರಕಣಾಂಬಿಯ ಬೊಮ್ಮಲಾಪುರ ರಸ್ತೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆ ಬಳಿಯಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಸಂಪರ್ಕಿಸಬಹುದೆಂದು ಪ್ರಕಟಣೆ ತಿಳಿಸಿದೆ.

ವಡ್ಡರಹಳ್ಳಿ ಸರ್ಕಾರಿ ಶಾಲೆಯಲ್ಲಿ ಪ್ರಾರಂಭೋತ್ಸವ

ಅಲಂಕೃತ ಟ್ರಾಕ್ಟರ್‌ನಲ್ಲಿ ಮಕ್ಕಳ ಮೆರವಣಿಗೆ

ಚಾಮರಾಜನಗರ: ತಾಲೂಕಿನ ವಡ್ಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2024–25ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಣೆ ಮಾಡಲಾಯಿತು.

ಶೃಂಗರಿಸಿದ ಮಿನಿ ಟ್ರಾಕ್ಟರ್‌ನಲ್ಲಿ ವಿದ್ಯಾರ್ಥಿಗಳನ್ನು ಕೂರಿಸಿಕೊಂಡು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ಶಾಲೆಗೆ ಕರೆತರಲಾಯಿತು. ಬಳಿಕ ಮಕ್ಕಳಿಗೆ ಶಾಲಾ ಶಿಕ್ಷಕರು ಹಾಗೂ ಎಸ್‌ಡಿಎಂಸಿ ಅಧ್ಯಕ್ಷರು ಮತ್ತು ಸದಸ್ಯರು ಆರತಿ ಎತ್ತಿ, ಗುಲಾಬಿ ಹೂ, ಸಿಹಿ ನೀಡಿ ಸ್ವಾಗತಿಸಿ ಬರಮಾಡಿಕೊಂಡರು.

ಗ್ರಾಪಂ ಸದಸ್ಯ ವಿ.ಕೆ ರಾಜಶೇಖರಮೂರ್ತಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಸರ್ಕಾರಿ ಶಾಲೆಗೆ ಮಕ್ಕಳನ್ನು ದಾಖಲು ಮಾಡುವ ಮೂಲಕ ಪೋಷಕರು ಅವರ ಭವಿಷ್ಯವನ್ನು ಉಜ್ವಲಗೊಳಿಸಬೇಕು. ಸರ್ಕಾರ ಸವಲತ್ತುಗಳನ್ನು



ವಡ್ಡರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 2024–25ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಣೆ ಮಾಡಲಾಯಿತು.

ಪಡೆದುಕೊಂಡು ಗುಣಮಟ್ಟ ಶಿಕ್ಷಣ ಸರ್ಕಾರಿ ಶಾಲೆಯಲ್ಲಿಯೂ ದೊರೆಯುತ್ತದೆ ಎಂಬುದನ್ನು ಪೋಷಕರು ಮನವರಿಕೆ ಮಾಡಿಕೊಳ್ಳಬೇಕು. ನಮ್ಮ ಶಾಲೆಗಳಲ್ಲಿ ಉತ್ತಮ ಭೋದನೆ ಮಾಡುವ ಶಿಕ್ಷಕ ವರ್ಗವೇ ಇದ್ದು, ಉನ್ನತ ದರ್ಜೆಯಲ್ಲಿ ಪಾಸಾಗಿರುವ ಹಾಗೂ ಪ್ರತಿಭಾವಂತ ಶಿಕ್ಷಕರನ್ನು ಸರ್ಕಾರ ತರಬೇತಿ ನೀಡಿ ಶಿಕ್ಷಕರನ್ನಾಗಿ ಆಯ್ಕೆ ಮಾಡಿಕೊಂಡಿದೆ. ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿದ ಬಹಳಷ್ಟು ಮಂದಿ ಉನ್ನತ ಹುದ್ದೆಗಳಲ್ಲಿ ಇದ್ದಾರೆ. ಭವಿಷ್ಯವನ್ನು ಉಜ್ವಲಗೊಳಿಸಿಕೊಂಡಿದ್ದಾರೆ. ಹೀಗಾಗಿ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರಿ ಶಾಲೆಯಲ್ಲಿ ಕೊಡಿಸುವ ಮೂಲಕ ಉಚಿತವಾಗಿ ನೀಡುವ ಸವಲತ್ತುಗಳನ್ನು ಸದ್ಬಳಕೆ ಮಾಢಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ರಾಜಶೇಖರ್ ಮೂರ್ತಿ, ಸಾವಿತ್ರಮ್ಮ, ಸಿದ್ದಮಲ್ಲಪ್ಪ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಬಸವಣ್ಣ, ಮಲ್ಲಿಕಾರ್ಜುನಸ್ವಾಮಿ ಮುಖ್ಯ ಶಿಕ್ಷಕರು, ಕುಮಾರ ಸಹ ಶಿಕ್ಷಕರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ನಿವೃತ್ತಿ ಹೊಂದಿದ ಶಿಕ್ಷಕ ರಾಜಶೇಖರಪ್ಪ ಅವರಿಗೆ ಬೀಳ್ಕೊಡುಗೆ



ಗುಂಡ್ಲುಪೇಟೆ ತಾಲೂಕಿನ ಬಾಚಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ನಿವೃತ್ತಿ ಹೊಂದಿದ ಶಿಕ್ಷಕ ರಾಜಶೇಖರಪ್ಪ ಅವರನ್ನು ಶಾಲಾ ಆಡಳಿತ ಮಂಡಳಿ ಹಾಗೂ ಗ್ರಾಮಸ್ಥರು ನೆನಪಿನ ಕಾಣಿಕೆ ನೀಡಿ ಬೀಳ್ಕೊಟ್ಟರು. ಈ ಸಂದರ್ಭ ಗ್ರಾಪಂ ಅಧ್ಯಕ್ಷ ಮಹೇಶ್, ಶಾಲಾಭಿವೃದ್ಧಿ ಸಮಿತಿ ಸದಸ್ಯರು, ಮುಖಂಡರು, ಶಿಕ್ಷಕರ ಸಂಘದ ಪದಾಧಿಕಾರಿಗಳು, ವಿದ್ಯಾರ್ಥಿಗಳು ಹಾಗೂ ಪೋಷಕರು ಇದ್ದರು.

ಪ್ರೇಮಾ ಶಂಕರೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ



ಮೈಸೂರು ನಗರಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ ಅವರು ಹುಟ್ಟುಹಬ್ಬ ಆಚರಿಸಿಕೊಂಡ ವೇಳೆ ಕುಂಬಾರಕೊಪ್ಪಲಿನ 5ನೇ ವಾರ್ಡಿನ ಜೆಡಿಎಸ್ ಅಧ್ಯಕ್ಷ ಶರತ್, ಒಂಟಿಕೊಪ್ಪಲಿನ ಸತೀಶ್, ಲಕ್ಷ್ಮಿ, ಸಿದ್ದೇಶ್ ಇನ್ನಿತರರು ಶುಭ ಹಾರೈಸಿದರು.

ಮೂರನೇ ಪುಟದಿಂದ

ಮತ್ತೊಮ್ಮೆ ನರೇಂದ್ರ ಮೋದಿ!

5 ಸ್ಥಾನ, ಸಿಎನ್‌ಎನ್ ನ್ಯೂಸ್ 18 ಪ್ರಕಾರ ಬಿಜೆಪಿ 21 ರಿಂದ 24, ಜೆಡಿಎಸ್ 1 ರಿಂದ 2, ಕಾಂಗ್ರೆಸ್ 3 ರಿಂದ 7 ಸ್ಥಾನ, ಸಿ ವೋಟರ್ ಪ್ರಕಾರ ಬಿಜೆಪಿ 23, ಜೆಡಿಎಸ್ 2, ಕಾಂಗ್ರೆಸ್ 3 ರಿಂದ 5, ಆಕ್ಸಸ್ ಮೈ ಇಂಡಿಯಾ ಪ್ರಕಾರ ಬಿಜೆಪಿ 22 ರಿಂದ 23, ಜೆಡಿಎಸ್ 1 ರಿಂದ 2, ಕಾಂಗ್ರೆಸ್ 3 ರಿಂದ 5 ಸ್ಥಾನ, ಜನ್ ಕೀ ಬಾತ್ ಸಮೀಕ್ಷೆಯಂತೆ ಬಿಜೆಪಿ 18 ರಿಂದ 22, ಜೆಡಿಎಸ್ 1 ರಿಂದ 3, ಕಾಂಗ್ರೆಸ್ 4 ರಿಂದ 8 ಸ್ಥಾನ, ಡೈನಾಮಿಕ್ಸ್ ಪ್ರಕಾರ ಬಿಜೆಪಿ–23, ಕಾಂಗ್ರೆಸ್ 5, ಟುಡೇ ಚಾಣಕ್ಯ ಸಮೀಕ್ಷೆಯಂತೆ ಬಿಜೆಪಿ 20 ರಿಂದ 24, ಜೆಡಿಎಸ್ 2 ರಿಂದ 3, ಕಾಂಗ್ರೆಸ್ 4 ರಿಂದ 8 ಸ್ಥಾನ ಪಡೆಯಲಿದೆ. ಬಹುತೇಕ ಸಮೀಕ್ಷೆಗಳ ಪ್ರಕಾರ ಕರ್ನಾಟದಲ್ಲಿ ಕಾಂಗ್ರೆಸ್ ಗರಿಷ್ಠ 8 ಸ್ಥಾನ ಎಂದಿದ್ದರೆ, ಬಿಜೆಪಿ–ಜೆಡಿಎಸ್ ಮೈತ್ರಿ ಗರಿಷ್ಠ 20 ರಿಂದ 22 ಸ್ಥಾನ ಗೆಲ್ಲಲಿದೆ ಎಂದಿದೆ. ದೆಹಲಿ,ಉತ್ತರಖಂಡ, ಗುಜರಾತ್ ಸೇರಿದಂತೆ ಕೆಲ ರಾಜ್ಯದಲ್ಲಿ ಬಿಜೆಪಿ ಕ್ಲೀನ್ ಸ್ವೀಪ್ ಮಾಡಲಿದೆ ಎಂದಿದೆ. ಸದ್ಯ ಪ್ರಕಟಗೊಂಡಿರುವ ಲೋಕಸಭಾ ಚುನಾವಣಾ ಮತಗಟ್ಟೆ ಸಮೀಕ್ಷೆ ವಿವರ ಇಲ್ಲಿದೆ.

ಇಂಡಿಯಾ ನ್ಯೂಸ್: ಎನ್‌ಡಿಎ–371, ಇಂಡಿಯಾ ಮೈತ್ರಿಕೂಟ–125, ಇತರರು– 47

ಜನ್ ಕಿ ಬಾತ್: ಎನ್‌ಡಿಎ– 377, ಇಂಡಿಯಾ ಮೈತ್ರಿಕೂಟ–151, ಇತರರು–15

ಎನ್‌ಡಿಟಿವಿ ಇಂಡಿಯಾ:ಎನ್‌ಡಿಎ–365, ಇಂಡಿಯಾ ಮೈತ್ರಿಕೂಟ–142, ಇತರರು– 36

ನ್ಯೂಸ್ ನೇಷನ್: ಎನ್‌ಡಿಎ: 342–378, ಇಂಡಿಯಾ ಮೈತ್ರಿಕೂಟ: 153–169, ಇತರರು: 21–23

ರಿಪ್ಲಬಿಕ್ ನ್ಯೂಸ್: ಎನ್‌ಡಿಎ:359, ಇಂಡಿಯಾ ಮೈತ್ರಿಕೂಟ: 154, ಇತರರು:47.

ಪಿಮಾರ್ಕ್: ಎನ್‌ಡಿಎ: 359, ಇಂಡಿಯಾ ಒಕ್ಕೂಟ 154, ಇತರರು: 30

ಲೋಕ್ ಪೋಲ್: ಎನ್‌ಡಿಎ 325–335, ಇಂಡಿಯಾ ಮೈತ್ರಿ ಕೂಟ 155–165, ಇತರೆ 48–55.

ಡೈನಾಮಿಕ್ಸ್: ಎನ್‌ಡಿಎ 371, ಇಂಡಿಯಾ ಮೈತ್ರಿ ಕೂಟ 125, ಇತರೆ 47.

ಕೆಲ ರಾಜ್ಯದಲ್ಲಿ ಬಿಜೆಪಿ ಅಚ್ಚರಿ ನೀಡಲಿದೆ ಎಂದು ಚುನಾವಣಾ ಮತಗಟ್ಟೆ ಸಮೀಕ್ಷೆಗಳು ಹೇಳುತ್ತಿದೆ. ಪ್ರಮುಖವಾಗಿ ಪಶ್ಚಿಮ ಬಂಗಳಾದಲ್ಲಿ ಆಡಳಿತರೂಡ ತೃಣಮೂಲ ಕಾಂಗ್ರೆಸ್‌ಗೆ ಬಿಜೆಪಿ ಶಾಕ್ ನೀಡಲಿದೆ ಎಂದು 3 ಸಮೀಕ್ಷೆಗಳು ಹೇಳುತ್ತಿದೆ. ಜನ್ ಕಿ ಬಾತ್ ಸಮೀಕ್ಷೆ ಪ್ರಕಾರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಬಿಜೆಪಿ 21 ರಿಂದ 26 ಸ್ಥಾನ ಗೆದ್ದರೆ, ಟಿಎಂಸಿ 16 ರಿಂದ 18 ಸ್ಥಾನಕ್ಕೆ ಕುಸಿಯಲಿದೆ. ಕಳೆದ ಚುನಾವಣೆಯಲ್ಲಿ ಟಿಎಂಸಿ 22 ಸ್ಥಾನ ಗೆದ್ದಿದ್ದರೆ, ಬಿಜೆಪಿ 18 ಸ್ಥಾನ ಗೆದ್ದುಕೊಂಡಿತ್ತು. ಡಿ ಡೈನಾಮಿಕ್ಸ್ ಸಮೀಕ್ಷೆ ಪ್ರಕಾರ ಬಿಜೆಪಿ 21 ಸ್ಥಾನ, ಟಿಎಂಸಿ 19 ಸ್ಥಾನ ಗೆಲ್ಲಲಿದೆ'. ಇನ್ನು ಭಾರತ್ ಮ್ಯಾಟ್ರಿಸ್ ಸಮೀಕ್ಷೆ ಪ್ರಕಾರ ಬಿಜೆಪಿ 21 ರಿಂದ 25 ಸ್ಥಾನ ಹಾಗೂ ಟಿಎಂಸಿ 16 ರಿಂದ 20 ಸ್ಥಾನ ಗೆಲ್ಲಲಿದೆ.

ಮೈಸೂರಲ್ಲಿ 4 ದಿನ ಮದ್ಯ ಮಾರಾಟ ನಿಷೇಧ

ಈ ಮಧ್ಯೆ ಜೂ.5ರಂದು ಮದ್ಯದಂಗಡಿಗಳು ತೆರೆಯಲಿದ್ದು, ವಿಧಾನಪರಿಷತ್ ಚುನಾವಣೆಯ ಮತ ಎಣಿಕೆಯ ದಿನವಾದ ಜೂ.6ರಂದು ಮಧ್ಯರಾತ್ರಿಯವರೆಗೆ ಮತ್ತೆ ಮದ್ಯದಂಗಡಿಗಳನ್ನು ಮುಚ್ಚಲಾಗುತ್ತದೆ. ನಿಷೇಧಿತ ಅವಧಿಯಲ್ಲಿ ಮದ್ಯ ಮಾರಾಟ, ಹಂಚಿಕೆ, ಸಾಗಣೆ ಮತ್ತು ದಾಸ್ತಾನು ಮಾಡದಂತೆ ಅಬಕಾರಿ ಇಲಾಖೆ ಅದೇಶದಲ್ಲಿ ತಿಳಿಸಿದೆ. ಈ ಮಧ್ಯೆ ಬೆಂಗಳೂರಿನ ಕೆಲ ರೆಸ್ಟೋರೆಂಟ್ ಮತ್ತು ಪಬ್ ಮಾಲೀಕರು ಬ್ಯಾನ್ ಆರ್ಡರ್ ತೆರವುಗೊಳಿಸುವಂತೆ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಜೂನ್ 1ರಿಂದ 6ರ ನಡುವೆ ಸಾರ್ವಜನಿಕರಿಗೆ ಆಹಾರ ಆತಿಥ್ಯ ನೀಡುವುದನ್ನು ಮುಂದುವರಿಸಲು ಅವಕಾಶ ನೀಡಬೇಕೆಂಬ ಇವರ ಮನವಿಗೆ ಹೈಕೋರ್ಟ್ ಅನುಮತಿ ನೀಡಿದೆ. ಜೂನ್ 3ರಂದು ವಿಧಾನ ಪರಿಷತ್ ಚುನಾವಣೆ, ಜೂನ್ 4ರಂದು ಲೋಕಸಭೆ ಚುನಾವಣೆ ಫಲಿತಾಂಶ ಮತ್ತು ಜೂನ್ 6ರಂದು ವಿಧಾನ ಪರಿಷತ್ ಚುನಾವಣೆ ಫಲಿತಾಂಶಗಳ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಪಬ್ ಮತ್ತು ಬ್ರೂವರಿಗಳನ್ನು ಮುಚ್ಚಿದರೆ ವ್ಯಾಪಾರ ಆದಾಯದ ಮೇಲೆ ತೀವ್ರ ಹೊಡೆತ ಬೀಳುತ್ತದೆ. ಈ ಸಮಯದಲ್ಲಿ ಜನರು ಹೆಚ್ಚಾಗಿ ಪಾನೀಯಗಳಿಗಾಗಿ ಪಬ್‌ಗಳಿಗೆ ಭೇಟಿ ನೀಡುತ್ತಾರೆ, ನಂತರ ಆಹಾರ ಸೇವನೆಯ ಮೊರೆ ಹೋಗುತ್ತಾರೆ. ನಿನ್ನೆಯ ಹೈಕೋರ್ಟ್ ಆದೇಶದ ಪ್ರಕಾರ, ಪ್ರತಿವಾದಿ ಸಂಖ್ಯೆ 3 (ಉಪ ಆಯುಕ್ತರು ಮತ್ತು ಜಿಲ್ಲಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್) ಮತ್ತು ನಂ 4 (ಪೊಲೀಸ್ ಕಮಿಷನರ್ ಮತ್ತು ಹೆಚ್ಚುವರಿ ಜಿಲ್ಲಾ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್) ಅರ್ಜಿದಾರರು ಮತ್ತು ಇತರರಿಗೆ ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಆಹಾರವನ್ನು ನೀಡುವುದನ್ನು ತಡೆಯದಂತೆ ನಿರ್ದೇಶಿಸಲಾಗಿದೆ. ಹೈಕೋರ್ಟ್ ಆದೇಶವು ಆಹಾರ ಸೇವೆಗೆ ಮಾತ್ರ ಅನ್ವಯಿಸುತ್ತದೆ.

ಕ್ರಿಕೆಟ್‌ಗೆ ದಿನೇಶ್ ಕಾರ್ತಿಕ್ ವಿದಾಯ

ಅಂತ್ಯದವರೆಗಿನ ಫೋಟೋಗಳನ್ನು ಹಂಚಿಕೊಂಡಿರುವ ಕಾರ್ತಿಕ್, ಎಲ್ಲಾ ಅಭಿಮಾನಿಗಳಿಗೆ ಧನ್ಯವಾದಗಳನ್ನು ತಿಳಿಸಿದ್ದಾರೆ. ತುಂಬಾ ಭಾವುಕರಾಗಿ ತಮ್ಮ ವೃತ್ತಿ ಬದುಕಿಗೆ ವಿದಾಯ ಹೇಳಿರುವ ದಿನೇಶ್ ಕಾರ್ತಿಕ್, ಕಳೆದ ಕೆಲವು ದಿನಗಳಿಂದ ನಿಮ್ಮೆಲ್ಲರಿಂದ ನನಗೆ ಸಿಕ್ಕಿರುವ ಪ್ರೀತಿಯಿಂದ ನಾನು ತುಂಬಾ ಅದೃಷ್ಟಶಾಲಿ ಎಂದು ಭಾವಿಸುತ್ತೇನೆ. ಇದಕ್ಕಾಗಿ ನಾನು ಎಲ್ಲಾ ಅಭಿಮಾನಿಗಳಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ಹೆಚ್ಚು ಯೋಚಿಸಿದ ನಂತರ, ನಾನು ಈಗ ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಿಂದ ನಿವೃತ್ತಿ ಹೊಂದಲು ನಿರ್ಧರಿಸಿದ್ದೇನೆ ಮತ್ತು ಜೀವನದಲ್ಲಿ ಇತರ ವಿಷಯಗಳನ್ನು ಮುಂದುವರಿಸಲು ಬಯಸುತ್ತೇನೆ. ಈ ಸಂದರ್ಭದಲ್ಲಿ ನಾನು ನನ್ನ ಎಲ್ಲಾ ಕೋಚ್‌ಗಳು, ನಾಯಕ, ತಂಡದ ಸಹ ಆಟಗಾರರು, ಆಯ್ಕೆದಾರರು ಮತ್ತು ಸಹಾಯಕ ಸಿಬ್ಬಂದಿಗೆ ಧನ್ಯವಾದ ಹೇಳಲು ಬಯಸುತ್ತೇನೆ ಎಂದಿದ್ದಾರೆ.

ರೂಂನಲ್ಲೇ ಪ್ರಜ್ವಲ್ ವಾಸ್ತವ್ಯ

ನಾನು ಸಾಮಾನ್ಯವಾಗಿ ಫೋನನ್ನು ಬಳಕೆ ಮಾಡುವುದಿಲ್ಲ, ನನ್ನ ಆಪ್ತ ಸಹಾಯಕನ ಬಳಿ ಇರುವ ಫೋನಿನಲ್ಲೇ ಮಾತನಾಡುತ್ತೇನೆ. ಹಿಂದೆ ನನ್ನ ಬಳಿ ಒಂದು ಸ್ಮಾರ್ಟ್ ಫೋನ್ ಇತ್ತು, ಅದು ಒಂದು ವರ್ಷದ ಹಿಂದೆಯೇ ಕಳೆದು ಹೋಗಿದೆ. ಆ ಬಗ್ಗೆ ನಾನು ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೇನೆ. ಬೇಕಾದರೆ ವಿಚಾರಿಸಿ ಎಂದಿದ್ದಾರೆ. ನಗ್ನ ಚಿತ್ರಗಳ ಬಗ್ಗೆ ಕೇಳಿದಾಗ ನನಗೆ ಅವರು ಯಾರೆಂದೇ ಗೊತ್ತಿಲ್ಲ. ರಾಜಕೀಯವಾಗಿ ನನ್ನನ್ನು ಮತ್ತು ನನ್ನ ಕುಟುಂಬವನ್ನು ಮುಗಿಸಲು ಕಾರ್ತಿಕ್ ಕೆಲವರ ಜೊತೆ ಕೈಜೋಡಿಸಿ ಇಷ್ಟೆಲ್ಲಾ ಮಾಡಿರಬಹುದು. ಯಾರದೋ ಫೋಟೋಗಳಿಗೆ ಯಾರದೋ ಅಂಗಾಂಗ ಅಂಟಿಸಿರಬಹುದು, ಇದು ಕಂಪ್ಯೂಟರ್ ಯುಗ. ಅದರಲ್ಲಿ ಏನು ಬೇಕಾದರೂ ಮಾಡಬಹುದು, ನಿಮಗೆ ಎಲ್ಲಾ ತಿಳಿದಿರುತ್ತದೆ. ನೀವು, ನನಗೆ ಕೇಳುತ್ತಿರುವ ಪ್ರಶ್ನೆಗಳನ್ನು ಕಾರ್ತಿಕ್‌ಗೆ ಕೇಳಿದರೆ ಉತ್ತರ ದೊರೆಯುತ್ತದೆ. ಅವನೇ ಇದೆಲ್ಲಾ ಮಾಡಿರಬಹುದು. ಹೌದು, ನೀವು ಇನ್ನೂ ಏಕೆ ಕಾರ್ತಿಕ್‌ನನ್ನು ಬಂಧಿಸಿಲ್ಲ. ಅವನನ್ನು ಬಂಧಿಸಿದರೆ, ನಿಮ್ಮೆಲ್ಲಾ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ ಎಂದು ಅತ್ಯಂತ ನಯ–ವಿನಯದಿಂದ ಪ್ರಜ್ವಲ್ ಉತ್ತರಿಸಿದ್ದಾರಂತೆ.

ಸಿಇಟಿ ಪರೀಕ್ಷಾ ಫಲಿತಾಂಶ ಪ್ರಕಟ

ಪ್ರವೇಶಾತಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಲಾಗಿತ್ತು. ಲೋಕಸಭೆ ಚುನಾವಣೆ ಫಲಿತಾಂಶದ ಬಳಿಕ ಫಲಿತಾಂಶ ಪ್ರಕಟವಾಗಲಿದೆ ಎಂದು ಹೇಳಲಾಗಿತ್ತು, ಇದು ವಿದ್ಯಾರ್ಥಿಗಳ ಆತಂಕಕ್ಕೆ ಕಾರಣವಾಗಿತ್ತು. ಏಪ್ರಿಲ್ 18, 19ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸಿಇಟಿ ಪರೀಕ್ಷೆ ನಡೆಸಿತ್ತು. ಲಕ್ಷಾಂತರ ವಿದ್ಯಾರ್ಥಿಗಳು ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಿಇಟಿ ಫಲಿತಾಂಶಕ್ಕಾಗಿ ವಿದ್ಯಾರ್ಥಿಗಳು ಕಾಯುತ್ತಿದ್ದರು.

ಕೊಡಗಿಗೆ ಬಂದಿಳಿದ ಎನ್‌ಡಿಆರ್‌ಎಫ್ ತಂಡ

ಯೋಧರ ತಂಡ ಮಳೆಗಾಲ ಮುಕ್ತಾಯಗೊಂಡ ಬಳಿಕ ಜಿಲ್ಲೆಯಿಂದ ನಿರ್ಗಮಿಸಲಿದೆ. ಪ್ರಾಕೃತಿಕ ವಿಕೋಪ ಎದುರಾದಲ್ಲಿ ಈ ತಂಡದೊಂದಿಗೆ ಪೊಲೀಸ್, ಅಗ್ನಿ ಶಾಮಕ ದಳ, ಹೋಂ ಗಾರ್ಡ್ಸ್, ಕಂದಾಯ, ಸ್ಥಳೀಯ ಗ್ರಾ.ಪಂ. ಪಿಡಿಓಗಳು, ದುಬಾರೆಯ ರ್‍ಯಾಫ್ಟರ್‌ಗಳು ಹಾಗೂ ಈಗಾಗಲೇ ಜಿಲ್ಲಾಡಳಿತದಿಂದ ಗುರುತಿಸಲ್ಪಟ್ಟಿರುವ ವಾಹನಗಳು ಒಂದು ತಂಡವಾಗಿ ರಕ್ಷಣಾ ಕಾರ್ಯಾಚರಣೆ ನಡೆಸಲಿವೆ.

ಸುರಕ್ಷಾ ಪರಿಕರಗಳು: ಎರಡು ಲಾರಿಗಳಲ್ಲಿ ಜಿಲ್ಲೆಗೆ ಆಗಮಿಸಿರುವ ಎನ್‌ಡಿಆರ್‌ಎಫ್ ಯೋಧರ ತಂಡ ಪ್ರವಾಹ, ಭೂ ಕುಸಿತ ಸೇರಿದಂತೆ ಎಲ್ಲಾ ರೀತಿಯ ಪ್ರಾಕೃತಿಕ ವಿಕೋಪಗಳನ್ನು ಎದುರಿಸುವ ಪರಿಣಿತಿ ಪಡೆದಿದೆ. ಮಾತ್ರವಲ್ಲದೇ ಅಪಾಯ ಎದುರಾಗುವ ಸಂದರ್ಭ ಜನ ಜಾನುವಾರು ರಕ್ಷಣೆಗೆ ಅಗತ್ಯವಾಗಿರುವಂತಹ ರಕ್ಷಣಾ ಪರಿಕರಗಳನ್ನು ಹೊತ್ತು ತಂದಿದ್ದಾರೆ. ಲೈಫ್ ಜಾಕೆಟ್‌ಗಳು, ಮೋಟಾರ್ ಬೋಟ್‌ಗಳು, ರ್‍ಯಾಫ್ಟ್‌ಗಳು, ಮರ ಕತ್ತರಿಸುವ ಯಂತ್ರಗಳು, ಹಗ್ಗಗಳು, ಸರ್ಚ್ ಲೈಟ್‌ಗಳು, ಕಟ್ಟಡ ಕುಸಿತದ ಸಂದರ್ಭ ಬಳಸುವ ವಿವಿಧ ಬಗೆಯ ಕಟ್ಟರ್‌ಗಳು, ಆಕ್ಸಿಜನ್ ಸಿಲಿಂಡರ್‌ಗಳು, ಸ್ಟ್ರೆಚ್ಚರ್‌ಗಳು, ಜೀವ ರಕ್ಷಕ ಔಷಧಗಳ ಸಹಿತ ರಕ್ಷಣಾ ಉಪಕರಣಗಳನ್ನು ಸಹ ತಂದಿದ್ದಾರೆ.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಣ ದುರುಪಯೋಗ

ಸಚಿವ ನಾಗೇಂದ್ರ ವಜಾಕ್ಕೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ

ಮೈಸೂರು, ಜೂ.1(ಎಂಟಿವೈ)– ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಮಾಡಿಕೊಂಡಿರುವ ಆರೋಪ ಎದುರಿಸುತ್ತಿರುವ ಸಚಿವ ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ನಡೆದ ಪ್ರತಿಭಟನೆಯಲ್ಲಿ ಹಲವು ಕಾರ್ಯಕರ್ತರು, ಮುಖಂಡರು ಪಾಲ್ಗೊಂಡು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆಗಿರುವ ಹಣ ದುರುಪಯೋಗ ಹಾಗೂ ನಿಗಮದ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣವನ್ನು ಸಿಬಿಐಗೆ ವಹಿಸುವಂತೆ ಆಗ್ರಹಿಸಿದರು.

ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ವಿನಿಯೋಗಿಸಬೇಕಾದ 187 ಕೋಟಿ ರೂ. ದುರುಪಯೋಗವಾಗಿದ್ದು, ಯುವಜನ ಸೇವೆ, ಕ್ರೀಡೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಚಿವ ಬಿ.ನಾಗೇಂದ್ರ ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿದ್ದಾರೆ ಎಂದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಬಿ.ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು. ಅಧಿಕಾರಿ ಆತ್ಮಹತ್ಯೆ ಹಾಗೂ ನಿಗಮದಲ್ಲಾಗಿರುವ ಹಣ ದುರುಪಯೋಗದ ಸತ್ಯಾಸತ್ಯತೆ ಪತ್ತೆ



ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರುಪಯೋಗದ ಆರೋಪಕ್ಕೆ ಗುರಿಯಾಗಿರುವ ಸಚಿವ ಬಿ.ನಾಗೇಂದ್ರ ಅವರನ್ನು ವಜಾಗೊಳಿಸುವಂತೆ ಒತ್ತಾಯಿಸಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಾಡಲು ಪ್ರಕರಣವನ್ನು ಸಿಬಿಐಗೆ ವಹಿಸುವುದು ಸೂಕ್ತ ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಇದೇ ವೇಳೆ ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿ ಚಂದ್ರಶೇಖರ್ ಅತ್ಮಹತ್ಯೆ ಮಾಡಿಕೊಳ್ಳಲು ಭ್ರಷ್ಟಾಚಾರವೇ ಕಾರಣ. ಸಚಿವರು, ಹಿರಿಯ ಅಧಿಕಾರಿಗಳ ಹೆಸರನ್ನು ಡೆತ್‌ನೋಟ್‌ನಲ್ಲಿ ಬರೆದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಹಣ ದುರುಪಯೋಗ ಪ್ರಕರಣದಲ್ಲಿ ಸಚಿವರು ಭಾಗಿಯಾಗಿರುವುದು ಖಚಿತವಾಗಿದೆ. ಈ ಪ್ರಕರಣದಲ್ಲಿ ನಿಗಮದ ಹಣ ಯಾವ ರೀತಿ ದುರ್ಬಳಕೆಯಾಗಿದೆ ಎಂದು ಪತ್ತೆ ಮಾಡಲು ಹಾಗೂ ಅಧಿಕಾರಿ ಸಾವಿಗೆ ನಿಖರ ಕಾರಣದೊಂದಿಗೆ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಸಿಬಿಐಗೆ ವಹಿಸುವ ಅಗತ್ಯವಿದೆ. ಸರ್ಕಾರ ಶೇ.100ರಷ್ಟು ಕಮಿಷನ್ ದಂಧೆಯಲ್ಲಿ ತೊಡಗಿರುವಂತೆ ಇದೆ. ಸಚಿವರ ರಾಜೀನಾಮೆ ಪಡೆಯದೆ ಅವರನ್ನು ರಕ್ಷಣೆ ಮಾಡುವ ಕೆಲಸ ನಡೆಯುತ್ತಿದೆ. ಭ್ರಷ್ಟಾಚಾರ ಮುಕ್ತ ಆಡಳಿತದ ಬಗ್ಗೆ ಮಾತನಾಡುವ ಸಿಎಂ ಮೌನವಹಿಸಿರುವುದು ಖಂಡನೀಯ ಎಂದರು.

ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್ ಮಾತನಾಡಿ, ಎಸ್‌ಟಿ ಸಮುದಾಯಕ್ಕೆ ಮೀಸಲಾದ ಹಣವನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸದೆ ವಾಮಮಾರ್ಗದಲ್ಲಿ ತೆಲಂಗಾಣ ರಾಜ್ಯದ ಚುನಾವಣೆಗೆ ಬಳಸಿದ್ದಾರೆ. ಎಸ್‌ಸಿ, ಎಸ್‌ಟಿ ಅಭಿವೃದ್ಧಿ ಮಾಡದೆ ಸರ್ಕಾರ ಅನ್ಯಾಯ ಮಾಡಿದೆ ಎಸ್‌ಐಟಿ ತನಿಖೆಗೆ ವಹಿಸಿ ಪ್ರಕರಣವನ್ನು ಮುಚ್ಚಿ ಹಾಕುವ ಕೆಲಸ ಮಾಡಲಾಗಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. ಪೊಲೀಸ್ ಠಾಣೆ ಮೇಲೆ ದಾಳಿ ಮಾಡುವ ಪ್ರಕರಣಗಳು ನಡೆದಿರುವುದು ಅಭದ್ರತೆಯನ್ನು ತೋರಿಸುತ್ತದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಯುವ ಮೋರ್ಚಾ ನಗರಾಧ್ಯಕ್ಷ ರಾಕೇಶ್ ಗೌಡ, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ, ನಗರ ಉಪಾಧ್ಯಕ್ಷ ಜೋಗಿ ಮಂಜು, ಮುಖಂಡರಾದ ರಾಕೇಶ್ ಭಟ್, ಸಂದೀಪ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತಯಾಚನೆ



ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ತೊಣಚಿಕೊಪ್ಪಲಿನ ಹೇಮಾವತಿ ಶಾಲೆ, ಜ್ಞಾನದೀಪ ಕಾಲೇಜು, ಭಾರತ ಸೇವಾದಳ ಅನುದಾನಿತ ಪ್ರೌಢಶಾಲೆ, ಕುವೆಂಪು ಪ್ರೌಢಶಾಲೆ, ಸೆಂಟ್ ಮೇರೀಸ್ ಸಂಸ್ಥೆಗಳಿಗೆ ಭೇಟಿ ನೀಡಿ, ಮತಯಾಚಿಸಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ, ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್, ಜಗನ್ನಾಥ್ ಭೋವಿ, ಮುಖಂಡರಾದ ವಿಶ್ವನಾಥ್, ಕೇಬಲ್ ಶೇಖರ್, ಆಶ್ರಯ ಸಮಿತಿ ಮಾಜಿ ಸದಸ್ಯ ಸುಂದರ್, ಮಹೇಶ್, ಮಹ್ಮದ್ ಫಾರೂಖ್ ಇತರರಿದ್ದರು.


ಮರಿತಿಬ್ಬೇಗೌಡರ ನಾಮಪತ್ರಕ್ಕೆ ಸಲ್ಲಿಸಿದ್ದ ಆಕ್ಷೇಪ ತಿರಸ್ಕೃತ

ಮೈಸೂರು, ಜೂ.1(ಎಸ್‌ಬಿಡಿ)– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರು ಅಫಿಡವಿಟ್‌ನಲ್ಲಿ ಆದಾಯ ಮೂಲ ದಾಖಲಿಸಿಲ್ಲ ಎಂದು ವಕೀಲರೊಬ್ಬರು ಸಲ್ಲಿಸಿದ್ದ ತಕರಾರು ಅರ್ಜಿಯನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಮರಿತಿಬ್ಬೇಗೌಡರು ಆದಾಯ ತೆರಿಗೆ ರಿಟರ್ನ್ಸ್ ಫೈಲ್ ಮಾಡದೆ ಸರ್ಕಾರಕ್ಕೆ ವಂಚನೆ ಮಾಡಿದ್ದಾರೆ. ನಿವೇಶನಗಳನ್ನು ಖರೀದಿಸಲು ಅವರ ಆದಾಯ ಮೂಲ ವೇನು ಎಂಬುದರ ಬಗ್ಗೆ ಅಫಿಡವಿಟ್‌ನಲ್ಲಿ ನಮೂದು ಮಾಡಿಲ್ಲ. ಅಲ್ಲದೆ ಎಫ್‌ಡಿಗಳನ್ನು ಹೊಂದಿದ್ದು, ಅದರ ಬಗ್ಗೆಯೂ ಮಾಹಿತಿ ನೀಡಿಲ್ಲ ಎಂದು ವಕೀಲರು ಹಾಗೂ ಆಡಿಟರ್ ಎನ್.ಆರ್. ರವಿಚಂದ್ರೇಗೌಡ ಅವರು ಕ್ರಮಕ್ಕೆ ಆಗ್ರಹಿಸಿ ಚುನಾವಣಾಧಿಕಾರಿಗಳೂ ಆದ ಮೈಸೂರು ಪ್ರಾದೇಶಿಕ ಆಯುಕ್ತರಿಗೆ ತಕರಾರು ಅರ್ಜಿ ಸಲ್ಲಿಸಿದ್ದರು.

ಅರ್ಜಿ ಪರಿಶೀಲಿಸಿದ ಚುನಾವಣಾಧಿಕಾರಿಗಳು, ವಿಧಾನಪರಿಷತ್ ಚುನಾವಣಾಧಿಕಾರಿಗಳ ಕೈಪಿಡಿ ನಿಯಮದನ್ವಯ ತಕರಾರು ಅರ್ಜಿಯನ್ನು ತಿರಸ್ಕರಿಸಿದ್ದಾರೆ. ಅಭ್ಯರ್ಥಿ ಸಲ್ಲಿಸಿದ ಅಫಿಡವಿಟ್ ದೋಷಪೂರಿತ ಅಥವಾ ತಪ್ಪು ಮಾಹಿತಿ ಇರುವ ಕಾರಣಕ್ಕೆ ನಾಮಪತ್ರ ತಿರಸ್ಕರಿಸುವಂತಿಲ್ಲ ಎಂದು ವಿಧಾನಪರಿಷತ್ ಚುನಾವಣಾಧಿಕಾರಿಗಳ ಕೈಪಿಡಿ–2016ರ ಚಾಪ್ಟರ್ 6ರಲ್ಲಿನ ಕ್ರಮ ಸಂಖ್ಯೆ 10ರ ಉಪ ಕಂಡಿಕೆ 12ರಲ್ಲಿ ಉಲ್ಲೇಖವಿದೆ. ಈ ಹಿನ್ನೆಲೆಯಲ್ಲಿ ತಕರಾರು ಅರ್ಜಿ ತಿರಸ್ಕರಿಸಲಾಗಿದೆ ಎಂದು ಮೇ 17ರ ಆದೇಶದಲ್ಲಿ ತಿಳಿಸಿದ್ದಾರೆ.

ರೈತರಿಗೆ ಉಚಿತ ಬಿತ್ತನೆ ಬೀಜ ವಿತರಣೆಗೆ ಬಿಜೆಪಿ ಮನವಿ



ರೈತರಿಗೆ ಉಚಿತವಾಗಿ ಬಿತ್ತನೆ ಬೀಜ ವಿತರಿಸುವಂತೆ ಆಗ್ರಹಿಸಿ ಬಿಜೆಪಿ ರೈತ ಮೋರ್ಚಾ ಮುಖಂಡರು ಮೈಸೂರಿನ ಕಾಡಾ ಕಚೇರಿ ಆವರಣದಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರು, ಜೂ.1(ಎಂಟಿವೈ)– ರೈತರಿಗೆ ಉಚಿತವಾಗಿ ಗುಣಮಟ್ಟದ ಬಿತ್ತನೆ ಬೀಜ ಪೂರೈಸುವಂತೆ ಒತ್ತಾಯಿಸಿ ಬಿಜೆಪಿ ರೈತ ಮೋರ್ಚಾ ಹಾಗೂ ಜಿಲ್ಲಾ ಗ್ರಾಮಾಂತರ ಬಿಜೆಪಿ ಕಾರ್ಯಕರ್ತರು ಕೃಷಿ ಇಲಾಖೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರಿನ ಕಾಡಾ ಕಚೇರಿ ಆವರಣಕ್ಕೆ ಎರಡೂ ಮೋರ್ಚಾ ಕಾರ್ಯಕರ್ತರ ನಿಯೋಗ ಆಗಮಿಸಿ, ಮನವಿ ಸಲ್ಲಿಸಿತು. ಇತ್ತೀಚೆಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಬೆಲೆ ಹೆಚ್ಚಾಗಿದೆ. ಇದರಿಂದ ರೈತರಿಗೆ ಸಂಕಷ್ಟ ಉಂಟಾಗಿದೆ. ಕೃಷಿ ಚಟುವಟಿಕೆಗೆ ತೊಂದರೆ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಬಿತ್ತನೆ ಬೀಜವನ್ನು ಉಚಿತವಾಗಿ ವಿತರಿಸಬೇಕು. ರಸಗೊಬ್ಬರದ ಬೆಲೆಯನ್ನು ಕಡಿಮೆ ಮಾಡಬೇಕು ಎಂದು ಮನವಿ ಮಾಡಿದರು.


ಇದೇ ವೇಳೆ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಮಾತನಾಡಿ, ಕಳೆದ ವರ್ಷ ಬರಗಾಲದಿಂದ ರೈತ ಸಮುದಾಯ ತತ್ತರಿಸಿದೆ. ಆದಾಯವಿಲ್ಲದೆ ರೈತ ಸಮುದಾಯ ಕಂಗಾಲಾಗಿದೆ. ಈ ವರ್ಷ ಉತ್ತಮ ಮಳೆ ಬೀಳುತ್ತಿದ್ದು, ರೈತರಲ್ಲಿ ಸಂತೋಷ ಮನೆ ಮಾಡಿದೆ. ಆದರೆ, ಬಿತ್ತನೆ ಬೀಜದ ಬೆಲೆ ಹೆಚ್ಚಳ ಮಾಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕೃಷಿ ಕ್ಷೇತ್ರಕ್ಕೆ ಕಳೆದ ವರ್ಷ ಆಗಿರುವ ನಷ್ಟವನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಬಾರಿ ರೈತರಿಗೆ ಉಚಿತವಾಗಿ ರಸಗೊಬ್ಬರ ಹಾಗೂ ಬಿತ್ತನೆ ಬೀಜ ಸರಬರಾಜು ಮಾಡಬೇಕಾಗಿತ್ತು. ಎಲ್ಲಾ ಕೃಷಿ ಉಪ ಕಚೇರಿಗಳಲ್ಲಿ ಬಿತ್ತನೆ ಬೀಜ ಪೂರೈಕೆ ಮಾಡಬೇಕು ಎಂದು ಆಗ್ರಹಿಸಿದರು

ರಾಜ್ಯ ಸರ್ಕಾರ ಕೃಷಿ ಇಲಾಖೆ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡು ರೈತರಿಗೆ ಅನ್ಯಾಯ ಮಾಡಿದೆ. ಈ ಹಿನ್ನೆಲೆಯಲ್ಲಿ ರಿಯಾಯಿತಿ ದರದಲ್ಲಿ ಉತ್ತಮವಾದ ಬಿತ್ತನೆ ಬೀಜ ಪೂರೈಸಬೇಕು. ಸರ್ಕಾರ ವಿತರಿಸಬೇಕಾದ ಬಿತ್ತನೆ ಬೀಜ ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ರೈತರ ಹಿತಕಾಯಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಈ ಹಿಂದೆ ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವಿದ್ದಾಗ ಕೃಷಿ ಸಮ್ಮಾನ್ ಯೋಜನೆಯಲ್ಲಿ ರೈತರಿಗೆ 4 ಸಾವಿರ ಧನ ಸಹಾಯ ನೀಡುತ್ತಿದ್ದರು. ಇದರೊಂದಿಗೆ ಕೇಂದ್ರದ ಮೋದಿ ನೇತೃತ್ವದ ಸರ್ಕಾರ 6 ಸಾವಿರ ರೂ. ನೀಡುತ್ತಿತ್ತು. ಇದರಿಂದ ರೈತರಿಗೆ ನೆರವಾಗುತ್ತಿತ್ತು. ಆದರೆ, ರಾಜ್ಯ ಸರ್ಕಾರ ನೀಡುತ್ತಿದ್ದ ಹಣವನ್ನು ಸ್ಥಗಿತಗೊಳಿಸಿದೆ. ರಾಜ್ಯ ಸರ್ಕಾರ ರೈತ ವಿರೋಧಿ ನೀತಿ ಅನುಸರಿಸುತ್ತಿದೆ. ಕೂಡಲೆ ರೈತರಿಗೆ ನೆರವು ನೀಡುವ ಕಾರ್ಯಕ್ರಮವನ್ನು ಮುಂದುವರೆಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಪ್ರಧಾನ ಕಾರ್ಯದರ್ಶಿ ವೆಂಕಟೇಶ್, ಮುಖಂಡರಾದ ವಸಂತಕುಮಾರ್, ನಾಗೇಶ್, ಕೆ.ಟಿ.ಮಾದಪ್ಪ, ಪರುಶುರಾಮಪ್ಪ ಹಾಗೂ ಇನ್ನಿತರರು ಇದ್ದರು.

ವಾಣಿಜ್ಯ ಬಳಕೆ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆ 69.50 ರೂ. ಇಳಿಕೆ



ಮುಂಬೈ: ಲೋಕಸಭೆ ಚುನಾವಣೆಯ ಕೊನೆಯ ಹಂತದ ಮತದಾನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ನಡುವಲ್ಲೇ ಎಲ್‌ಪಿಜಿ ಗ್ರಾಹಕರಿಗೆ ಬಿಗ್ ರಿಲೀಫ್ ಸಿಕ್ಕಿದೆ.

ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಸರ್ಕಾರಿ ತೈಲ ಮತ್ತು ಅನಿಲ ಮಾರುಕಟ್ಟೆ ಕಂಪನಿಗಳು ಸತತ ಮೂರನೇ ಬಾರಿಗೆ ಇಳಿಸಿವೆ. ಈ ಮೂಲಕ ಚುನಾವಣಾ ಪ್ರಕ್ರಿಯೆ ಆರಂಭವಾದ ಬಳಿಕ ಮೂರು ಬಾರಿ ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆಯಾಗಿದೆ.

ತೈಲ ಮಾರುಕಟ್ಟೆ ಕಂಪನಿಗಳು ಜೂನ್ 1 ರಿಂದ ತಕ್ಷಣದಿಂದಲೇ ಜಾರಿಗೆ ಬರುವಂತೆ ವಾಣಿಜ್ಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು 69.50 ರೂ. ಕಡಿತಗೊಳಿಸಿವೆ.

ಇದರೊಂದಿಗೆ ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಚಿಲ್ಲರೆ ಮಾರಾಟ ಬೆಲೆ 1,676 ರಷ್ಟಿದೆ. ದೇಶಾದ್ಯಂತ ಮೆಟ್ರೋ ನಗರಗಳಿಗೂ ಇದು ಅನ್ವಯವಾಗಿದೆ.

ಮುಂಬೈನಲ್ಲಿ ಕೂಡ 69.50 ರೂ. ಇಳಿಕೆಯಾಗಿದ್ದು, ಪರಿಷ್ಕೃತ ಬೆಲೆಯನ್ನು 1,629 ಕ್ಕೆ ನಿಗದಿಪಡಿಸಲಾಗಿದೆ. ಚೆನ್ನೈನಲ್ಲಿ ಬೆಲೆ 1,841.50 ರಷ್ಟಿದ್ದರೆ, ಕೋಲ್ಕತ್ತಾದಲ್ಲಿ ಬೆಲೆ ಕಡಿತದ ನಂತರ 1,789.50 ರೂ. ಆಗಿದೆ.

ಮಾರ್ಚ್ 1 ರಂದು 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ದರ 19 ರೂ. ಇಳಿಕೆಯಾಗಿತ್ತು. ಏಪ್ರಿಲ್‌ನಲ್ಲಿ 19 ಕೆಜಿ ವಾಣಿಜ್ಯ ಸಿಲಿಂಡರ್‌ಗಳು ಮತ್ತು 5 ಕೆಜಿ ಎಫ್‌ಟಿಎಲ್ (ಫ್ರೀ ಟ್ರೇಡ್ ಎಲ್‌ಪಿಜಿ) ಸಿಲಿಂಡರ್‌ಗಳ ಬೆಲೆಯನ್ನು ಕ್ರಮವಾಗಿ 30.50 ರೂ. ಮತ್ತು 7.50 ರೂ. ನಷ್ಟು ಕಡಿತಗೊಳಿಸಲಾಗಿತ್ತು. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಪ್ರತಿ ತಿಂಗಳ 1 ರಂದು ಅಡುಗೆ ಅನಿಲ ಬೆಲೆಗಳನ್ನು ಪರಿಷ್ಕರಿಸುತ್ತವೆ.

ಬೆಲೆ ಇಳಿಕೆಯ ಹಿಂದಿನ ನಿಖರವಾದ ಕಾರಣಗಳನ್ನು ಬಹಿರಂಗಪಡಿಸಲಾಗಿಲ್ಲವಾದರೂ, ಅಂತರರಾಷ್ಟ್ರೀಯ ತೈಲ ಬೆಲೆಗಳಲ್ಲಿನ ಬದಲಾವಣೆಗಳು, ತೆರಿಗೆ ನೀತಿಗಳಲ್ಲಿನ ಬದಲಾವಣೆಗಳು ಮತ್ತು ಪೂರೈಕೆ–ಬೇಡಿಕೆಯಂತಹ ವಿವಿಧ ಅಂಶಗಳನ್ನು ಆಧಾರವಾಗಿಟ್ಟು ಕೊಂಡು ಬೆಲೆ ಪರಿಷ್ಕರಿಸಲಾಗುತ್ತದೆ.

ವಿಶ್ವ ಹಾಲು ದಿನಾಚರಣೆ ಪ್ರಯುಕ್ತ

ನಂದಿನಿ ಉತ್ಪನ್ನ ಬಳಸುವಂತೆ ಬೈಕ್ ರ್‍ಯಾಲಿ ಮೂಲಕ ಜಾಗೃತಿ

ಮೈಸೂರು, ಜೂ.1(ಎಂಟಿವೈ)– ವಿಶ್ವ ಹಾಲು ದಿನದ ಅಂಗವಾಗಿ ಮೈಮುಲ್ ಸಂಸ್ಥೆ ಮೈಸೂರಲ್ಲಿ ಬೈಕ್ ರ್‍ಯಾಲಿ ಆಯೋಜಿಸಿ, 'ನಂದಿನಿ ಉತ್ಪನ್ನಗಳನ್ನು' ಬಳಸುವಂತೆ ಜಾಗೃತಿ ಮೂಡಿಸಿತು.

ಮೈಸೂರಿನ ಆಲನಹಳ್ಳಿಯಲ್ಲಿರುವ ಮೈಮುಲ್ ಮೆಗಾ ಡೈರಿ ಮುಂಭಾಗದಿಂದ ಆರಂಭವಾದ ಬೈಕ್ ರ್‍ಯಾಲಿ ಟೆರಿಷಿಯನ್ ಕಾಲೇಜು ವೃತ್ತ ನಜರಬಾದ್, ಹಾರ್ಡಿಂಜ್ ವೃತ್ತದ ಮೂಲಕ ಗನ್‌ಹೌಸ್ ಮೂಲಕ ಶಕ್ತಿಧಾಮದಲ್ಲಿ ಸಮಾಪ್ತಿಯಾಯಿತು.

ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ಸವಾರರು 'ನಂದಿನಿ ಹಾಲು ಕೇಳಿ ಪಡೆಯಿರಿ', 'ಶುದ್ಧ, ಆರೋಗ್ಯಕರ ನಂದಿನಿ ಪ್ರತಿ ಮನೆಯ ಗೆಳೆಯ', 'ನಮ್ಮ ನಡೆ ನಂದಿನಿಯ ಕಡೆ', 'ನಂದಿನಿ ಉತ್ಪನ್ನ ಬೆಳೆಸೋಣ ರೈತರ ಋಣ ತೀರಿಸೋಣ' ಘೋಷಣೆಯುಳ್ಳ ನಾಮಫಲಕ ಹಿಡಿದು ಗಮನ ಸೆಳೆದರು.



ಮೈಸೂರಿನ ಆಲನಹಳ್ಳಿಯಲ್ಲಿರುವ ಮೈಮುಲ್ ಮೆಗಾ ಡೈರಿ ಮುಂಭಾಗ ವಿಶ್ವ ಹಾಲು ದಿನದ ಅಂಗವಾಗಿ ನಂದಿನಿ ಉತ್ಪನ್ನಗಳ ಹೆಚ್ಚಿನ ಬಳಕೆಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಲಾಯಿತು.

ಈ ವೇಳೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ.ಜಗದೀಶ್ ಮಾತನಾಡಿ, ಜೂ.1ರಂದು ಅಂತಾರಾಷ್ಟ್ರೀಯ ಹಾಲಿನ ದಿನವನ್ನು ಆಚರಿಸುವ ಪದ್ಧತಿ ಇದೆ. ಹಾಲಿನ ಮಹತ್ವ ಸಾರುವ ನಿಟ್ಟಿನಲ್ಲಿ ಹಾಲಿನ ದಿನ ಆಚರಿಸಲಾಗುತ್ತದೆ. ಹಾಲಿನ ಉತ್ಪಾದನೆ ಮತ್ತು ಬಳಕೆ ಹೆಚ್ಚಿಸುವ ಉದ್ದೇಶದಿಂದ ಕಾರ್ಯಕ್ರಮ ಆಚರಿಸಲಾಗುತ್ತಿದೆ. ಹಾಲು ಸಂಪೂರ್ಣ ಆಹಾರವಾಗಿದ್ದು, ಮಕ್ಕಳೂ ಸೇರಿದಂತೆ ಎಲ್ಲರಿಗೂ ಬೇಕಾದ ಅಗತ್ಯ ಪೋಷಕಾಂಶ ಒಳಗೊಂಡಿದೆ. ಹೆಚ್ಚು ಹಾಲನ್ನು ಬಳಕೆ ಮಾಡುವುದರಿಂದ ದೈಹಿಕವಾಗಿ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಮೇ 31ರಂದು ಕೆಎಂಎಫ್ ಇತಿಹಾಸದಲ್ಲೇ 94.26 ಲಕ್ಷ ಕೆಜಿ ಹಾಲನ್ನು ಶೇಖರಿಸಿ ದಾಖಲೆ ನಿರ್ಮಿಸಲಾಗಿದೆ. ಶೀಘ್ರದಲ್ಲಿಯೇ ಒಂದು ಕೋಟಿ ಕೆಜಿ ಹಾಲಿನ ಶೇಖರಣೆ ಮಾಡುವ ಗುರಿ ತಲುಪುವ ವಿಶ್ವಾಸವಿದೆ. ಈ ಬಾರಿ ಬೇಸಿಗೆಯಲ್ಲಿಯೂ ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಹಾಲು, ಮೊಸರು ಹಾಗೂ ಮಜ್ಜಿಗೆ ಉತ್ಪನ್ನಗಳನ್ನು ಪೂರೈಸಲಾಗಿದೆ. ಈ ಬಾರಿ 39 ಸಾವಿರ ಲೀಟರ್ ಐಸ್ ಕ್ರೀಮ್ ಮಾರಾಟ ಮಾಡಿದ್ದೇವೆ. ಕಳೆದ ವರ್ಷ 16 ಸಾವಿರ ಲೀಟರ್ ಮಾರಾಟ ಮಾಡಲಾಗಿತ್ತು. ಹಾಲಿನ ಉತ್ಪಾದನೆ ಹೆಚ್ಚಳವಾದ ಹಿನ್ನೆಲೆಯಲ್ಲಿ ಮುಂಬೈನಲ್ಲಿಯೂ ಪ್ರತಿನಿತ್ಯ 2 ಲಕ್ಷ ಲೀಟರ್ ನಂದಿನಿ ಹಾಲು ಮಾರಾಟಕ್ಕೆ ಕ್ರಮಕೈಗೊಳ್ಳಲಾಗಿದೆ. ಹೆಚ್ಚುವರಿಯಾಗಿ ಇನ್ನೂ ಒಂದು ಲಕ್ಷ ಲೀಟರ್ ಹಾಲು ಮಾರಾಟಕ್ಕೆ ಉದ್ದೇಶಿಸಲಾಗಿದೆ. ಚೆನ್ನೈ ಮಾರುಕಟ್ಟೆಯಲ್ಲೂ 35 ಸಾವಿರ ಲೀಟರ್ ಹಾಲು ಮಾರಾಟ ಮಾಡಲಾಗುತ್ತಿದೆ. ಇನ್ನೂ 50 ರಿಂದ 1 ಲಕ್ಷ ಲೀಟರ್ ಹಾಲು ಮಾರಾಟ ಹೆಚ್ಚಳ ಮಾಡಲು ಚಿಂತಿಸಲಾಗಿದೆ ಬಿಎಸ್‌ಎನ್‌ಎಲ್ ಸಹಯೋಗದೊಂದಿಗೆ 16 ಪಾರ್ಲರ್ ನಿರ್ಮಿಸಲು ಚರ್ಚೆ ನಡೆಸಲಾಗುತ್ತಿದೆ ಎಂದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್. ವಿಜಯಕುಮಾರ್ ಮಾತನಾಡಿ, ಮೈಸೂರು ಜಿಲ್ಲಾ ಹಾಲು ಒಕ್ಕೂಟದಿಂದ ಕಳೆದ ಮೂರು ವರ್ಷದಿಂದ ಹಾಲಿನ ದಿನವನ್ನು ಆಚರಿಸಲಾಗುತ್ತಿದೆ. ಮೊದಲ ಬಾರಿಗೆ ನಡಿಗೆ ಮೂಲಕ ಅರಿವು ಮೂಡಿಸಲಾಗಿತ್ತು. ಕಳೆದ ಬಾರಿ ವಿವಿಧ ಆಶ್ರಮದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ನಡೆಸಲಾಗಿತ್ತು. ಈ ಬಾರಿ ಬೈಕ್ ರ್‍ಯಾಲಿ ಮೂಲಕ ಆಚರಿಸಿದ್ದೇವೆ. ಹಾಲಿನಲ್ಲಿ ಎಲ್ಲಾ ರೀತಿಯ ಖನಿಜ, ಪೋಷಕಾಂಶಯುಕ್ತ ಅಂಶ ಇವೆ. ಹೀಗಾಗಿ ಹಾಲನ್ನು ಹೆಚ್ಚಾಗಿ ಬಳಸಿ ಆರೋಗ್ಯ ಕಾಪಾಡಿಕೊಳ್ಳುವಂತೆ ಕೋರಿದರು. ಈ ಸಂದರ್ಭದಲ್ಲಿ ಮಾರುಕಟ್ಟೆ ವ್ಯವಸ್ಥಾಪಕರಾದ ಎಚ್.ಕೆ.ಜಯಶಂಕರ್ ಆಡಳಿತ ಮಂಡಳಿ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಇನ್ನಿತರರು ಉಪಸ್ಥಿತರಿದ್ದರು.

ಚುಟುಕು ಕ್ರಿಕೆಟ್ ರಸದೌತಣ

ಟಿ20 ವಿಶ್ವಕಪ್ ವಿಜೇತರ ವಿವರ





ಟಿ20 ವಿಶ್ವಕಪ್-2024 ಪಂದ್ಯಾವಳಿಗೆ ಕ್ಷಣಗಣನೆ ಆರಂಭವಾಗಿದ್ದು, ಈ ಮಹಾ ಪಂದ್ಯಾವಳಿಗೆ ಇಡೀ ಜಗತ್ತು ಸಾಕ್ಷಿಯಾಗಲಿದೆ. ಅಲ್ಲದೇ ಕ್ರೀಡಾಭಿಮಾನಿಗಳಲ್ಲಿ ಈಗಾಗಲೇ ಕ್ರಿಕೆಟ್ ಫೀವರ್ ಹೆಚ್ಚಾಗಿದ್ದು, ತಮ್ಮ ನೆಚ್ಚಿನ ತಂಡಗಳ ಆಟ ಕಣ್ತುಂಬಿ ಕೊಳ್ಳಲು ತುದಿಗಾಲಲ್ಲಿ ನಿಂತಿದ್ದಾರೆ.

ವೆಸ್ಟ್ ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯುವ ಪ್ರತಿಷ್ಠಿತ ಟೂರ್ನಿಗೆ ಜೂ.2 ರಂದು ವರ್ಣರಂಜಿತ ಸಮಾರಂಭ ದೊಂದಿಗೆ ಚಾಲನೆ ದೊರೆಯಲಿದ್ದು, ಸ್ಥಳೀಯ ಕಾಲಮಾನ ಬೆಳಗ್ಗೆ 8.30ಕ್ಕೆ (ಭಾರತೀಯ ಕಾಲಮಾನ ಸಂಜೆ 6 ಗಂಟೆ) ಉದ್ಘಾಟನಾ ಸಮಾರಂಭ ನಡೆಯಲಿದೆ. ಉದ್ಘಾಟನಾ ಸಮಾರಂಭದಲ್ಲಿ ಹಲವು ಡಿಜೆಗಳು ಗಾಯಕರು ಪ್ರದರ್ಶನ ನೀಡಲು ಸಿದ್ಧರಾಗಿದ್ದು, ಡೇವಿಡ್ ರಡ್ಡರ್, ರವಿ ಬಿ, ಎರ್ಫಾನ್ ಅಲ್ವೆಸ್, ಡಿಜೆ ಅನಾ ಮತ್ತು ಅಲ್ಟ್ರಾ ಮುಂತಾದವರು ಸಮಾರಂಭಕ್ಕೆ ಮೆರಗು ನೀಡಲಿದ್ದಾರೆ.

ವಿಶ್ವಕಪ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ 20 ತಂಡಗಳು ಭಾಗವಹಿಸುತ್ತಿದ್ದು, ಇದೊಂದು ದಾಖಲೆಯಾಗಿದೆ. ಟೂರ್ನಿಗೆ ಅತಿಥ್ಯ ವಹಿಸುತ್ತಿರುವ ಆತಿಥೇಯ ವೆಸ್ಟ್ ಇಂಡೀಸ್ ಮತ್ತು ಅಮೆರಿಕಾ ನೇರ ಪ್ರವೇಶ ಪಡೆದಿದ್ದರೇ, ಉಳಿದಂತೆ 2022ರ 8 ಅಗ್ರ ತಂಡಗಳಾದ ಇಂಗ್ಲೆಂಡ್, ಪಾಕಿಸ್ಥಾನ, ಭಾರತ, ನ್ಯೂಜಿಲ್ಯಾಂಡ್, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಆಸ್ಟ್ರೇಲಿಯಾ ಮತ್ತು ನೆದರ್ಲೆಂಡ್ಸ್ ನೇರವಾಗಿ ಅರ್ಹತೆ ಪಡೆದಿವೆ. ಉಳಿದ ತಂಡಗಳು ಅರ್ಹತಾ ಸುತ್ತುಗಳಿಂದ ಟೂರ್ನಿ ಪ್ರವೇಶಿಸಿದೆ.



ತಂಡಗಳು

ಗ್ರೂಪ್ 'ಎ': ಭಾರತ, ಪಾಕಿಸ್ಥಾನ, ಅಮೆರಿಕಾ, ಐರ್ಲೆಂಡ್, ಕೆನಡಾ.

ಗ್ರೂಪ್ 'ಬಿ': ಇಂಗ್ಲೆಂಡ್, ಆಸ್ಟ್ರೇಲಿಯ, ನಮೀಬಿಯಾ, ಸ್ಕಾಟ್ಲೆಂಡ್, ಒಮಾನ್.

ಗ್ರೂಪ್ 'ಸಿ': ವೆಸ್ಟ್ ಇಂಡೀಸ್, ನ್ಯೂಜಿಲೆಂಡ್, ಅಫ್ಘಾನಿಸ್ಥಾನ, ಉಗಾಂಡ, ಪಪುವಾ ನ್ಯೂಗಿನಿ.

ಗ್ರೂಪ್ 'ಡಿ': ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಬಾಂಗ್ಲಾದೇಶ, ನೆದರ್ಲೆಂಡ್ಸ್, ನೇಪಾಳ.



ಟಿ20 ವಿಶ್ವಕಪ್ 2024ರ ಸಂಪೂರ್ಣ ವೇಳಾಪಟ್ಟಿ

ಲೀಗ್ ಹಂತ

ದಿನಾಂಕ	ಪಂದ್ಯಗಳು	ಸ್ಥಳ
ಜೂ.1	ಯುಎಸ್ಎ v/s ಕೆನಡಾ	ಡಲ್ಲಾಸ್
ಜೂ.2	ವೆಸ್ಟ್ ಇಂಡೀಸ್ v/s ಪಪುವಾ ನ್ಯೂಗಿನಿಯಾ	ಗಯಾನಾ
ಜೂ.2	ನಮೀಬಿಯಾ v/s ಒಮಾನ್	ಬಾರ್ಬಡೋಸ್
ಜೂ.3	ಶ್ರೀಲಂಕಾ v/s ಸೌತ್ ಆಫ್ರಿಕಾ	ನ್ಯೂಯಾರ್ಕ್
ಜೂ.3	ಅಫ್ಘಾನಿಸ್ತಾನ್ v/s ಉಗಾಂಡ	ಗಯಾನಾ
ಜೂ.4	ಇಂಗ್ಲೆಂಡ್ v/s ಸ್ಕಾಟ್ಲೆಂಡ್	ಬಾರ್ಬಡೋಸ್
ಜೂ.4	ನೆದಲ್ಯಾಂಡ್ v/s ನೇಪಾಳ್	ಡಲ್ಲಾಸ್
ಜೂ.5	**ಭಾರತ v/s ಐರ್ಲೆಂಡ್**	**ನ್ಯೂಯಾರ್ಕ್**
ಜೂ.5	ಪಪುವಾ ನ್ಯೂಗಿನಿಯಾ v/s ಉಗಾಂಡ	ಗಯಾನಾ
ಜೂ.5	ಆಸ್ಟ್ರೇಲಿಯಾ v/s ಒಮಾನ್	ಬಾರ್ಬಡೋಸ್
ಜೂ.6	ಯುಎಸ್ಎ v/s ಪಾಕಿಸ್ತಾನ	ಡಲ್ಲಾಸ್
ಜೂ.6	ನಮೀಬಿಯಾ v/s ಸ್ಕಾಟ್ಲೆಂಡ್	ಬಾರ್ಬಡೋಸ್
ಜೂ.7	ಕೆನಡಾ v/s ಐರ್ಲೆಂಡ್	ನ್ಯೂಯಾರ್ಕ್
ಜೂ.7	ನ್ಯೂಝಿಲೆಂಡ್ v/s ಅಫ್ಘಾನಿಸ್ತಾನ್	ಗಯಾನಾ
ಜೂ.7	ಶ್ರೀಲಂಕಾ v/s ಬಾಂಗ್ಲಾದೇಶ್	ಡಲ್ಲಾಸ್
ಜೂ.8	ನೆದರ್ಲ್ಯಾಂಡ್ಸ್ v/s ಸೌತ್ ಆಫ್ರಿಕಾ	ನ್ಯೂಯಾರ್ಕ್
ಜೂ.8	ಆಸ್ಟ್ರೇಲಿಯಾ v/s ಇಂಗ್ಲೆಂಡ್	ಬಾರ್ಬಡೋಸ್
ಜೂ.8	ವೆಸ್ಟ್ ಇಂಡೀಸ್ v/s ಉಗಾಂಡ	ಗಯಾನಾ
ಜೂ.9	**ಭಾರತ v/s ಪಾಕಿಸ್ತಾನ್**	**ನ್ಯೂಯಾರ್ಕ್**
ಜೂ.9	ಒಮಾನ್ v/s ಸ್ಕಾಟ್ಲೆಂಡ್	ಆಂಟಿಗುವಾ
ಜೂ.10	ಸೌತ್ ಆಫ್ರಿಕಾ v/s ಬಾಂಗ್ಲಾದೇಶ್	ನ್ಯೂಯಾರ್ಕ್
ಜೂ.11	ಪಾಕಿಸ್ತಾನ v/s ಕೆನಡಾ	ನ್ಯೂಯಾರ್ಕ್
ಜೂ.11	ಶ್ರೀಲಂಕಾ v/s ನೇಪಾಳ	ಲಾಡರ್ಹಿಲ್
ಜೂ.11	ಆಸ್ಟ್ರೇಲಿಯಾ v/s ನಮೀಬಿಯಾ	ಆಂಟಿಗುವಾ
ಜೂ.12	**ಯುಎಸ್ಎ v/s ಭಾರತ**	**ನ್ಯೂಯಾರ್ಕ್**
ಜೂ.12	ವೆಸ್ಟ್ ಇಂಡೀಸ್ v/s ನ್ಯೂಝಿಲೆಂಡ್	ಟ್ರಿನಿಡಾಡ್&ಟೊಬಾಗೊ
ಜೂ.13	ಇಂಗ್ಲೆಂಡ್ v/s ಒಮಾನ್	ಆಂಟಿಗುವಾ
ಜೂ.13	ಬಾಂಗ್ಲಾದೇಶ್ v/s ನೆದರ್ಲೆಂಡ್ಸ್	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ.13	ಅಫ್ಘಾನಿಸ್ತಾನ್ v/s ಪಪುವಾ ನ್ಯೂಗಿನಿಯಾ	ಟ್ರಿನಿಡಾಡ್ & ಟೊಬಾಗೊ
ಜೂ.14	ಯುಎಸ್ಎ v/s ಐರ್ಲೆಂಡ್	ಲಾಡರ್ಹಿಲ್
ಜೂ.14	ಸೌತ್ ಆಫ್ರಿಕಾ v/s ನೇಪಾಳ –	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ.14	ನ್ಯೂಝಿಲೆಂಡ್ v/s ಉಗಾಂಡ	ಟ್ರಿನಿಡಾಡ್ & ಟೊಬಾಗೊ
ಜೂ.15	**ಭಾರತ v/s ಕೆನಡಾ**	**ಲಾಡರ್ಹಿಲ್**
ಜೂ.15	ನಮೀಬಿಯಾ v/s ಇಂಗ್ಲೆಂಡ್	ಆಂಟಿಗುವಾ
ಜೂ.15	ಆಸ್ಟ್ರೇಲಿಯಾ v/s ಸ್ಕಾಟ್ಲೆಂಡ್	ಸೇಂಟ್ ಲೂಸಿಯಾ
ಜೂ.16	ಪಾಕಿಸ್ತಾನ್ v/s ಐರ್ಲೆಂಡ್	ಲಾಡರ್ಹಿಲ್
ಜೂ.16	ಬಾಂಗ್ಲಾದೇಶ v/s ನೇಪಾಳ	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ.16	ಶ್ರೀಲಂಕಾ v/s ನೆದರ್ಲ್ಯಾಂಡ್ಸ್	ಸೇಂಟ್ ಲೂಸಿಯಾ
ಜೂ.17	ನ್ಯೂಝಿಲೆಂಡ್ v/s ಪಪುವಾ ನ್ಯೂಗಿನಿಯಾ	ಟ್ರಿನಿಡಾಡ್ & ಟೊಬಾಗೊ
ಜೂ.17	ವೆಸ್ಟ್ ಇಂಡೀಸ್ v/s ಅಫ್ಘಾನಿಸ್ತಾನ್	ಸೇಂಟ್ ಲೂಸಿಯಾ

ಸೂಪರ್- 8 ಪಂದ್ಯಗಳ ವೇಳಾಪಟ್ಟಿ

ದಿನಾಂಕ	ಪಂದ್ಯಗಳು	ಸ್ಥಳ
ಜೂ.19	A2 vs D1	ಆಂಟಿಗುವಾ ಮತ್ತು ಬಾರ್ಬುಡಾ
ಜೂ.19	B1 vs C2	ಸೇಂಟ್ ಲೂಸಿಯಾ
ಜೂ.20	C1 vs A1	ಬಾರ್ಬಡೋಸ್
ಜೂ.20	B2 vs D2	ಆಂಟಿಗುವಾ
ಜೂ.21	B1 vs D1	ಸೇಂಟ್ ಲೂಸಿಯಾ
ಜೂ.21	A2 vs C2	ಬಾರ್ಬಡೋಸ್
ಜೂ.22	A1 vs D2	ಆಂಟಿಗುವಾ ಮತ್ತು ಬಾರ್ಬುಡಾ
ಜೂ.22	C1 vs B2	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್ಸ್
ಜೂ.23	A2 vs B1	ಬಾರ್ಬಡೋಸ್
ಜೂ.23	C2 vs D1	ಆಂಟಿಗುವಾ ಮತ್ತು ಬಾರ್ಬುಡಾ
ಜೂ.24	B2 vs A1	ಸೇಂಟ್ ಲೂಸಿಯಾ
ಜೂ.24	C1 vs D2	ಸೇಂಟ್ ವಿನ್ಸೆಂಟ್ ಮತ್ತು ಗ್ರೆನಡೈನ್

ನಾಕ್‌ಔಟ್ ಪಂದ್ಯಗಳ ವೇಳಾಪಟ್ಟಿ

ಜೂ.26	ಸೆಮಿಫೈನಲ್- 1	ಗಯಾನಾ
ಜೂ.27	ಸೆಮಿಫೈನಲ್- 2	ಟ್ರಿನಿಡಾಡ್ ಮತ್ತು ಟೊಬಾಗೊ
ಜೂ.29	ಫೈನಲ್ ಪಂದ್ಯ	ಬಾರ್ಬಡೋಸ್

ಟೂರ್ನಿ ನಡೆಯುವ ಮಾದರಿ

ವಿಶ್ವಕಪ್ ಪಂದ್ಯಾವಳಿಯಲ್ಲಿ ಪಾಲ್ಗೊಂಡಿರುವ ತಂಡಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದು ತಂಡ ಎದುರಾಳಿ ವಿರುದ್ಧ ಒಂದು ಪಂದ್ಯವಾಡಲಿದೆ. ಗ್ರೂಪ್ ವಿಭಾಗದಲ್ಲಿ ತಂಡವೊಂದಕ್ಕೆ 4 ಪಂದ್ಯಗಳ ಅವಕಾಶ ಲಭಿಸಲಿದ್ದು, ಪ್ರತಿ ವಿಭಾಗದ 2 ಅಗ್ರ ತಂಡಗಳು ಸೂಪರ್ 8 ಹಂತಕ್ಕೆ ಪ್ರವೇಶಿಸುತ್ತವೆ. ಇಲ್ಲಿ ಮತ್ತೆ 4 ತಂಡಗಳ 2 ಗ್ರೂಪ್ ಇರುತ್ತದೆ. ಪ್ರತಿಯೊಂದು ತಂಡ 3 ಪಂದ್ಯಗಳನ್ನು ಆಡಬೇಕು. ಪ್ರತಿ ಗ್ರೂಪ್‌ನಲ್ಲಿ ಮೊದಲೆರಡು ಸ್ಥಾನ ಪಡೆದ ತಂಡಗಳಿಗೆ ಸೆಮಿಫೈನಲ್ ಅರ್ಹತೆ ಲಭಿಸಲಿದೆ.

ಟೈ ಆದರೆ ಸೂಪರ್ ಓವರ್: ಪಂದ್ಯ ಟೈ ಆದರೆ ಸೂಪರ್ ಓವರ್ ಮೂಲಕ ಫಲಿತಾಂಶ ನಿರ್ಧರಿಸಲಾಗುತ್ತದೆ. ಸೂಪರ್ ಓವರ್ ಕೂಡ ಟೈ ಆದರೆ ಇನ್ನೊಂದು ಸೂಪರ್ ಓವರ್ ಇರಲಿದೆ. ಹೀಗೆ ಸ್ಪಷ್ಟ ಫಲಿತಾಂಶ ಲಭಿಸುವ ತನಕ ಸೂಪರ್ ಓವರ್ ಜಾರಿಯಲ್ಲಿರುತ್ತದೆ.

ಮಳೆ ಬಂದರೆ ಓವರ್ ಕಡಿತ: ಮಳೆ ಹಾಗೂ ಇನ್ನಿತರ ಪ್ರತಿಕೂಲ ಹವಾಮಾನದಿಂದ ಪಂದ್ಯಕ್ಕೆ ಅಡಚಣೆಯಾದರೆ ಗ್ರೂಪ್ ಹಾಗೂ ಸೂಪರ್-8 ಹಂತದಲ್ಲಿ ಕನಿಷ್ಠ 5 ಓವರ್‌ಗಳ ಪಂದ್ಯದ ಮೂಲಕ ಫಲಿತಾಂಶ ನಿರ್ಧರಿಸಲಾಗುವುದು. ಸೆಮಿಫೈನಲ್ಸ್ ಮತ್ತು ಫೈನಲ್‌ನಲ್ಲಿ ಸ್ಪಷ್ಟ ಫಲಿತಾಂಶಕ್ಕೆ ಕನಿಷ್ಠ 10 ಓವರ್‌ನ ಪಂದ್ಯ ಆಡಿಸಲಾಗುವುದು.

ಹೆಚ್ಚುವರಿ ಅವಧಿ, ಮೀಸಲು ದಿನ: ಮೊದಲ ಸೆಮಿಫೈನಲ್ ಹಾಗೂ ಫೈನಲ್ ಪಂದ್ಯಕ್ಕೆ ಮೀಸಲು ದಿನ ಇರಲಿದೆ. ಎರಡೂ ಸೆಮಿಫೈನಲ್ ಪಂದ್ಯಗಳಿಗೆ 250 ನಿಮಿಷಗಳ ಹೆಚ್ಚುವರಿ ಅವಧಿ ನೀಡಲಾಗುವುದು. ಜೂ.26ರ ಸೆಮಿಫೈನಲ್ ಪಂದ್ಯಕ್ಕೆ ಅದೇ ದಿನ 60 ನಿಮಿಷಗಳ ಹೆಚ್ಚುವರಿ ಅವಧಿ ಹಾಗೂ ಜೂ. 27ರಂದು ಉಳಿದ 190 ನಿಮಿಷಗಳ ಅವಧಿ ನೀಡಲಾಗುವುದು. ಆದರೆ ಜೂ.27ರ 2ನೇ ಸೆಮಿಫೈನಲ್ ಪಂದ್ಯಕ್ಕೆ ಮೀಸಲು ದಿನ ಇಲ್ಲ. ಇದರ ಬದಲು 2ನೇ ಸೆಮಿಫೈನಲ್ ಪಂದ್ಯಕ್ಕೆ ಅಂದೇ 250 ನಿಮಿಷಗಳ ಹೆಚ್ಚುವರಿ ಅವಧಿ ಇರಿಸಲಾಗಿದೆ. ಜೂ.29ರ ಫೈನಲ್ ಪಂದ್ಯಕ್ಕೆ ಜೂ.30 ಮೀಸಲು ದಿನವಾಗಿದೆ.

ಕ್ರೀಡಾಂಗಣದ ವಿವರ: ವಿಶ್ವಕಪ್ ಪಂದ್ಯಾವಳಿಯು ವೆಸ್ಟ್ ಇಂಡೀಸ್‌ನ ಗಯಾನ, ನ್ಯಾಶನಲ್ ಸ್ಟೇಡಿಯಂ ಪ್ರಾವಿಡೆನ್ಸ್, ಕೆನ್ಸಿಂಗ್ಟನ್ ಓವಲ್, ಬ್ರಿಜ್‌ಟೌನ್, ಬಾರ್ಬಡಾಸ್, ಸರ್ ವಿವಿಯನ್ ರಿಚರ್ಡ್ಸ್ ಸ್ಟೇಡಿಯಂ, ನಾರ್ತ್ ಸೌಂಡ್, ಆಂಟಿಗುವಾ, ಬ್ರಿಯಾನ್ ಲಾರಾ ಕ್ರಿಕೆಟ್ ಅಕಾಡೆಮಿ, ಟರೂಬ, ಟ್ರಿನಿಡಾಡ್ ಆಂಡ್ ಟೊಬಾಗೊ, ಅರ್ನಾಸ್ ವೇಲ್ ಗ್ರೌಂಡ್, ಅರ್ನಾಸ್ ವೇಲ್, ಸೇಂಟ್ ವಿನ್ಸೆಂಟ್, ಡ್ಯಾರನ್ ಸ್ಯಾಮಿ ನ್ಯಾಶನಲ್ ಕ್ರಿಕೆಟ್ ಸ್ಟೇಡಿಯಂ, ಗ್ರಾಸ್ ಐಲೆಟ್, ಸೇಂಟ್ ಲೂಸಿಯಾ, ಅಮೆರಿಕಾದ ನಾಸಾವ್ ಕೌಂಟಿ ಇಂಟರ್‌ನ್ಯಾಶನಲ್ ಕ್ರಿಕೆಟ್ ಸ್ಟೇಡಿಯಂ, ನ್ಯೂಯಾರ್ಕ್, ಗ್ರ್ಯಾಂಡ್ ಪ್ರೈರಿ ಸ್ಟೇಡಿಯಂ, ಡಲ್ಲಾಸ್, ಸೆಂಟ್ರಲ್ ಬ್ರೊವಾರ್ಡ್ ಪಾರ್ಕ್ ಆಂಡ್ ಬ್ರೊವಾರ್ಡ್ ಕೌಂಟಿ ಸ್ಟೇಡಿಯಂ, ಫ್ಲೋರಿಡಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಅತೀ ಹೆಚ್ಚು ರನ್



ವಿರಾಟ್ ಕೊಹ್ಲಿ (1141 ರನ್)

ಹೆಚ್ಚು ಶತಕ



ಕ್ರಿಸ್ ಗೇಲ್ (2 ಶತಕ)

ಅತೀ ಹೆಚ್ಚು ವಿಕೆಟ್



ಶಕೀಬ್ ಅಲ್ ಹಸನ್ (47)

ಪಂದ್ಯದಲ್ಲಿ ಹೆಚ್ಚು ರನ್



ಮೆಕುಲಮ್ (123 ರನ್)

ಬೆಸ್ಟ್ ಬೌಲಿಂಗ್



ಅಜಂತಾ ಮೆಂಡಿಸ್ (6/8)

ಅತೀ ಹೆಚ್ಚು ಕ್ಯಾಚ್



ಎಬಿ ಡಿವಿಲಿಯರ್ಸ್ (23)

ತಂಡದ ಬೃಹತ್ ಮೊತ್ತ: ಶ್ರೀಲಂಕಾ (260ರನ್)

ಕಡಿಮೆ ಮೊತ್ತ: ನೆದಲ್ಯಾಂಡ್ಸ್ (39ರನ್)

ಇಂಡೋ-ಪಾಕ್ ಮುಖಾಮುಖಿ



ದಕ್ಷಿಣ ಆಫ್ರಿಕಾದಲ್ಲಿ 2007ರಲ್ಲಿ ನಡೆದ ಚೊಚ್ಚಲ ಆವೃತ್ತಿಯಲ್ಲಿ ಮಹೇಂದ್ರ ಸಿಂಗ್ ಧೋನಿ ನಾಯಕತ್ವದಲ್ಲಿ ಭಾರತ ವಿಶ್ವಕಪ್ ಟ್ರೋಫಿ ಜಯಸಿದ್ದು ಬಿಟ್ಟರೇ, ಕಳೆದ 17 ವರ್ಷಗಳಿಂದ ಮತ್ತೊಮ್ಮೆ ಟ್ರೋಫಿ ಜಯಿಸಲು ಸಾಧ್ಯವಾಗಿಲ್ಲ. ಹೀಗಾಗಿ ಎಂದಿನಂತೆ ಈ ಬಾರಿ ಟ್ರೋಫಿ ಗೆಲ್ಲುವ ಫೇವರಿಟ್ ತಂಡವಾಗಿ ಪಂದ್ಯಾವಳಿಯಲ್ಲಿ ಕಣಕ್ಕಿಳಿದಿದೆ.

ಭಾರತ ಜೂ.5 ರಂದು ನಡೆಯುವ ಐರ್ಲೆಂಡ್ ವಿರುದ್ಧ ಸೆಣಸಾಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದ್ದು, ಜೂ.9ರಂದು ನಡೆಯುವ ಹೈವೋಲ್ಟೇಜ್ ಪಂದ್ಯದಲ್ಲಿ ಬದ್ಧ ವೈರಿ ಪಾಕಿಸ್ತಾನದ ವಿರುದ್ಧ ಕಾದಾಡಲಿದೆ. ಈ ಪಂದ್ಯ ವೀಕ್ಷಣೆಗೆ ಕೋಟ್ಯಾಂತರ ಅಭಿಮಾನಿಗಳು ತುದಿಗಾಲಲ್ಲಿ ನಿಲ್ಲಲ್ಲಿ ನಿಂತಿದ್ದು, ಭಾರತವೇ ಪಂದ್ಯ ಜಯಿಸುವ ನೆಚ್ಚಿನ ತಂಡವಾಗಿದೆ.

ಭಾರತದ ವೇಳಾಪಟ್ಟಿ
- ಜೂ.5- ಭಾರತ/ಐರ್ಲೆಂಡ್
- ಜೂ.9- ಭಾರತ/ಪಾಕಿಸ್ತಾನ
- ಜೂ.12- ಭಾರತ-ಅಮೆರಿಕಾ
- ಜೂ.15- ಭಾರತ-ಕೆನಡಾ

ವಿಶ್ವಕಪ್ ಪಂದ್ಯಾವಳಿಗಳಲ್ಲಿ ಪಾಕಿಸ್ತಾನದ ವಿರುದ್ಧ ಮೇಲುಗೈ ಸಾಧಿಸಿರುವ ಭಾರತ ಈ ಬಾರಿಯೂ ಅದನ್ನು ಮುಂದುವರೆಸುವ ಇರಾದೆಯಲ್ಲಿದೆ. ಇದುವರೆಗೂ ಭಾರತ ಹಾಗೂ ಪಾಕಿಸ್ತಾನ ತಂಡಗಳು ಒಟ್ಟು 7 ಬಾರಿ ಮುಖಾಮುಖಿಯಾಗಿದ್ದು, ಈ ಪೈಕಿ ಭಾರತ 5 ಬಾರಿ ಜಯ ಗಳಿಸಿದ್ದರೇ, ಪಾಕಿಸ್ತಾನ ಒಮ್ಮೆ ಹಾಗೂ ಮತ್ತೊಂದು ಪಂದ್ಯ ಟೈನಲ್ಲಿ ಅಂತ್ಯಗೊಂಡಿದೆ.

ಅಮೆರಿಕಾದಲ್ಲಿ ಇಂದು ಆರಂಭ, ಭಾರತದಲ್ಲಿ ನಾಳೆ ವೀಕ್ಷಣೆ

ನವದೆಹಲಿ: ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ಟಿ-20 ವಿಶ್ವಕಪ್ 2024 ಕ್ರಿಕೆಟ್ ಪಂದ್ಯಾವಳಿ ಶನಿವಾರ (ಜೂ.1) ಸಂಜೆ 7:30 ಕ್ಕೆ ಪ್ರಾರಂಭವಾಗಲಿದೆ. ಆದರೆ ಅಮೆರಿಕಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಪಂದ್ಯಗಳ ಸಮಯ ಭಾರತದ ಸಮಯಕ್ಕಿಂತ ಭಿನ್ನವಾಗಿದೆ. ಹೀಗಾಗಿ ಜೂ.1 ರಂದು, ಯುಎಸ್ಎ ಮತ್ತು ಕೆನಡಾ ನಡುವಿನ ಮೊದಲ ಪಂದ್ಯವು ರಾತ್ರಿ 7.30ಕ್ಕೆ ನಡೆಯಲಿದ್ದು, ಈ ಪಂದ್ಯವು ಜೂ.2 ರಂದು ಬೆಳಗ್ಗೆ 6ಕ್ಕೆ ಭಾರತದಲ್ಲಿ ನೋಡಬೇಕಾಗುತ್ತದೆ.

ಈ ಪಂದ್ಯಾವಳಿಯು ಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಾದ್ಯಂತ ನೇರ ಪ್ರಸಾರವಾಗಲಿದ್ದು, ಈ ಪಂದ್ಯಗಳು ಸ್ಟಾರ್ ಸ್ಪೋರ್ಟ್ಸ್‌ನಲ್ಲಿ ನೇರ ಪ್ರಸಾರವಾಗಲಿದೆ. ಇದನ್ನು ಡಿಸ್ನಿ+ ಹಾಟ್‌ಸ್ಟಾರ್‌ನಲ್ಲಿ ಲೈವ್ ಆಗಿ ವೀಕ್ಷಿಸಬಹುದು. ಟೀಮ್ ಇಂಡಿಯಾ ತನ್ನ ಟಿ20 ವಿಶ್ವಕಪ್ ಪ್ರಯಾಣವನ್ನು ಜೂ.5 ರಂದು ಐರ್ಲೆಂಡ್ ವಿರುದ್ಧ ಮೊದಲು ಪ್ರಾರಂಭಿಸಲಿದೆ. ಪಂದ್ಯ ರಾತ್ರಿ 8 ಗಂಟೆಗೆ ಆರಂಭವಾಗಲಿದೆ.

ಭಾರತ ತಂಡದ ವಿವರ

ರೋಹಿತ್ ಶರ್ಮಾ (ನಾಯಕ), ಹಾರ್ದಿಕ್ ಪಾಂಡ್ಯ (ಉಪನಾಯಕ), ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ರಿಷಬ್ ಪಂತ್ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್, ಶಿವಂ ದುಬೆ, ರವೀಂದ್ರ ಜಡೇಜಾ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಯುಜುವೇಂದ್ರ ಚಹಾಲ್, ಅರ್ಶದೀಪ್ ಸಿಂಗ್, ಜಸ್ಪ್ರೀತ್ ಬುಮ್ರಾ ಮತ್ತು ಮೊಹಮ್ಮದ್ ಸಿರಾಜ್ ಮತ್ತು ಶುಭಂ ಗಿಲ್, ರಿಂಕು ಸಿಂಗ್, ಖಲೀಲ್ ಅಹ್ಮದ್ ಮತ್ತು ಅವೇಶ್ ಖಾನ್.

ವಾರಭವಿಷ್ಯ



2.6.2024 ರಿಂದ 8.6.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ವೃಷಭ ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಮೇಷ, ಬುಧ-ವೃಷಭ ಗುರು-ವೃಷಭ ಶುಕ್ರ-ವೃಷಭ ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ೧ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಈ ವಾರದಲ್ಲಿ ನೀವು ದೊಡ್ಡ ವ್ಯವಹಾರಗಳಿಗೆ ಪ್ರಯತ್ನಿಸ ಬೇಡಿ. ರಾಜಕೀಯದವರಿಗೆ ಹಿನ್ನಡೆ ಉಂಟಾಗುವುದು. ಪ್ರಯಾಣ ಸಮಯದಲ್ಲಿ ಸಮಸ್ಯೆ. ಸರ್ಕಾರಿ ನೌಕರರಿಗೆ ಅನುಕೂಲವಿದೆ. ದೂರ ಸ್ಥಳಕ್ಕೆ ವರ್ಗವಾದರೂ ಪ್ರಮೋಷನ್ ಸಂಭವ. ಗುಪ್ತ ಜನರಿಂದ ತೊಂದರೆ. ಭೂನಿಧಿ ಹೆಸರಲ್ಲಿ ಮೋಸ ಮಾಡುವವರಿದ್ದಾರೆ. ಜಾಗೃತರಾಗಿರಿ. ಶ್ರೀಮತಿಗೆ ಅನಾರೋಗ್ಯ ಕಾಡಬಹುದು.

–ಶ್ರೀ ವಿನಾಯಕನಿಗೆ ಗರಿಕೆ ಸಮರ್ಪಣೆ. ಶುಭ ಸಂಖ್ಯೆ-3

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಿಮ್ಮ ರಾಶಿಯಲ್ಲಿರುವ ಗುರು ಪೀಡಿಸುತ್ತಾನೆ. ಕೋರ್ಟು, ಕಚೇರಿ ಕೆಲಸದಲ್ಲಿ ಹಿನ್ನಡೆ ಉಂಟಾಗುತ್ತದೆ. ಹಣಕಾಸು ಮುಗ್ಗಟ್ಟು ನಿವಾರಣೆ ಆಗುತ್ತದೆ. ಮಿತ್ರರು ಸಮಯಕ್ಕೆ ಒದಗುತ್ತಾರೆ. ವಾರದ ಕಡೆಗೆ ಶುಭ ಚಂದ್ರನಿಂದ ಹೊಸ ವಾಹನ ಖರೀದಿ ಯೋಗವಿದೆ. ವಿದೇಶ ಪ್ರವಾಸದ ಕನಸು ನನಸಾಗಬಹುದು. ಧರ್ಮಕಾರ್ಯ ಮಾಡುವುದರಿಂದ ಪ್ರಸಿದ್ಧಿಗೆ ಬರುವಿರಿ.

– ಶ್ರೀ ಅಪರಾಜಿತಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಈ ವಾರ ಹೊಸ ಉದ್ಯೋಗ ಮಾಡುವುದರಿಂದ ಧನ ಲಾಭವಿದೆ. ಸಾಲಬಾಧೆ ನಿವಾರಣೆಗೆ ಪ್ರಯತ್ನಿಸಿ. ಟ್ರಾವೆಲ್ ಏಜೆನ್ಸಿ ಹಾಗೂ ವಿದ್ಯಾ ಸಂಸ್ಥೆಗಳಿಗೆ ಬೇಡಿಕೆ ಹೆಚ್ಚುವುದು. ಜೊತೆಗೆ ಹೇರಳ ಧನ ಸಂಪಾದನೆ ಆಗುವುದು. ವ್ಯಯ ಭಾವದಲ್ಲಿ ಗ್ರಹಯುದ್ಧ ನಡೆದಿದ್ದು, ಪಾರ್ಟ್ನರ್ ವ್ಯಾಪಾರದಲ್ಲಿ ಮೋಸ ಉಂಟಾಗುತ್ತದೆ. ಪ್ರೀತಿ-ಪ್ರಣಯ ವಿಷಯಗಳಲ್ಲಿ ವಿಘ್ನಗಳು.

– ಶ್ರೀರಾಮ ರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ತೀರ್ಥಯಾತ್ರೆ ಮಾಡುವ ಯೋಗವಿದೆ. ರಾಜಕೀಯದಲ್ಲಿ ಉಂಟಾಗಿದ್ದ ಅಡೆತಡೆಗಳು ನಿವಾರಣೆ ಆಗುವುದು. ಭೂಮಿ ಮಾರಾಟದ ಮಾತುಕತೆ ಸಕಾರಾತ್ಮಕವಾಗಿ ಮುಂದುವರೆಯುವುದು. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ಜರುಗುವುದು. ಈ ಹಿಂದೆ ಕೊಟ್ಟಿದ್ದ ಹಣ ವಾಪಸ್ಸು ಬಂದೀತು. ಬಂಗಾರದ ಒಡವೆ ಖರೀದಿಯ ಯೋಗವಿದೆ.

– ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ-9

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಬರೀ ಕಷ್ಟ ಪಡುವುದರಿಂದಲೇ ಜಯ-ಸುಖವನ್ನು ಸಾಧಿಸಲು ಆಗುವುದಿಲ್ಲ. ದೈವ ಸಹಾಯವೂ ಬೇಕಾಗುತ್ತದೆ. ಮಾಡುವ ಕೆಲಸವನ್ನು ಶ್ರದ್ಧಾ ಭಕ್ತಿಗಳಿಂದ ನಿರ್ವಹಿಸಿ ನಿಶ್ಚಯವಾಗಿ ಜಯ ದೊರಕುವುದು. ಸರ್ಕಾರಿ ನೌಕರರು ವರ್ಗಾವಣೆ ನಿಮಿತ್ತ ವಾಸ್ತವ್ಯ ಬದಲಾಯಿಸಬೇಕಾಗಬಹುದು. ರಾಹು-ಕೇತು ಶುಭರಿಲ್ಲ, ನೀವು ಹಣದಾಸೆಗೆ ಒಳಪಟ್ಟು ಸಮಾಜ ಬಾಹಿರ ಕೃತ್ಯಗಳಿಂದ ದೂರವಿರಿ.

– ಶ್ರೀ ನವಗ್ರಹ ದರ್ಶನ ಸ್ತುತಿ. ಶುಭ ಸಂಖ್ಯೆ-8

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ವಾರದಾರಂಭಕ್ಕೆ ವಿದ್ವಜ್ಜನರ ಭೇಟಿ, ಸುವಾರ್ತೆಗಳ ಸಂವಾದ. ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಆದರೆ ದುಂದು ವೆಚ್ಚಗಳಿಂದ ಪರ್ಸ್ ಖಾಲಿ. ಯಾವುದೇ ಬೇಕು, ಯಾವುದೇ ಬೇಡ ಎಂಬ ಪರ್ಯಾಪ್ತ ಪ್ರಜ್ಞೆ ಇಲ್ಲದೆ ತೊಂದರೆಗೆ ಒಳಗಾಗುವಿರಿ. ಗುಪ್ತ ಪ್ರೇಮ ಸಂಬಂಧಗಳಿಂದ ತೊಂದರೆ ಎದುರಿಸಬೇಕಾದೀತು. ನಂಬಲರ್ಹವಲ್ಲದವರೊಡನೆ ಹಣಕಾಸು ವ್ಯವಹಾರ ಬೇಡ.

– ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-1

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಏಕಾಗ್ರತೆ ಹಾಗೂ ಪರಿಶ್ರಮದಿಂದ ಜೀವನ ಪಥದಲ್ಲಿ ಯಶಸ್ಸನ್ನು ಗಳಿಸುವಿರಿ. ನಿಮ್ಮ ರಾಶ್ಯಾಧಿಪತಿಯ ಸಂಚಾರ ಶುಭವಿದ್ದು, ಕೈತುಂಬಾ ಹಣ ಬರುವುದು. ಐಷಾರಾಮಿ ವಸ್ತುಗಳನ್ನು ಖರೀದಿಸುವಿರಿ. ಸುದ್ದಿ ಸಂಚಾಲಕರಿಗೂ, ಮಾಧ್ಯಮದವರಿಗೂ ಅಪಕೀರ್ತಿ ಉಂಟಾದೀತು. ನಿಮ್ಮ ಸಹವಾಸ ಸಂಭಾವಿತರೊಡನೆ ಇರಲಿ, ಅನ್ಯಥಾ ಆರಕ್ಷಕ ಠಾಣೆಗೆ ಭೇಟಿ ಅನಿವಾರ್ಯವಾದೀತು.

– ಶ್ರೀ ಪದ್ಮಾವತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ

ಬೃಹಸ್ಪತಿ ಎಂಬ ಹೆಸರಿನ ಶುಭ ಗ್ರಹದ ದೃಷ್ಟಿ ನಿಮ್ಮ ರಾಶಿಯ ಮೇಲೆ ಬಂದಾಗಿದೆ. ಇದೇ ಸಮಯದಲ್ಲಿ ಆಧ್ಯಾತ್ಮ ಗುರುಗಳ ದರ್ಶನದಿಂದ ಗುರಿ ಕಾಣುತ್ತದೆ. 'ಶ್ರದ್ಧಾವಾನ್ ಲಭತೇ ಫಲಂ' ಎಂಬ ಆರ್ಯೋಕ್ತಿಯಂತೆ ನೀವು ತೊಡಗಿಸಿಕೊಂಡ ಕೆಲಸದಲ್ಲಿ ತನ್ಮಯತೆ ಇರಲಿ, ಶುಭ ಫಲ ನಿಮ್ಮದಾಗಲಿದೆ. ವಾರಾಂತ್ಯಕ್ಕೆ ಆಪ್ತ ಬಂಧುಗಳ ಮಿಲನ ಸಂತಸ ತರಲಿದೆ.

– ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ-5

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಈ ವಾರ ನಿಮ್ಮ ವಿವೇಚನಾ ಶಕ್ತಿ ಕುಂಠಿತವಾದರೂ ಶುಭ ಫಲ ಹೊಂದಲು ಪ್ರಬಲ ಗ್ರಹ ಶನಿದೇವ ಶುಭ ಸಂಕೇತ ನೀಡುತಲಿದ್ದಾರೆ. ಉಚ್ಚ ಚಂದ್ರನ ಸಂಚಾರವು ಕೈ ತುಂಬ ಹಣವನ್ನು ನೀಡಲಿದೆ. ಪಶು ಸಂಗೋಪನೆ ಹಾಗೂ ಕೃಷಿ ಉಪಕರಣ ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ರಾಹು ಬಾಧಕನಾಗಿದ್ದು ನಿಮ್ಮ ಆಕ್ರಮಣಕಾರಿ ಬುದ್ಧಿಯಿಂದ ಶತ್ರುಗಳ ಉಪಟಳ ಹೆಚ್ಚುವುದು.

– ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-4

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ದೈನಂದಿನ ಕೆಲಸಗಳು ಮಾಮೂಲಿನಂತೆ ನಡೆಯುವುದು. ಹಣಕಾಸು ವಿಚಾರದಲ್ಲಿ ಆತಂಕ ಪಡುವ ಅಗತ್ಯವಿಲ್ಲ. ಭಾಗ್ಯವಿದ್ದಂತೆ ಫಲ, ವಿದ್ಯೆ, ಅಧಿಕಾರ ಯಾವುದೂ ಪ್ರಯೋಜನಕ್ಕೆ ಬಾರದು. ನ್ಯಾಯಾಲಯದ ವಿಚಾರಗಳು ನಿಮಗೆ ಅನುಕೂಲಕರವಾಗಿ ಇರುವುದಿಲ್ಲ. ಹಿರಿಯರ ಮಾತನ್ನು ಗೌರವಿಸಿ ನಡೆದರೆ ಕಾರ್ಯ ಜಯ. ದೂರ ಪ್ರಯಾಣಗಳನ್ನು ಮುಂದೂಡಿ. ವಾರದ ಕಡೆಗೆ ಆಧ್ಯಾತ್ಮದತ್ತ ಒಲವು ಮೂಡುವುದು.

– ಶ್ರೀ ವೆಂಕಟೇಶ್ವರನಿಗೆ ತುಳಸಿ ಸಮರ್ಪಣೆ. ಶುಭ ಸಂಖ್ಯೆ-7

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಆರ್ಥಿಕ ಪರಿಸ್ಥಿತಿಯಲ್ಲಿ ಕೊಂಚ ಸುಧಾರಣೆ ಕಂಡು ಬರುವುದು. ವೃತ್ತಿಪರ ಕೆಲಸಗಳ ಹೊರೆ ಜಾಸ್ತಿಯಾಗಿ ದೇಹಾಯಾಸ. ಕುಟುಂಬ ಸದಸ್ಯರ ನೆರವಿನಿಂದ ಕೆಲವು ಮಹತ್ವದ ಕಾರ್ಯಗಳು ಪೂರ್ಣಗೊಳ್ಳಲಿವೆ. ಕಚೇರಿಯಲ್ಲಿ ಸಹೋದ್ಯೋಗಿಗಳಿಂದ ಪ್ರತಿಕೂಲ ವಾತಾವರಣ ಉಂಟಾಗುವುದು. ವಾರಾಂತ್ಯಕ್ಕೆ ಅನಿರೀಕ್ಷಿತ ಖರ್ಚುಗಳು. ಸಾಲ ಮಾಡಬೇಕಾದ ಪ್ರಸಂಗ ಉಂಟಾದೀತು.

– ಶ್ರೀ ಆಂಜನೇಯ ಸ್ತುತಿ. ಶುಭ ಸಂಖ್ಯೆ-2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಕೆಲವೊಮ್ಮೆ ನಾವು ಬಯಸದೇ ಇದ್ದರೂ ಕೌಟುಂಬಿಕ ಘರ್ಷಣೆಗಳು ನಡೆದು ಬಿಡುತ್ತವೆ. ನೀವು ತಾಳ್ಮೆಗೆಡಲು ನಿಮ್ಮ ರಾಶಿಯಲ್ಲಿ ಸ್ಥಿತನಿರುವ ರಾಹು ಗ್ರಹವೇ ಕಾರಣ. ಕೃತ್ರಿಮ ಗೆಳೆಯರ ಬಗ್ಗೆ ಎಚ್ಚರಿಕೆಯಿಂದ ಇರಿ. ಸಾಧ್ಯವಾದಷ್ಟು ಅನಾವಶ್ಯಕ ಕೆಲಸಗಳನ್ನು ಒಪ್ಪಿಕೊಳ್ಳಬೇಡಿ. ವಾಹನ ಚಲಿಸುವಾಗ ಜಾಗ್ರತೆ ತಪ್ಪಿದರೆ ಜಾರುತ್ತೀರ. ಶೀತಬಾಧೆ ಕಾಡಬಹುದು.

– ಶ್ರೀ ಗುರುರಾಯರ ಆರಾಧನೆ. ಶುಭ ಸಂಖ್ಯೆ-5

ಮೈಸೂರು ಮಿತ್ರ

ಮರಿತಿಬ್ಬೇಗೌಡರು ಪರಿಷತ್‌ನಲ್ಲಿ ಶಿಕ್ಷಕರ ಧ್ವನಿಯಾಗಿದ್ದರು

ಶಾಸಕ ಅನಿಲ್ ಚಿಕ್ಕಮಾದು ಅಭಿಮತ



ಮರಿತಿಬ್ಬೇಗೌಡರ ಪರ ಶಾಸಕ ಅನಿಲ್ ಮತಯಾಚಿಸಿದರು.

ಹೆಚ್.ಡಿ.ಕೋಟೆ, ಜೂ.1– ಶಿಕ್ಷಕರಿಗೆ ತೊಂದರೆಯಾದಾಗ ಸದನದಲ್ಲಿ ಮರಿತಿಬ್ಬೇಗೌಡರು ಶಿಕ್ಷಕರ ಧ್ವನಿಯಾಗಿದ್ದರು. ಶಿಕ್ಷಕರ ಸಮಸ್ಯೆ ಪರಿಹಾರವಾಗುವವರೆಗೂ ಹೋರಾಟ ನಡೆಸುತ್ತಿದ್ದರು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರ ಪರ ಮತಯಾಚಿಸಿ ಮಾತನಾಡಿದ ಅವರು, ಶಿಕ್ಷಕರ ಬಗ್ಗೆ ಸದಾ ಚಿಂತಿಸುವ ಮರಿತಿಬ್ಬೇಗೌಡರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡುವ ಮೂಲಕ ಅವರ ಗೆಲುವಿಗೆ ಶಿಕ್ಷ ಮತದಾರರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಮರಿತಿಬ್ಬೇಗೌಡರು ನಾಲ್ಕು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಶಿಕ್ಷಕರ ಬಗ್ಗೆ ಬಹಳ ಕಾಳಜಿ ವಹಿಸಿ ಉತ್ತಮ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ರಾಜ್ಯದಲ್ಲಿ ನಮ್ಮದೇ ಸರ್ಕಾರ ಇರುವುದರಿಂದ ಅವರನ್ನು ಗೆಲ್ಲಿಸಿದರೆ ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಕೆಲಸ ಮಾಡಲು ಸಾಧ್ಯವಾಗುತ್ತದೆ. ಶಿಕ್ಷಕರ ಬೇಡಿಕೆಗಳನ್ನು ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರ ಈಡೇರಿಸುವ ಕೆಲಸವನ್ನು ಮಾಡುತ್ತದೆ. ಆದ್ದರಿಂದ ಮರಿತಿಬ್ಬೇಗೌಡರಿಗೆ ಮತ ನೀಡಿ ಎಂದು ಮನವಿ ಮಾಡಿದರು.

ನನ್ನ ಅಧಿಕಾರದ ಅವಧಿಯಲ್ಲಿ ಈ ಕಾಲೇಜಿನ ಅಭಿವೃದ್ಧಿಗೆ ನಾಲ್ಕು ಕೋಟಿ ಅನುದಾನ ಬಿಡುಗಡೆ ಮಾಡಿಸಲಾಗಿದೆ. ಮುಂದಿನ ದಿನಗಳಲ್ಲೂ ಕಾಲೇಜಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಿಸಿಕೊಡುವ ಭರವಸೆ ನೀಡಿದರು.

ನಂತರ ಪಟ್ಟಣದ ಆದಿಚುಂಚನಗಿರಿ ವಿದ್ಯಾ ಸಂಸ್ಥೆ, ಸೆಂಟ್ ಮೇರಿಸ್, ಬಾಲಕಿಯರ ಪದವಿ ಪೂರ್ವ ಕಾಲೇಜು, ಸರ್ಕಾರಿ ಪದವಿಪೂರ್ವ ಕಾಲೇಜು, ವಿಶ್ವ ಭಾರತಿ ಕಾಲೇಜು ಹಾಗೂ ವಿವಿಧ ಶಾಲಾ ಕಾಲೇಜುಗಳಿಗೆ ತೆರಳಿ ಮತಯಾಚನೆ ಮಾಡಿದರು.

ಇದೇ ವೇಳೆ ಮೈಮುಲ್ ನಿರ್ದೇಶಕ ಈರೇಗೌಡ, ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ, ಯೂತ್ ಕಾಂಗ್ರೆಸ್ ಅಧ್ಯಕ್ಷ ಶಿವರಾಜು, ಕಾಂಗ್ರೆಸ್ ವಕ್ತಾರ ಅಶೋಕ್, ನರಸೀಪುರ ರವಿ, ಕಾವೇರ, ಶಿವಯ್ಯ, ಗಣೇಶಾಚಾರ್, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಅರುಣ್ ಕುಮಾರ್, ಉಪನ್ಯಾಸಕರಾದ ಕೆಂಪರಾಜು, ಪುಟ್ಟರಾಜು, ಪುಷ್ಪಲತಾ, ಗುರುದತ್ ಕಾಮತ್, ಪೂರ್ಣಿಮಾ, ಮಹದೇವಮ್ಮ, ಕೃಪಾ ಗಣೇಶ್, ಶಿವಕುಮಾರ್, ಕಾತ್ಯಾಯಿನಿ, ಮಂಜುನಾಥ್, ರವಿಕುಮಾರ್, ನಾಗರಾಜನಾಯಕ, ರಾಜಶೇಖರ್, ಸಂಗೀತ, ಆದಿಚುಂಚನಗಿರಿ ಕಾಲೇಜಿನ ಪ್ರಾಂಶುಪಾಲ ಭೈರೇಗೌಡ, ಮುಖ್ಯ ಶಿಕ್ಷಕಿ ನಂದಿನಿ, ಶಿಕ್ಷಕರಾದ ಕೈಸರ್ ಪಾಷ, ರಾಜೇಗೌಡ, ಸಂತೋಷ್ ಕುಮಾರ್, ಎ.ಸಿ.ಭೈರಪ್ಪ, ಸ್ವಾಮಿನಾಯಕ್, ಚನ್ನಪ್ಪಾಜಿ ಇನ್ನಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಗಂ ಗಂ ಗಣೇಶ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಗ್ಯಾಂಗ್ಸ್ ಆಫ್ ಗೋಧಾವರಿ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಅರನ್‌ಮನೆ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಹಿಟ್‌ಲಿಸ್ಟ್ (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನೈಟ್ ಕರ್ಫ್ಯೂ (ಕ)	4 ಪ್ರದರ್ಶನಗಳು
ಪ್ರಭಾ	
ಕೃಷ್ಣಾ ನೀ ಬೇಗನೆ ಬಾರೋ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಥಾಲವನ್ (ಮ): ಬೆ.11.15ಕ್ಕೆ, ಗಾರ್ಫೀಲ್ಡ್ ಮೂವಿ (3ಡಿ)(ಇಂ): ಮ.2ಕ್ಕೆ, ಹಿಟ್ ಲಿಸ್ಟ್ (ತ): ಸಂ.4.15ಕ್ಕೆ, ಗ್ಯಾಂಗ್ಸ್ ಆಫ್ ಗೋಧಾವರಿ (ತೆ): ರಾ.7ಕ್ಕೆ, ಗಂ ಗಂ ಗಣೇಶ (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಗರುಡನ್ (ತ): ಬೆ.11ಕ್ಕೆ, ಮ.1.45ಕ್ಕೆ, ಭಜೆ ವಾಯು ವೇಗಂ (ತೆ): ಸಂ.4.35ಕ್ಕೆ, ಮಂದಾಕಿನಿ (ಮ): ರಾ.7.20ಕ್ಕೆ, ಅರನ್‌ಮನೈ 4 (ಹಿಂ): ರಾ.10ಕ್ಕೆ.
ಸ್ಕ್ರೀನ್ 3	ಛೋಟಾ ಭೀಮ್ ಅಂಡ್ ದಿ ಕರ್ಸ್ (ಹಿಂ): ಬೆ.10.35ಕ್ಕೆ, ಸಂ.4.25ಕ್ಕೆ, ಟರ್ಬೋ (ಮ): ಮ.1.25ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.7.05ಕ್ಕೆ, ಒನ್ಸ್ ಅಪೋನ್ ಎ ಟೈಂ ಇನ್ ಕೊಚ್ಚಿ (ಮ): ರಾ.10ಕ್ಕೆ.
ಸ್ಕ್ರೀನ್ 4	ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಗಾರ್ಫೀಲ್ಡ್ ಮೂವಿ (3ಡಿ)(ಇಂ): ಬೆ.10.40ಕ್ಕೆ, ಮ.1ಕ್ಕೆ, ಸಂ.6.10ಕ್ಕೆ, ರಾ.8.30ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಮ.3.20ಕ್ಕೆ.
ಸ್ಕ್ರೀನ್ 2	ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ರಾ.7.05ಕ್ಕೆ, ಶ್ರೀಕಾಂತ್ (ಹಿಂ): ಮ.1.05ಕ್ಕೆ, ರಾ.10.10ಕ್ಕೆ,
ಸ್ಕ್ರೀನ್ 3	ಇಂಗ ನಾನ್ ಥಾನ್ ಕಿಂಗು (ತ): ಬೆ.11.05ಕ್ಕೆ, ಇಫ್ 2024 (ಇಂ): ಮ.1.55ಕ್ಕೆ, ರಾ.7.35ಕ್ಕೆ, A (ಕ): ಸಂ.4.20ಕ್ಕೆ, ಗುರುವಾಯೂರ್ ಅಂಬಲನಾಡಿಯಿಲ್ (ಮ): ರಾ.10ಕ್ಕೆ.
ಸ್ಕ್ರೀನ್ 4	ರಾಮನ ಅವತಾರ (ಕ): ಮ.12.45ಕ್ಕೆ, ಕೃಷ್ಣ ನೀ ಬೇಗನೇ ಬಾರೋ (ಕ): ಮ.3.40ಕ್ಕೆ, ಇಂಗ ನಾನ್ ಥಾನ್ ಕಿಂಗು (ತ): ಸಂ.6.55ಕ್ಕೆ, ಅರಮನೈ 4 (ತ): ರಾ.9.45ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎವಿಡೆನ್ಸ್ (ಕ): ಬೆ.11.15ಕ್ಕೆ, ಅರನ್‌ಮನೈ 4 (ತ): ಮ.1.15ಕ್ಕೆ, ಟರ್ಬೋ (ಮ): ಸಂ.4ಕ್ಕೆ, ಮೂರನೇ ಕೃಷ್ಣಪ್ಪ (ಕ): ಸಂ.6.40ಕ್ಕೆ, ದಿ ಜಡ್ಜ್‌ಮೆಂಟ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಬೆ.10.20ಕ್ಕೆ, ಸಂ.4.05ಕ್ಕೆ, ಟರ್ಬೋ (ಮ): ಮ.1.05ಕ್ಕೆ, ಸಂ.6.50ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಮ.3.55ಕ್ಕೆ, 3ದೇವಿ (ಕ): ಮ.1.30ಕ್ಕೆ, ಫ್ಯೂರಿಯೋಸ ಎ ಮ್ಯಾಡ್ ಮ್ಯಾಕ್ಸ್ ಸಾಗಾ (ಇಂ): ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮರಿತಿಬ್ಬೇಗೌಡರ ಗೆಲುವು ನಿಶ್ಚಿತ:

ಮಾಜಿ ಶಾಸಕ ಡಾ.ಭಾರತೀಶಂಕರ್ ವಿಶ್ವಾಸ



ತಿ.ನರಸೀಪುರ, ಜೂ.1– ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್ ಚುನಾವಣೆಗೆ ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮರಿತಿಬ್ಬೇಗೌಡರು ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ಮಾಜಿ ಶಾಸಕ ಡಾ.ಎನ್.ಎಲ್. ಭಾರತೀಶಂಕರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಗ್ಯಾರಂಟಿಯಿಂದ ಸಂತುಷ್ಟಗೊಂಡಿರುವ ರಾಜ್ಯದ ಜನತೆ ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಪಕ್ಷವನ್ನು ಬೆಂಬಲಿಸಲಿದ್ದಾರೆ. ದಕ್ಷಿಣ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿ ತಮ್ಮದೇ ಆದ ಅರ್ಹತೆಯೊಂದಿಗೆ ಸೌಮ್ಯ ಸ್ವಭಾವದವರಾಗಿದ್ದು ಈ ಹಿಂದೆ ಕಾಂಗ್ರೆಸ್, ಜೆಡಿಎಸ್ ಹಾಗೂ ಪಕ್ಷೇತರವಾಗಿಯೂ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ. ಎಲ್ಲಾ ಜಾತಿ, ಸಮಾಜಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಅವರು ಅಜಾತಶತ್ರುವಾಗಿದ್ದು, ಶಿಕ್ಷಕರ ಸಮಸ್ಯೆಗಳನ್ನು ಯಾರು ಪರಿಹಾರ ಮಾಡಿಕೊಡುತ್ತಾರೆ ಎಂಬುದನ್ನು ಮನಗಂಡು ಶಿಕ್ಷಕರು ಮತ ಚಲಾಯಿಸಲಿದ್ದಾರೆ. ಆ ಅರ್ಹತೆಯನ್ನು ಮರಿತಿಬ್ಬೇಗೌಡರು ಹೊಂದಿದ್ದು, ಶಿಕ್ಷಕರ ಸಮಸ್ಯೆ ಬಗ್ಗೆ ಅರಿವಿರುವ ಅವರ ಗೆಲುವ ನಿಶ್ಚಿತವಾಗಲಿದ್ದು ಬಿಜೆಪಿ ಅಭ್ಯರ್ಥಿಗಿಂತ ಅಧಿಕ ಮತಗಳನ್ನು ಪಡೆದು ಜಯ ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಈ ವೇಳೆ ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಕೋಣಗಳ್ಳಿ ನಾಗರಾಜ್, ಶಿವ ಸಿದ್ದು, ಬಸವರಾಜ್ ಮತ್ತಿತರಿದ್ದರು.

ಗ್ಯಾಸ್ ಸೋರಿಕೆಯಿಂದ ಮನೆ ಅಗ್ನಿಗಾಹುತಿ



ಗ್ಯಾಸ್ ಸೋರಿಕೆಯಿಂದ ಮನೆ ಭಸ್ಮವಾಗಿರುವುದು

ಭೇರ್ಯ, ಜೂ.1– ಗ್ಯಾಸ್ ಸೋರಿಕೆಯಿಂದ ಬೆಂಕಿ ಆವರಿಸಿ ಮನೆ ಸಂಪೂರ್ಣ ಭಸ್ಮವಾಗಿ, ಕುಟುಂಬಸ್ಥರು ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ಸಾಲಿಗ್ರಾಮ ತಾಲೂಕಿನ ಭೇರ್ಯ ಸಮೀಪದ ಮುಂಜನಹಳ್ಳಿ ಗ್ರಾಮದಲ್ಲಿ ಗುರುವಾರ ಮಧ್ಯರಾತ್ರಿ ನಡೆದಿದೆ.

ಗ್ರಾಮದ ಶಾರದಮ್ಮ ಈರಣ್ಣನಾಯಕ ಮತ್ತು ಜವರಮ್ಮ ಎಂಬುವರ ಎರಡು ಕುಟುಂಬಗಳು ಈ ಮನೆಯಲ್ಲಿ ವಾಸವಾಗಿತ್ತು. ಗುರುವಾರ ರಾತ್ರಿ ಎಲ್ಲರೂ ಊಟ ಮಾಡಿ ಮಲಗಿದ್ದಾರೆ. ಆದರೆ ಸಿಲಿಂಡರ್‌ನಿಂದ ಗ್ಯಾಸ್ ವಾಸನೆ ಬರುತ್ತಿತ್ತು. ಬೆಳಗ್ಗೆ ಗ್ಯಾಸ್ ಏಜೆನ್ಸಿ ಸಿಬ್ಬಂದಿಗಳಿಗೆ ತೋರಿಸೋಣ ಎಂದು ಮಲಗಿದ್ದಾರೆ. ಕುಟುಂಬದ ಸದಸ್ಯರ ದುರದೃಷ್ಟ ಇದ್ದಕ್ಕಿದ್ದಂತೆ ಶಾರ್ಟ್ ಸರ್ಕ್ಯೂಟ್ ಆಗಿದೆ. ತಕ್ಷಣ ಬೆಂಕಿ ತಗುಲಿದ್ದರಿಂದ ಬೆಂಕಿ ಇಡೀ ಮನೆಯನ್ನು ಆವರಿಸಿಕೊಂಡಿದೆ. ಬೆಂಕಿ ಜ್ವಾಲೆ ಹೆಚ್ಚಾದಂತೆ ತಕ್ಷಣವೇ ಮನೆಯಲ್ಲಿ ಮಲಗಿದ್ದ ಶಾರದ, ಈರಣ್ಣ, ವಂದನಾ, ನವೀನ್ ಎದ್ದು ಮನೆಯಿಂದ ಹೊರಗೆ ಬಂದಿದ್ದು, ಮನೆ ಸಂಪೂರ್ಣವಾಗಿ ಸುಟ್ಟು ಹೋಗಿದೆ. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮನೆಯಲ್ಲಿದ್ದ ಗೃಹಬಳಕೆ ವಸ್ತುಗಳನ್ನು ಉಳಿಸಲು ಪ್ರಯತ್ನಿಸಿದರಾದರೂ ಯಾವುದೇ ಗೃಹಬಳಕೆ ವಸ್ತುಗಳನ್ನು ಉಳಿಸಲು ಸಾಧ್ಯವಾಗಲಿಲ್ಲ.

ಫ್ರಿಡ್ಜ್, ಟಿವಿ, ಮಿಕ್ಸಿ, ಬಟ್ಟೆ, ಐಸ್ ಕ್ರೀಮ್ ಕೂಲರ್, ಚಿನ್ನ ಬೆಳ್ಳಿ ಮತ್ತು 1 ಲಕ್ಷದ 42 ಸಾವಿರ ನಗದು, ಚಾಮುಂಡೇಶ್ವರಿ ದೇವಿ ಒಡವೆಗಳು ಕೂಡ ಬೆಂಕಿಗೆ ಆಹುತಿ ಆಗಿದ್ದು, ಮನೆ ಹಾಗೂ ಗೃಹ ಬಳಕೆ ವಸ್ತುಗಳು ಸೇರಿ ಅಂದಾಜು 10 ಲಕ್ಷ ನಷ್ಟವಾಗಿದೆ. ಅಲ್ಲದೇ ವಾಸ ಮಾಡಲು ಮನೆ ಇಲ್ಲದೆ ಕುಟುಂಬಸ್ಥರು ಕಣ್ಣೀರಿಟ್ಟಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಪರಿಹಾರ ನೀಡುವಂತೆ ಮನೆ ಕಳೆದುಕೊಂಡ ಶಾರದಮ್ಮ, ಜವರಮ್ಮ ಕುಟುಂಬದವರು ಒತ್ತಾಯಿಸಿದ್ದಾರೆ. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಗ್ಯಾಸ್ ಸಿಲಿಂಡರ್ ಅನಿಲ ಸೋರಿಕೆಯಿಂದ ಉಂಟಾದ ಅಗ್ನಿ ಅವಘಡದ ಸುದ್ದಿ ತಿಳಿದ ಇಂಡೇನ್ ಗ್ಯಾಸ್ ಏಜೆನ್ಸಿಯವರು ಸ್ಥಳಕ್ಕೆ ಭೇಟಿನೀಡಿ ಮಹಜರ್ ನಡೆಸಿ ಕುಟುಂಬಸ್ಥರಿಂದ ಅವಘಡದ ಬಗ್ಗೆ ಮಾಹಿತಿ ಪಡೆದುಕೊಂಡರು.

ಇದೇ ವೇಳೆ ಜವರಮ್ಮ ಮತ್ತು ಶಾರದಾ ಕುಟುಂಬಕ್ಕೆ ಸರ್ಕಾರ ಪರಿಹಾರ ಮತ್ತು ಆಶ್ರಯ ಮನೆ ನೀಡುವಂತೆ ಗ್ರಾಪಂ ಸದಸ್ಯ ಮಹದೇವನಾಯಕ ಮತ್ತು ಗ್ರಾಮಸ್ಥರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಬಿಳಿಕೆರೆ ರಾಜಣ್ಣಗೆ ಹುಟ್ಟುಹಬ್ಬದ ಸಂಭ್ರಮ



ಶನಿವಾರ 64ನೇ ಹುಟ್ಟುಹಬ್ಬ ಆಚರಿಸಿಕೊಂಡ ಬಿಳಿಕೆರೆ ರಾಜಣ್ಣ ಅವರನ್ನು ಹುಣಸೂರಿನಲ್ಲಿ ದಲಿತ ಮುಖಂಡರು ಸನ್ಮಾನಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ದಸಂಸ ಡಿ.ಜಿ.ಸಾಗರ್ ಬಣದ ಜಿಲ್ಲಾ ಸಂಚಾಲಕ ಕೃಷ್ಣ, ಮಾಜಿ ಪುರಸಭಾ ಸದಸ್ಯ ಹೆಚ್.ಎಸ್.ವರದರಾಜು, ಸುರೇಶ್, ವಿಜಯ, ಶಿವರಾಜು, ಸ್ವಾಮಿ, ಪ್ರಕಾಶ್, ಮಹೇಶ್, ಸಂತೋಷ್, ಸಿದ್ದರಾಜು, ಲೋಕೇಶ್, ಯೋಗೇಶ್, ಅವಿನಾಶ್ ಸೇರಿದಂತೆ ಇನ್ನಿತರರಿದ್ದರು.

ಸರಗೂರಲ್ಲಿ ವಿಜೃಂಭಣೆಯ ತೆಪ್ಪೋತ್ಸವ



ಸರಗೂರು, ಜೂ.1– ಚೌಡೇಶ್ವರಿ ಅಮ್ಮನವರ ವರ್ಧಂತಿ ಹಾಗೂ 84ನೇ ಜ್ಯೋತಿ ಪೂಜಾ ಮಹೋತ್ಸವ ಅಂಗವಾಗಿ ಕಪಿಲಾ ನದಿಯಲ್ಲಿ ಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ವಿಜೃಂಭಣೆಯಿಂದ ನಡೆಯಿತು. ಕಳೆದ 5 ದಿನದಿಂದ ಹಬ್ಬ ಆಚರಿಸಲಾಗಿದ್ದು, ಶನಿವಾರ ಬೆಳಗ್ಗೆ ದೇವಾಲಯದಲ್ಲಿ ಅಭಿಷೇಕ ಪೂಜೆ, ಕುಂಕುಮಾರ್ಚನೆ ಹಾಗೂ ಮಧ್ಯಾಹ್ನ 1.30 ರಲ್ಲಿ ಮಹಾ ಮಂಗಳಾರತಿ ನಂತರ ತೀರ್ಥಪ್ರಸಾದ ನೀಡಲಾಯಿತು. ಸಂಜೆ 4 ಗಂಟೆಗೆ ಓಕುಳಿ ಕಾರ್ಯಕ್ರಮ ನೆರವೇರಿತು. ಸಂಜೆ 5.30ಕ್ಕೆ ಕಪಿಲಾ ನದಿಯಲ್ಲಿ ಶ್ರೀಚೌಡೇಶ್ವರಿ ಅಮ್ಮನವರ ತೆಪ್ಪೋತ್ಸವ ಭಕ್ತರ ಸಮ್ಮುಖದಲ್ಲಿ ನಡೆಯುವ ಮೂಲಕ ಹಬ್ಬಕ್ಕೆ ತೆರೆಬಿದ್ದಿತು.

ಜೂ.7ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ನಂಜನಗೂಡು, ಜೂ.1– ರೋಟರಿ ನಂಜನಗೂಡು ಮತ್ತು ಜೆಎಸ್‌ಎಸ್ ಆಸ್ಪತ್ರೆ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಜೂ.7 ರುದು ಇಲ್ಲಿನ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಬೃಹತ್ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ ಎಂದು ರೋಟರಿ ಸಂಸ್ಥೆ ಅಧ್ಯಕ್ಷ ರಮೇಶ್ ತಿಳಿಸಿದ್ದಾರೆ.

ಅಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 3 ರವರೆಗೆ ವೈದ್ಯಕೀಯ ತಪಾಸಣೆ ಮತ್ತು ಸಾಮಾನ್ಯ ಕಾಯಿಲೆಗಳಿಗೆ ಸಲಹೆ, ರಕ್ತದೊತ್ತಡ ಮತ್ತು ಮಧುಮೇಹ, ಶಸ್ತ್ರಚಿಕಿತ್ಸೆ, ಸ್ತ್ರೀರೋಗ ತಪಾಸಣೆ, ಮಕ್ಕಳ ರೋಗಗಳು, ಹೃದಯಕ್ಕೆ ಸಂಬಂಧಿಸಿದ ಸಮಸ್ಯೆಗಳು, ಕಿವಿ, ಮೂಗು ಮತ್ತು ಗಂಟಲು, ಕಣ್ಣಿನ ತೊಂದರೆಗಳು, ವಾತಪಿತ್ತ(ಗ್ಯಾಸ್ಟ್ರಿಕ್), ಮೂಳೆಗೆ ಮತ್ತು ಚರ್ಮದ ಕಾಯಿಲೆ, ಮೂತ್ರ, ಜಠರ, ದಂತರೋಗಗಳಿಗೆ ಸಂಬಂಧಿಸಿದ ತೊಂದರೆಗಳು ಮತ್ತು ಸಮಸ್ಯೆಗಳನ್ನು ನುರಿತ ವೈದ್ಯರಿಂದ ತಪಾಸಣೆ ನಡೆಸಿ ಪರಿಹಾರ ನೀಡಲಾಗುವುದು ಎಂದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಉಪ ಅಧೀಕ್ಷಕ ಡಾ.ನವೀನ್ ಮಾತನಾಡಿ, ನಗರ ಮತ್ತು ತಾಲೂಕಿನ ಮಹಾಜನತೆ ಶಿಬಿರದ ಸದುಪಯೋಗವನ್ನು ಪಡೆದು ಎಲ್ಲರೂ ಆರೋಗ್ಯವಂತರಾಗಿರಬೇಕು ಎಂದರು.

ಜೆಎಸ್‌ಎಸ್ ಸಂಸ್ಥೆ ಡಾ.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಶಿಬಿರದಂದು ಉಚಿತ ಬಿ.ಪಿ, ಶುಗರ್, ಇಸಿಜಿ, ಸಿಬಿಜಿ, ಎಕೋ, ರಕ್ತ ಪರೀಕ್ಷೆಗಳು ಮುಂತಾದ ಪರೀಕ್ಷೆಗಳು ಲಭ್ಯವಿದ್ದು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಕೋರಿದರು.

ರೋಟರಿ ಸಂಸ್ಥೆ ಕಾರ್ಯದರ್ಶಿ ಪ್ರಕಾಶ್ ಚಂದ್ ಜೈನ್, ಅಸಿಸ್ಟೆಂಟ್ ಗವರ್ನರ್ ರಾಮಚಂದ್ರರಾವ್, ಖ್ಯಾತ ವೈದ್ಯ ಡಾ.ಶ್ರೀಕಾಂತ್, ಹಿರಿಯ ವಕೀಲ ಬಿ.ನಂಜುಂಡಸ್ವಾಮಿ, ರೋಟರಿ ಚಂದ್ರು, ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸುರೇಂದ್ರ, ಸೇರಿದಂತೆ ಪ್ರಮುಖರು ಸುದ್ದಿಗೋಷ್ಠಿಯಲ್ಲಿದ್ದರು.

ಯುಪಿಎಸ್‌ಸಿಯಲ್ಲಿ ರ್‍ಯಾಂಕ್ ಪಡೆದ ಚಿದಾನಂದಗೆ ಅಭಿನಂದನೆ



ಹೆಚ್.ಡಿ.ಕೋಟೆ, ಜೂ.1– ಯುಪಿಎಸ್‌ಸಿ ಪರೀಕ್ಷೆಯಲ್ಲಿ ಎಚ್.ಎಸ್.ಚಿದಾನಂದ ಅವರು 120ನೇ ರ್‍ಯಾಂಕ್ ಪಡೆದು ತಾಲೂಕಿಗೆ ಮತ್ತು ನಾಯಕ ಸಮುದಾಯಕ್ಕೆ ಕೀರ್ತಿ ತಂದಿದ್ದಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್‌ನಲ್ಲಿರುವ ಅವರ ನಿವಾಸಕ್ಕೆ ತೆರಳಿ ಅಭಿನಂದಿಸಿ ಮಾತನಾಡಿದ ಅವರು, ತಾಲೂಕಿನ ವಿದ್ಯಾರ್ಥಿಗಳು ಐಎಎಸ್ ಮತ್ತು ಐಪಿಎಸ್ ಪರೀಕ್ಷೆಗಳಲ್ಲಿ ಪಾಸಾಗುವ ಛಲದೊಂದಿಗೆ ಮುನ್ನುಗ್ಗಿದಾಗ ಯಶಸ್ಸು ಕಾಣಬಹುದು. ಆದರೆ ಇಂತಹ ಪರೀಕ್ಷೆಗಳಲ್ಲಿ ರ್‍ಯಾಂಕಿಂಗ್ ಪಡೆಯಬೇಕಾದರೆ ಶ್ರದ್ಧೆ, ಪರಿಶ್ರಮ ಅತಿ ಮುಖ್ಯ. ವಿದ್ಯಾರ್ಥಿಗಳು ಶೈಕ್ಷಣಿಕ ವಿಚಾರದಲ್ಲಿ ಆಸಕ್ತಿ ತೋರಿಸಿದರೆ ತಮ್ಮ ಗುರಿ ಸಾಧಿಸಿ, ಉತ್ತಮ ಜೀವನ ನಡೆಸಬಹುದಾಗಿದೆ. ತಾಲೂಕಿನ ವಿದ್ಯಾರ್ಥಿಗಳಿಗೆ ಚಿದಾನಂದ ಅವರ ಶೈಕ್ಷಣಿಕ ಬದುಕು ಮಾದರಿ ಎಂದರು.

ತಾಲೂಕಿನಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಗ್ರಾಮೀಣ ವಿದ್ಯಾರ್ಥಿಗಳು ನಗರ ಪ್ರದೇಶದ ವಿದ್ಯಾರ್ಥಿಗಳಿಗೆ ಸಮನಾಗಿ ಫಲಿತಾಂಶ ನೀಡುತ್ತಿದ್ದಾರೆ ಎಂದ ಅವರು, ಐಎಎಸ್ ಮತ್ತು ಐಪಿಎಸ್ ಮಾಡುವ ತಾಲೂಕಿನ ವಿದ್ಯಾರ್ಥಿಗಳಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ. ಇಂತಹ ವಿದ್ಯಾರ್ಥಿಗಳಿಂದ ತಾಲೂಕು ಹಾಗೂ ಆ ಸಮುದಾಯಕ್ಕೂ ಕೀರ್ತಿ ಸಿಗಲಿದೆ ಎಂದರು.

ಇದೇ ವೇಳೆ ಚಿದಾನಂದ ಅವರ ತಂದೆ ಉಪನ್ಯಾಸಕ ವೆಂಕಟಸುಬ್ಬನಾಯಕ, ತಾಯಿ ಮಂಜುಳಾ, ತಾತ ಶಂಭುಲಿಂಗ ನಾಯಕ, ಮೈಮುಲ್ ನಿರ್ದೇಶಕ ಹಿರೇಗೌಡ, ನಾಗನಹಳ್ಳಿ ಪ್ರದೀಪ, ಜೈ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಗಣೇಶ್ ಆಚಾರ್, ವಕೀಲ ಹನುಮೇಶ್, ಪರಶಿವಮೂರ್ತಿ, ಅಶೋಕ್, ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ ಇತರರಿದ್ದರು.

ಮರಿತಿಬ್ಬೇಗೌಡರ ಪರ ಶಾಸಕ ದರ್ಶನ್ ಪ್ರಚಾರ



ಮರಿತಿಬ್ಬೇಗೌಡರ ಪರ ಶಾಸಕ ದರ್ಶನ್ ಮತಯಾಚಿಸಿದರು

ನಂಜನಗೂಡು, ಜೂ.1– ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಿ ಹೊಸ ಪಿಂಚಣಿ ಯೋಜನೆ ರದ್ದುಗೊಳಿಸಿ ಒಪಿಎಸ್ ಹಳೇ ಪಿಂಚಣಿ ಯೋಜನೆ ಜಾರಿಗೊಳಿಸುವ ಸಲುವಾಗಿ ಶಿಕ್ಷಕರ ಸಮಸ್ಯೆಗಳ ಬಗ್ಗೆ ಅರಿವಿರುವ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಅವರನ್ನು ಜಯಶೀಲರನ್ನಾಗಿ ಮಾಡಿ ಎಂದು ಶಾಸಕ ದರ್ಶನ್ ಮನವಿ ಮಾಡಿದರು.

ನಗರದ ಲಯನ್ಸ್ ಶಾಲೆ, ರೋಟರಿ ಶಾಲೆ, ಕಾರ್ಮೆಲ್ ಶಾಲೆ, ಸಿಟಿಜನ್ ಶಾಲೆ ಸೇರಿದಂತೆ ವಿವಿಧ ಶಾಲಾ ಕಾಲೇಜಿಗೆ ತೆರಳಿ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಪರ ಮತಯಾಚಿಸಿ ಅವರು ಮಾತನಾಡಿದರು.


ಮರಿತಿಬ್ಬೇಗೌಡರು 4 ಬಾರಿ ಶಿಕ್ಷಕರ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿ ಶಿಕ್ಷಕರ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಮುಂದಾಗಿದ್ದಾರೆ. ಜೊತೆಗೆ ಸತತವಾಗಿ ಶಿಕ್ಷಕರೊಂದಿಗೆ ಒಡನಾಟ ಇಟ್ಟುಕೊಂಡು ಶಿಕ್ಷಕರ ನೋವಿಗೆ ಸ್ಪಂದಿಸಿ ಕೆಲಸ ಮಾಡಿದ್ದಾರೆ. ಅಲ್ಲದೆ ಎನ್‌ಪಿಎಸ್ ರದ್ದುಗೊಳಿಸಿ ಒಪಿಎಸ್ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಮುಖ್ಯಮಂತ್ರಿಗಳೂ ಸಹ ಒಪ್ಪಿಗೆ ನೀಡಿದ್ದು ಶೀಘ್ರದಲ್ಲೇ ಅದು ಕೂಡ ಜಾರಿಯಾಗಲಿದೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಬಹಳಷ್ಟು ಅರಿವಿರುವ ಸರಳ ಸಜ್ಜನ ವ್ಯಕ್ತಿ ಮರಿತಿಬ್ಬೇಗೌಡರನ್ನು ಮತ್ತೊಮ್ಮೆ ಆಯ್ಕೆಗೊಳಿಸಿ ವಿಧಾನ ಪರಿಷತ್‌ಗೆ ಕಳುಹಿಸಿಕೊಡಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಮರಿತಿಬ್ಬೇಗೌಡರು ಶಿಕ್ಷಕ ವೃಂದದ ಜೊತೆಗೆ ಆತ್ಮೀಯ ಸಂಬಂಧ ಹೊಂದಿ ಅವರ ನೋವಿಗೆ ಧ್ವನಿಯಾಗಿ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಶಿಕ್ಷಕರ ಬಹುದಿನದ ಕನಸಾಗಿರುವ 7ನೇ ವೇತನ ಆಯೋಗದ ಜಾರಿ ಸೇರಿದಂತೆ ಶಿಕ್ಷರ ಸಮಸ್ಯೆ ಬಗೆಹರಿಸಿ ಶಿಕ್ಷಕರ ಕ್ಷೇತ್ರದಲ್ಲಿ ಸಮಗ್ರವಾದ ಅಭಿವೃದ್ಧಿ ತರುವ ಸಲುವಾಗಿ ಅವರ ಹೆಸರಿನ ಮುಂದೆ 1 ಎಂದು ಬರೆಯುವ ಮೂಲಕ ಅವರನ್ನು ಗೆಲ್ಲಿಸಬೇಕು ಎಂದರು.

ಇದೇ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ, ಶಶಿರೇಖಾ, ಮುಖಂಡರಾದ ದೊರೆಸ್ವಾಮಿನಾಯಕ, ಶಿವಪ್ಪ ದೇವರು, ಜಯರಾಂ, ಬಸವಣ್ಣ, ಮಂಜುನಾಥ್, ಶ್ರೀಧರ್, ನಗರಸಭಾ ಸದಸ್ಯರಾದ ಪ್ರದೀಪ್, ಶ್ರೀಕಂಠಸ್ವಾಮಿ, ಎಸ್.ಪಿ.ಮಹೇಶ್, ರವಿ, ಜಯಮಾಲ, ನಗರಸಭಾ ಮಾಜಿ ಉಪಾಧ್ಯಕ್ಷ ದೊರೆಸ್ವಾಮಿ ಸೇರಿದಂತೆ ಹಲವರಿದ್ದರು.

ಕಾಂಗ್ರೆಸ್‌ನಿಂದ ಸರ್ಕಾರಿ ನೌಕರರ ನಿರ್ಲಕ್ಷ್ಯ

ಕರೋಹಟ್ಟಿ ಮಹದೇವಯ್ಯ ಆರೋಪ



"ಈ ಬಾರಿ ಮೈತ್ರಿ ಅಭ್ಯರ್ಥಿಯಾಗಿ ಕೆ.ವಿವೇಕಾನಂದ ಅವರನ್ನು ಕಣಕ್ಕಿಳಿಸಿರುವುದರಿಂದ ನಮ್ಮ ಅಭ್ಯರ್ಥಿ ಗೆಲುವು ಸುಲಭವಾಗಿದೆ. ಆದ್ದರಿಂದ ಪ್ರಬುದ್ಧ ಮತದಾರರು ಮೊದಲ ಪ್ರಾಶಸ್ತ್ಯದ ಮತ ನೀಡುವ ಮೂಲಕ ಅವರನ್ನು ವಿಜಯಶಾಲಿಯನ್ನಾಗಿ ಮಾಡಬೇಕು.
– ಡಾ.ರೇವಣ್ಣ, ಬಿಜೆಪಿ ಮುಖಂಡ

ತಿ.ನರಸೀಪುರ, ಜೂ.1– ಸಿದ್ದರಾಮಯ್ಯನವರ ಸರ್ಕಾರದಿಂದ ಸರ್ಕಾರಿ ನೌಕರರಿಗೆ ನಿಗದಿತ ಸಮಯಕ್ಕೆ ವೇತನ ಕೊಡಲು ಆಗುತ್ತಿಲ್ಲ. ಇನ್ನು ಶಿಕ್ಷಕರ ಸಮಸ್ಯೆ ಯಾವ ರೀತಿ ಬಗೆಹರಿಸುತ್ತಾರೆ ಎಂದು ಬಿಜೆಪಿ ಹಿರಿಯ ಮುಖಂಡ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಪ್ರಶ್ನಿಸಿದರು.

ಪಟ್ಟಣದ ಸರ್ಕಾರಿ ಪದವಿ ಕಾಲೇಜಿನಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ಮೈತ್ರಿ ಅಭ್ಯರ್ಥಿ ವಿವೇಕಾನಂದ ಪರ ಮತಯಾಚಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಸರ್ಕಾರಿ ನೌಕರರನ್ನು ನಿರ್ಲಕ್ಷಿಸುತ್ತಿದೆ. ಶಿಕ್ಷಕರು ಹಾಗೂ ಪದವೀಧರ ಶಿಕ್ಷಕರನ್ನು ಯಾವ ರೀತಿ ಕಾಣುತ್ತಾರೆ ಎಂಬುದನ್ನು ಅರಿತು ನಮ್ಮ ಮೈತ್ರಿ ಅಭ್ಯರ್ಥಿ ವಿವೇಕಾನಂದ ಅವರಿಗೆ ಮತ ನೀಡುವ ಮೂಲಕ ವಿಜೇತರನ್ನಾಗಿ ಮಾಡಿದರೆ ಶಿಕ್ಷಕರ ಸಮಸ್ಯೆಗೆ ಸ್ಪಂದಿಸುತ್ತಾರೆ ಎಂದರು.

ರಾಜ್ಯ ಸರ್ಕಾರ ಎಲ್ಲಾ ಅನುದಾನಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡು ಬರ ಪರಿಹಾರಕ್ಕೆ ಇನ್ನೂ ಹಣ ಬಿಡುಗಡೆ ಮಾಡಿಲ್ಲ. ರೈತರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ಗೊಬ್ಬರದ ಬೆಲೆಯನ್ನು ದುಪ್ಪಟ್ಟು ಮಾಡಿ ಅನ್ನದಾತರ ನೋವಿಗೆ ಸ್ಪಂದಿಸದಿರುವುದು ವಿಷಾದನೀಯ ಎಂದರು.

ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ತೊಟ್ಟವಾಡಿ ಅನಿಲ್ ಕುಮಾರ್ ಮಾತನಾಡಿ, ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಗೆಲ್ಲಿಸಿ ಎನ್‌ಡಿಎಗೆ ಶಕ್ತಿ ತುಂಬುವ ಕೆಲಸವಾಗಬೇಕು. ಶಿಕ್ಷಕರ ಕ್ಷೇತ್ರದ ಪವಿತ್ರತೆ ಉಳಿಯಬೇಕೆಂದರೆ ಶಿಕ್ಷಕರು ಮೈತ್ರಿ ಅಭ್ಯರ್ಥಿ ವಿವೇಕಾನಂದರನ್ನು ಬೆಂಬಲಿಸಬೇಕು ಎಂದರು.

ಈ ವೇಳೆ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಎಸ್‌ಸಿ ಮೋರ್ಚಾ ಮಾಜಿ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ಸೋಸಲೆ ಶಿವಕುಮಾರ್, ಪೂಜಿತ್ ಮೆಡಿಕಲ್ ಕುಮಾರ್, ಉಪನ್ಯಾಸಕರಾದ ಡಾ.ಮಾದೇವಿ, ಡಾ.ರೇಷ್ಮಾ ಸುಂಗ್ಪ ಡಾ.ಕವಿತಾ, ಡಾ.ರಾಮಣ್ಣ ಡಾ.ಪುಟ್ಟಸ್ವಾಮಿ ಮತ್ತಿತರರಿದ್ದರು.

ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಪುಷ್ಪರಾಜ್ ಮತ್ತು ಶ್ರೀ ಎನ್.ರಾಜ್‌ಕುಮಾರ್

ಶುಭಕೋರುವವರು: ಮಗ–ಕೀರ್ತಿರಾಜ್, ಮಗಳು–ಧೀಕ್ಷಾರಾಜ್, ಶಶಿಕಲಾ ಮತ್ತು ಎಲ್.ಹರೀಶ್

ಬೇಕಾಗಿದ್ದಾರೆ

ಕಾರ್ ಡ್ರೈವರ್ 3 ವರ್ಷ Experience, Innova ಓಡಿಸಲು 9am to 7pm, 17,000/- ಸಂಬಳ

9148773899

SITES FOR SALE

1) 70x65, 4550 Sq.ft. Rs. 2500 per sqft , East facing corner site for sale Mahalakshmi Layout, Phase 2, Vajamangla Road, T. Narasipura Road, Varuna, Mysore.

2) 40x50, 2000 sq.ft. Rs. 2500 per sq.ft.

No agent. Contact owner by

Whatsaap 98451 64819

ADMISSIONS OPEN

STATSPARKS ACADEMY
EMPOWERING MINDS, TRANSFORMING FUTURES

TUTORIAL CLASSES
- I PUC Science (PCMB)
- II PUC Science (PCMB)
- KCET/JEE/NEET
- Engineering Mathematics

CERTIFICATE COURSES
- Data Science(ML & AI)
- Python Programming
- R-Programming
- SQL

Contact Details:
+91 8213131229
+91 8310959436

Registration through

Visit: www.statsparks.com/academy
Address: #72, 2nd Floor, 1st Stage, A- Block, Akkamahadevi Road, J. P. Nagar, Mysuru – 570008

BIRTHDAY REMEMBRANCE



Sri. C. RUKMANGADA
FOUNDER OF HOTEL KALYANI and EASY THINDI
Hebbal Ring Road, Mysore

Ex. Upa Pradhan of Hinkal Mandal Panchayat
Ex President of Hebbal Gram Panchayat

- Family Members, Relatives, Friends & Staff

SITES NEAR YELWALA

DC Converted Rera Approved 20x30, 30x40, 30x50 attached to Upcoming Kushal Nagara highway Fully Developed, Surrounded by Houses

Call or Whatsapp **9632522332**

ವಿಲ್ಲಾ ಸೈಟು ಹುಣಸೂರು

20x30, 20x40, 30x40, 30x50
4 kms ಬಸ್ ಸ್ಟಾಂಡ್ ನಿಂದ
Entrance Arch, DC Converted, Huda Approved, Water Tank
40 ಅಡಿ ರಸ್ತೆ, 75% ಬ್ಯಾಂಕ್ ಲೋನ್
Rs.675/Sqft

9845296975

LOOKING FOR A MANAGER

for a **HOMESTAY IN SRIMANGALA KODAGU,** must be fluent in Kannada, Hindi and English. Prior hospitality experience is a must.

Call : **84312 89336**

WANTED

- **PHYSIOTHERAPIST** (Qualification : BPT)
- **ACCOUNTS MANAGER** (MBA / M.Com 5-10 Years of Exp., in Hospital Sector)
- **P.R.O.** (3-5 Years of Exp., in Hospital Sector)
- **PHARMACIST** (D-Pharma / B-Pharma)

WALK IN INTERVIEW : 10am to 12pm

St. JOSEPH'S HOSPITAL
Bannimantap, Mysore.
Mob : 9606990713
Email : stjosephhospitalhr2024@gmail.com

DTCP APPROVED

IMMEDIATE CONSTRUCTION

SITES @ Just ₹ 1750/- Sq ft in Ilavala,

90% Bank loan Available.

Call : 91087 71177

₹20 Lakhs Only (20 x 30 Site)

MUDA APPROVED

HERITAGE CITY
Uttanahalli, Mysuru
PRM/KA/RERA/1268/PR/160124/006555

READY FOR REGISTRATION

Available Plots 20x30 & 30x40

86188 03878 / 63645 32526



NEWLY LAUNCHED PROJECT IN YELWALA

"PARISARA SIRI" Mysore
Residential plots @ **just Rs. 675/- sq.ft.,** 2 kms from Yelwala, 1 km from NH 275
Near Articulture University
Dimension - 30x40, 30x50, 40x60
Madikeri – Mysore Highway

Call : **97403 91228**

SITE FOR SALE

KBL Silicon City
50'x80'
East Face
Contact:
98453 59147

FOR SALE

1. *20x30, 30x40, 30x50 Near Defence Apartments, HD Kote Road*
2. 30x50 Near Varuna Lake
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 40x72, 35x45 House Vidyaranyapuram
6. 20x30, Sites For Sale At Yelwala
30x40 Sites at Bogadi Rainbow School

PRAKRUTHI PROPERTIES
95386 90359, 90359 90359

WANTED

Coffee / Tea Master, Dosa Master, Chinese and Chats Cook, North Indian Cook, Counter/Service Staff, Security and Cashier for a Restaurant

Contact: **6364887396**

ಶ್ರೀ ಭಗವಾನ್ ಸಿಲ್ಕ್ಸ್ ಮ್ಯಾಚಿಂಗ್ ಸೆಂಟರ್

ನಮ್ಮಲ್ಲಿ ರೆಡಿಮೇಡ್ ಬ್ಲೌಸ್
ಡಿಸೈನರ್ ಬ್ಲೌಸ್
ಪಾರ್ಟಿವೇರ್ ಬ್ಲೌಸ್
ಶೇಪ್‌ವೇರ್ ಮತ್ತು
ಮೇಟಿರಿಯಲ್‌ಗಳು
ದೊರೆಯುತ್ತದೆ

ಕೆ.ಆರ್. ಸರ್ಕಲ್, ಮೈಸೂರು



ONLY ONE WAY **TAXI CHARGE**

MYSORE to BANGALORE
City drop or Pick up

BANGALORE to MYSORE
Airport drop or Pick up
MYSURU

9611177599

ಬಾಡಿಗೆಗೆ ಇದೆ

ಬನ್ನೂರು ಸಂತೇಮಾಳದಲ್ಲಿ 72x23 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಇದೆ. ಹೋಟೆಲ್, ನರ್ಸಿಂಗ್ ಹೋಂ, ಬ್ಯಾಂಕ್ ಇತರೆಗೆ ಯೋಗ್ಯವಾಗಿರುತ್ತದೆ.

Mob: 9343290932

URGENT HIRING

TELECALLING EXECUTIVE

Fresher / Experienced
(Female only)
Location: Kuvempunagar, Mysore

Contact:
9980122122 / 9900486812

COMMERCIAL SITE FOR RENT / LEASE

Ring Road Facing,
CORNER SITE
at Hebbal, near KRS Road - Ring Road
Approx - 7900sq.ft.,

SUITABLE FOR :
Godowns, Two Wheeler Showroom, Used Car Showrooms, Indoor Sports Complex, Sheds, Car Detailing, Restaurants, etc.,

Call : **94492 81232**

BTL VIDYAVAHINI SCHOOL AND BTL COMPOSITE PU COLLEGE

#1, Kesare, Naidunagar Main Road, Near Naidunagar bus stand, Mysore-570007

Teacher/Lecturer Wanted

1. **Physical Education Teacher - Higher Primary School -** Male or Female Candidates can apply-Qualifications Required: C.PEd/B.Ped/Any other equivalent course/diploma or degree in the area of Physical Education or Any degree with achievement in Sports or Athletics-Freshers or Experienced candidates can apply- No language barrier-Good behaviour is a must.
2. **Economics Lecturer - Pre-University Course (PUC)-** Qualifications Required: MA in Economics/MBA/M.Com-Freshers or Experienced candidates can apply-Language Requirement: English fluency is a must-Preference given to candidates from an English medium education background-Candidates must mention the language medium of their education in their resumes mandatorily.

Interested candidates are requested to submit their resumes to the office or through email at btlvidyavahini@gmail.com by 8th June 2024. Shortlisted candidates will be invited to attend the interview after 8th June 2024.

Office Timings: Monday to Friday- 10am to 4pm
Saturday- 10am to 12pm
Emails are accepted even after working hours and on Sundays as well.

Contact Numbers: 0821-2956203, 6360812404
PU College Principal (Sri. Guruprasad): 7259673012

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ ಚಾಮರಾಜ ಮೊಹಲ್ಲಾ, ಶ್ರೀರಾಂಪುರ 2ನೇ ಹಂತ ಎಸ್ ಬಿ ಐ ಕಾಲೋನಿ ಬ್ಲಾಕ್ ನಂ 12 ಮನೆ ನಂ.7 ರಲ್ಲಿ ವಾಸವಾಗಿರುವ ಶ್ರೀ ನವೀನ್ ಕುಮಾರ್.ಬಿ ರವರ ಪತ್ನಿಯಾದ ಶ್ರೀಮತಿ ಉಷ ಹೆಚ್ ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲ್ ಸ್ವತ್ತನ್ನು ಶ್ರೀಮತಿ ಉಷ ಹೆಚ್ ರವರು ಲೇಟ್ ಚಿಕ್ಕತಾಯಮ್ಮ ಮತ್ತು ಲೇಟ್ ಕರಿಯಾಚಾರಿ ರವರ ಇಬ್ಬರೆ ಮಕ್ಕಳಾದ ಅಣ್ಣಯ್ಯಚಾರಿ, ಸಣ್ಣಪ್ಪ ಆಚಾರಿ ಮತ್ತು ಇವರ ಮಕ್ಕಳುಗಳಿಂದ ಖರೀದಿಸಿದ್ದು ಸರಿಯಷ್ಟೆ

ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ತಂಟೆ ತಕರಾರು ಹಕ್ಕು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 7 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ಧಾಖಲೆ ಸಹಿತ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮುಂದೆ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ – ತಕರಾರು ಇಲ್ಲವೆಂದು ತಿಳಿದು ವ್ಯವಹರಿಸುತ್ತಾರೆ. 7 ದಿನಗಳ ನಂತರ ಬಂದ ಯಾವುದೇ ದೂರನ್ನು ಸ್ವೀಕರಿಸಲಾಗುವುದಿಲ್ಲಾ. ನಮ್ಮ ಅಭಿಪ್ರಾಯದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವಿಧವಾದ ವ್ಯಾಜ್ಯಗಳಾಗಲಿ ದಾವೆಗಳಾಗಲಿ ಇರುವುದಿಲ್ಲ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಿಂದ ಖರೀದಿಸಬಹುದಾಗಿದೆ. ಯಾವುದೇ ದಾಖಲೆ ಇಲ್ಲದೆ ಸುಳ್ಳು ತಕರಾರನ್ನು ನೀಡಿದವರ ವಿರುದ್ಧ ಕ್ರಿಮಿನಲ್ ಕೇಸನ್ನು ದಾಖಲಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್


ಮೈಸೂರು ಸಿಟಿ ದೇವರಾಜ ಮೊಹಲ್ಲಾ ವಿಜಯನಗರ ಬಡಾವಣೆ 3ನೇ ಹಂತ 'ಬಿ' ಬ್ಲಾಕ್ ನಲ್ಲಿರುವ ಸಂಖ್ಯೆ 367 ನಂಬರ್ ಸ್ವತ್ತಿಗೆ ಚಕ್ಕುಬಂದಿ
ಪೂರ್ವಕ್ಕೆ : 366 ನೇ ನಂಬರ್ ಸ್ವತ್ತು
ಪಶ್ಚಿಮಕ್ಕೆ : 368 ನೇ ನಂಬರ್ ಸ್ವತ್ತು
ಉತ್ತರಕ್ಕೆ : 30 ಅಡಿ ರಸ್ತೆ
ದಕ್ಷಿಣಕ್ಕೆ : 352ನೇ ನಂಬರ್ ಸ್ವತ್ತು
ಈ ಮಧ್ಯೆ ಇರುವ ಪೂರ್ವ ಪಶ್ಚಿಮ : 09 ಮೀಟರ್ ಉತ್ತರ ದಕ್ಷಿಣ 12.00 ಮೀಟರ್ ಪೂರ್ತ ಸ್ವತ್ತು.

Sd/- **S. Umesh**
M.S.Vani Advocate
Madhav Bhavan # 369,
Jhansi Lakshmi Bai Road,Mysore-570005.
e-mail: umeshadvocate1@gmail.com
0821-2429670 & 3552106 Cell: 9448342677

Rajanavi Constructions & Interiors

Build Your Dream Home...

RAJANAVI CONSTRUCTIONS



ಅದೃಷ್ಟ ನಿಮ್ಮದು ಕೊಡುಗೆ ನಮ್ಮದು
ಮನ ಹಿಡಿಸುವ ಮನೆ

ಇದೀಗ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ
ರಾಜನವಿ ಕನ್‌ಸ್ಟ್ರಕ್ಷನ್ ಮತ್ತು ಇಂಟೀರಿಯರ್ಸ್



- Free Architect Design 2D, 3D, Elevation Structural and Working Drawings
- End to End Service
- Affordable Prices
- Premium Quality
- No Compromise in Quality
- Dedicated Team

NOTE: We Design only for our construction projects with free of cost

47, ನ್ಯೂ ಕಾಂತರಾಜ್ ಅರಸು ರಸ್ತೆ, ಶಾರದದೇವಿನಗರ, 3ನೇ ಕ್ರಾಸ್, 3ನೇ ಮಹಡಿ, ಅಪೋಲೋ ಫಾರ್ಮಸಿ ಬಿಲ್ಡಿಂಗ್, ಮೈಸೂರು

ಸಂಪರ್ಕಿಸಿ: **9632452999, 9108974999**



ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು